ಮಂಗಳವಾರ, ಅಕ್ಟೋಬರ್ 11, 2022 | ₹ 6.00

www.prajavani.net


/prajavani.net @prajavani /prajavani http://bit.ly/Prajavani


ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಔಷಧ ಸೇವನೆ ನಮ್ಮೆಲ್ಲರ ಅನಿವಾರ್ಯ ಕರ್ಮ. ಆದರೆ ಅದು ಶಿಸ್ತುಬದ್ಧವಾಗಿರಲಿ.





ಮಂಗಳವಾರ, ಅಕ್ಟೋಬರ್ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 281 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,911	17,241	₹52,850 (ಬೆಂಗಳೂರು)	₹60,400 (ಬೆಂಗಳೂರು)	82.40

ಬಿಜೆಪಿ: ಕುಟುಂಬಕ್ಕೊಂದೇ ಟಿಕೆಟ್

ಕುಟುಂಬ ರಾಜಕಾರಣಕ್ಕೆ 'ಸೀಮಿತ' ಕಡಿವಾಣ • ಹೊಸಬರಿಗೆ, ಅಲಕ್ಷಿತ ಸಮುದಾಯಕ್ಕೆ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರಲ್ಲಿ ನಡೆಯುವ ವಿಧಾನಸಭೆ ಚುನಾವಣೆಯನ್ನು ಗೆಲ್ಲಲೇಬೇಕು ಎಂದು ಪಣ ತೊಟ್ಟಿರುವ ಬಿಜೆಪಿ ಹಲವು ಪ್ರಯೋಗಗಳಿಗೆ ಕೈಹಾಕಿದೆ. ಟಿಕೆಟ್ ಹಂಚಿಕೆಯಲ್ಲಿ ಹೊಸಬರಿಗೆ ಆದ್ಯತೆ ನೀಡುವುದರ ಜತೆಗೆ ಕುಟುಂಬ ರಾಜಕಾರಣಕ್ಕೆ ಲಗಾಮು ಹಾಕಲು 'ಒಂದು ಕುಟುಂಬಕ್ಕೆ ಒಂದೇ ಟಿಕೆಟ್' ನೀಡಲು ತೀರ್ಮಾನಿಸಿದೆ.

'ಟಿಕೆಟ್ ಹಂಚಿಕೆಗೆ ಉತ್ತರಪ್ರದೇಶದ ಚುನಾವಣಾ ಮಾದರಿಯನ್ನು ಅನುಸರಿಸಲಾಗುವುದು. ಹೆಸರು ಕೆಡಿಸಿಕೊಂಡವರು ಮತ್ತು ಕೆಲಸ ಮಾಡದವರನ್ನು ಅಲ್ಲಿ ಕೈಬಿಡಲಾಗಿತ್ತು. ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳಲ್ಲಿರುವ ನಿರ್ಲಕ್ಷಿತ ಸಮುದಾಯಗಳಿಗೆ ಆದ್ಯತೆ ನೀಡುವ 'ಸೋಷಿಯಲ್ ಎಂಜಿನಿಯರಿಂಗ್'ನ ಪ್ರಯೋಗಕ್ಕೂ ಕೈಹಾಕಿ ಯಶಸ್ಸು ಸಾಧಿಸಲಾಗಿತ್ತು. ಅದೇ ಮಾದರಿ ಇಲ್ಲೂ ಅನುಸರಿಸಲಾಗುವುದು' ಎಂದು ಪಕ್ಷದ ಹಿರಿಯ ಪದಾಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಇಂದಿನಿಂದ 'ಜನಸಂಕಲ್ಪ ಯಾತ್ರೆ'

ಪಕ್ಷ ಮತ್ತು ಜನಸಂಘಟನೆಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ನಡೆಯಲಿರುವ 'ಜನಸಂಕಲ್ಪ ಯಾತ್ರೆ'ಗೆ ರಾಯಚೂರಿನಲ್ಲಿ ಮಂಗಳವಾರ ಚಾಲನೆ ಸಿಗಲಿದೆ.

ರಾಯಚೂರು, ಕೊಪ್ಪಳ, ವಿಜಯಪುರ, ವಿಜಯನಗರ, ಬೀದರ್, ಯಾದಗಿರಿ, ಕಲಬುರಗಿ, ಬೆಳಗಾವಿ, ಗದಗ, ಧಾರವಾಡ, ಹಾವೇರಿ, ಉತ್ತರಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣಕನ್ನಡ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬಾಗಲಕೋಟೆ, ಹಾಸನ, ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ 52 ವಿಧಾನಸಭಾ ಕ್ಷೇತ್ರಗಳಲ್ಲಿ ಯಾತ್ರೆ ಹಾದು ಹೋಗಲಿದೆ.

ಒಟ್ಟು 26 ದಿನಗಳ ಈ ಯಾತ್ರೆಯ ಮಧ್ಯೆ ಏಳು ಬೃಹತ್ ಸಮಾವೇಶಗಳು ನಡೆಯಲಿವೆ. ಈ ಯಾತ್ರೆ ಡಿಸೆಂಬರ್ 25ಕ್ಕೆ ಮುಕ್ತಾಯವಾಗಲಿದೆ ಎಂದು ಯಾತ್ರೆಯ ಸಂಯೋಜಕ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಹೇಳಿದರು. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸಾರ್ವಜನಿಕ ಸಭೆಗಳು ನಡೆಯಲಿವೆ. ಏಳು ಸಮಾವೇಶಗಳ ಪೈಕಿ ಒಂದರಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಭಾಗವಹಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ನ.10 ರಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಾಡುಪ್ರಭು ಕೆಂಪೇಗೌಡ ಪ್ರತಿಮೆ ಅನಾವರಣಗೊಳಿಸಲಿದ್ದಾರೆ ಎಂದೂ ಹೇಳಿದರು.

ಎಲ್ಲೆಲ್ಲಿ ಸಮಾವೇಶಗಳು: ಅಕ್ಟೋಬರ್ 16ಕ್ಕೆ ಮೈಸೂರಿನಲ್ಲಿ ಎಸ್‌ಸಿ ಮೋರ್ಚಾ ಸಮಾವೇಶ, ಅ.30ಕ್ಕೆ ಕಲಬುರಗಿಯಲ್ಲಿ ಒಬಿಸಿ ಮೋರ್ಚಾ ಸಮಾವೇಶ, ನ.13 ರಂದು ಹುಬ್ಬಳ್ಳಿಯಲ್ಲಿ ರೈತ ಮೋರ್ಚಾ ಸಮಾವೇಶ, ನ.27ಕ್ಕೆ ಶಿವಮೊಗ್ಗದಲ್ಲಿ ಯುವ ಮೋರ್ಚಾ ಸಮಾವೇಶ, ಡಿ.11ಕ್ಕೆ ಬಳ್ಳಾರಿಯಲ್ಲಿ ಎಸ್.ಟಿ. ಮೋರ್ಚಾ ಸಮಾವೇಶ, ಡಿ.25ಕ್ಕೆ ಬೆಂಗಳೂರಿನಲ್ಲಿ ಮಹಿಳಾ ಮೋರ್ಚಾ ಸಮಾವೇಶ, ಜನವರಿ 8ಕ್ಕೆ ವಿಜಯಪುರದಲ್ಲಿ ಅಲ್ಪಸಂಖ್ಯಾತ ಮೋರ್ಚಾದ ಸಮಾವೇಶ ನಡೆಯಲಿದೆ.

'ಹಾಲಿ ವಿಧಾನಸಭಾ ಸದಸ್ಯರ ಪೈಕಿ 70 ವರ್ಷ ದಾಟಿದವರು, ಗೆಲ್ಲುವ ಸಾಧ್ಯತೆ ಕಡಿಮೆ ಇರುವವರು ಮತ್ತು ಕೆಲಸ ಮಾಡದೇ ಕ್ಷೇತ್ರದಲ್ಲಿ ವರ್ಚಸ್ಸು ಕಳೆದುಕೊಂಡ ಶಾಸಕರಿಗೆ ಟಿಕೆಟ್ ಸಿಗುವ ಸಾಧ್ಯತೆ ಕಡಿಮೆ. ರಾಜ್ಯ ಬಿಜೆಪಿಯಲ್ಲಿ ಕೆಲವು ಸಚಿವರು ಮತ್ತು ಶಾಸಕರು ತಮ್ಮ ಮಕ್ಕಳು ಅಥವಾ ಕುಟುಂಬದ ಸದಸ್ಯರಿಗೆ ಚುನಾವಣೆಯಲ್ಲಿ ಟಿಕೆಟ್ ಪಡೆಯಲು ಕಸರತ್ತು ನಡೆಸುತ್ತಿದ್ದು, ಆ ಒತ್ತಡಗಳಿಗೆ ಮಣೆ ಹಾಕುವ ಸಾಧ್ಯತೆ ಇಲ್ಲ' ಎಂದೂ ಅವರು ಮಾಹಿತಿ ನೀಡಿದರು.

'ವಿಧಾನಸಭೆ ಚುನಾವಣೆಯಲ್ಲಿ ಒಂದೇ ಕುಟುಂಬದ ಇಬ್ಬರಿಗೆ ಪಕ್ಷ ಟಿಕೆಟ್ ಕೊಡುವುದಿಲ್ಲ. ಅಂದರೆ, ಅಣ್ಣ–ತಮ್ಮ ಅಥವಾ ತಂದೆ– ಮಕ್ಕಳಿಗೆ ಟಿಕೆಟ್ ಒಟ್ಟಿಗೇ ಸಿಗುವುದಿಲ್ಲ. ಅಪ್ಪನಿಗೆ ಕೊಟ್ಟರೆ ಮಗನಿಗೆ ಸಿಗುವುದಿಲ್ಲ. ಅಣ್ಣನಿಗೆ ಕೊಟ್ಟರೆ ತಮ್ಮನಿಗೆ ಕೊಡುವುದಿಲ್ಲ. ಹಾಲಿ ಶಾಸಕ ರಾಜಕೀಯದಿಂದ ನಿವೃತ್ತಿ ಹೊಂದಿದರೆ ಅಥವಾ ಮೃತಪಟ್ಟಿದ್ದರೆ, ಆತನ ಮಕ್ಕಳು ಅಥವಾ ಸಹೋದರರಲ್ಲಿ ಒಬ್ಬರಿಗೆ ಟಿಕೆಟ್ ನೀಡಬೇಕು ಎಂಬ ಚಿಂತನೆ ವರಿಷ್ಠರಲ್ಲಿ ನಡೆದಿದೆ' ಎಂದು ಅವರು ಹೇಳಿದರು.

'ಈ ನಿಯಮ ವಿಧಾನಸಭೆ ಚುನಾವಣೆಗೆ ಮಾತ್ರ ಅನ್ವಯವಾಗುತ್ತದೆ. ಲೋಕಸಭೆಯಲ್ಲಿ ತಂದೆ ಇದ್ದು, ವಿಧಾನ ಸಭೆಯಲ್ಲಿ ಮಗ ಇದ್ದರೆ ಅನ್ವಯವಾಗದು. ಸಚಿವೆ ಶಶಿಕಲಾ ಜೊಲ್ಲೆ ಅವರ ಪತಿ ಅಣ್ಣಾಸಾಹೇಬ ಜೊಲ್ಲೆ ಸಂಸದರು. ಇಂತಹ ಪ್ರಕರಣದಲ್ಲಿ ಈ ನಿಯಮ ಪಾಲಿಸುವ ಆಲೋಚನೆ ಇಲ್ಲ. ಆದರೆ, ಬೆಳಗಾವಿ ಜಿಲ್ಲೆಯ ಜಾರಕಿಹೊಳಿ ಸಹೋದರರು, ಬಳ್ಳಾರಿಯ ರೆಡ್ಡಿ ಸಹೋದರರಿಗೆ ಯಾವ ಮಾನದಂಡ ಅನುಸರಿಸಲಾಗುತ್ತದೆ ಎಂಬ ಬಗ್ಗೆ ಸ್ಪಷ್ಟತೆ ಮೂಡಿಲ್ಲ' ಎಂದು ತಿಳಿಸಿದರು.

8ನೇ ಪುಟ ನೋಡಿ

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪ

'ಸರ್ಕಾರ ದಿಕ್ಕು ತಪ್ಪಿಸುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಮೀಸಲಾತಿ ಪ್ರಮಾಣದ ಹೆಚ್ಚಳವನ್ನು ಅನುಷ್ಠಾನಕ್ಕೆ ತರುವ ಪ್ರಕ್ರಿಯೆಯ ವಿವರ ನೀಡದೇ ಈ ಸಮುದಾಯಗಳ ಜನರನ್ನು ರಾಜ್ಯ ಸರ್ಕಾರ ದಿಕ್ಕು ತಪ್ಪಿಸುತ್ತಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಸೋಮವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಮೀಸಲಾತಿ ಪ್ರಮಾಣ ಹೆಚ್ಚಳದ ನಿರ್ಧಾರ ತಮ್ಮದೇ ಸಾಧನೆ ಎಂದು ಬಿಜೆಪಿ ಸರ್ಕಾರ ಬಿಂಬಿಸಿಕೊಳ್ಳುತ್ತಿದೆ. ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ನೇತೃತ್ವದ ಆಯೋಗವನ್ನು ನಮ್ಮ ಸರ್ಕಾರ ನೇಮಿಸಿತ್ತು. ಆಯೋಗದ ಶಿಫಾರಸಿನಂತೆ ಮೀಸಲಾತಿ ಹೆಚ್ಚಳಕ್ಕೆ ನಿರ್ಧಾರ ಕೈಗೊಂಡಿರುವುದು ಸ್ವಾಗತಾರ್ಹ. ಆದರೆ, ಈ ತೀರ್ಮಾನದ ಅನುಷ್ಠಾನದ ಪ್ರಕ್ರಿಯೆ ದೀರ್ಘವಾದುದು ಮಾತ್ರವಲ್ಲದೆ, ಆಳುವ ಪಕ್ಷದ ರಾಜಕೀಯ ಇಚ್ಛಾಶಕ್ತಿಯನ್ನೂ ಅವಲಂಬಿಸಿದೆ. ವಿಧಾನಮಂಡಲದಲ್ಲಿ ನಿರ್ಣಯ ಕೈಗೊಂಡು ಸಂವಿಧಾನ ತಿದ್ದುಪಡಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಕಳುಹಿಸಬೇಕು. ಸಂವಿಧಾನ ತಿದ್ದುಪಡಿ ಪ್ರಸ್ತಾವ ಸಂಸತ್‌ನಲ್ಲಿ ಅಂಗೀಕಾರ ಪಡೆದು, ರಾಷ್ಟ್ರಪತಿಯವರು ಅಂಕಿತ ಹಾಕಿದ ನಂತರ ಮೀಸಲಾತಿ ಹೆಚ್ಚಳ ಜಾರಿಗೆ ಬರುತ್ತದೆ' ಎಂದು ವಿವರಿಸಿದ್ದಾರೆ.

ಇಂದಿರಾ ಸಹಾನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ ಒಟ್ಟು ಮೀಸಲಾತಿ ಪ್ರಮಾಣ ಶೇ 50 ಮೀರುವಂತಿಲ್ಲ. ಈಗ ರಾಜ್ಯದಲ್ಲಿ ಶೇ 50ರಷ್ಟು ಮೀಸಲಾತಿ ಇದೆ. ಹೆಚ್ಚಳ ಜಾರಿಯಾದರೆ ಈ ಪ್ರಮಾಣ ಶೇ 56ರಷ್ಟು ಆಗಲಿದೆ. ಈ ಮಿತಿಯನ್ನು ಮೀರದೆ ಎಸ್.ಸಿ ಮತ್ತು ಎಸ್.ಟಿ ಮೀಸಲಾತಿಯನ್ನು ಒಟ್ಟು ಶೇ 6ರಷ್ಟು ಹೆಚ್ಚಿಸಲು ಹೇಗೆ ಸಾಧ್ಯ? ಈ ಬಗ್ಗೆ ರಾಜ್ಯ ಸರ್ಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಒಕ್ಕಲಿಗರ ಮನವಿ: ಸಕಾಲದಲ್ಲಿ ನಿರ್ಣಯ– ಸಚಿವ ಅಶೋಕ

ಬೆಂಗಳೂರು: 'ಒಕ್ಕಲಿಗರು ಸೇರಿ ವಿವಿಧ ಸಮುದಾಯಗಳ ಮೀಸಲಾತಿ ಬೇಡಿಕೆಗಳಿಗೆ ಸಂಬಂಧಿಸಿದ ಎಲ್ಲ ಮನವಿಗಳನ್ನು ಗೌರವಯುತವಾಗಿ ಸ್ವೀಕರಿಸಿದ್ದು, ಪರಿಶೀಲಿಸಿ ಸೂಕ್ತ ಸಮಯದಲ್ಲಿ ಕ್ರಮತೆಗೆದುಕೊಳ್ಳುತ್ತೇವೆ' ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಒಕ್ಕಲಿಗ ಸಮುದಾಯಕ್ಕೆ ಮೀಸಲಾತಿ ಪ್ರಮಾಣವನ್ನು ಶೇ 10ಕ್ಕೆ ಏರಿಸಬೇಕು ಎಂಬ ಬೇಡಿಕೆ ಬಗ್ಗೆ ಸುದ್ದಿಗಾರರು ಗಮನ ಸೆಳೆದಾಗ, 'ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಹೇಳಿದರು.

'ಎಸ್.ಸಿ ಮತ್ತು ಎಸ್.ಟಿ ಸಮುದಾಯಗಳ ಬೇಡಿಕೆ ಬಹಳ ವರ್ಷಗಳಿಂದ ಇತ್ತು. ಇದಕ್ಕೆ ಆಯೋಗ ಮತ್ತು ಸಮಿತಿ ರಚನೆಯಾಗಿತ್ತು. ಅವುಗಳ ಶಿಫಾರಸ್ಸಿನಂತೆ ನಡೆದುಕೊಂಡಿದ್ದೇವೆ. ನಾನೀಗ ಒಂದು ಜಾತಿ ಅಥವಾ ಸಮುದಾಯದ ನಾಯಕನಲ್ಲ. ಎಲ್ಲ ಸಮುದಾಯವನ್ನು ಒಂದೇ ರೀತಿ ನೋಡಬೇಕು. ಬೊಮ್ಮಾಯಿ ಅವರು ಲಿಂಗಾಯತ, ಆದರೂ ಅವರು ಎಸ್.ಸಿ, ಎಸ್.ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸಿದ್ದಾರೆ' ಎಂದರು.

'ಲಿಂಗಾಯತರು, ಒಕ್ಕಲಿಗರು, ಈಡಿಗರೂ ಸೇರಿ ಹಲವು ಸಮುದಾಯದವರು ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಮನವಿ ಕೊಟ್ಟಿದ್ದಾರೆ' ಎಂದರು.

ಕಾಶ್ಮೀರ ಸಮಸ್ಯೆ ಪರಿಹರಿಸಿದ್ದೇನೆ: ಮೋದಿ

ಆಣಂದ್ (ಪಿಟಿಐ): ಸರ್ದಾರ್ ವಲ್ಲಭಭಾಯ್ ಪಟೇಲ್ ಅವರು ರಾಜ ಸಂಸ್ಥಾನಗಳನ್ನು ಭಾರತದೊಂದಿಗೆ ವಿಲೀನ ಮಾಡುವಲ್ಲಿ ಯಶಸ್ವಿಯಾದರು. ಆದರೆ, 'ಒಬ್ಬ ವ್ಯಕ್ತಿ'ಗೆ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗಲಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಹೇಳಿದ್ದಾರೆ. ಈ ಮೂಲಕ ಅವರು ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರ ಲಾಲ್ ನೆಹರೂ ಅವರನ್ನು ಪರೋಕ್ಷವಾಗಿ ಟೀಕಿಸಿದ್ದಾರೆ.

ದೇಶದ ಮೊದಲ ಗೃಹ ಸಚಿವ ಸರ್ದಾರ್ ಪಟೇಲ್ ಅವರ ಮಾರ್ಗ ಅನುಸರಿಸುತ್ತಿರುವ ತಾವು, ಸುದೀರ್ಘ ಕಾಲದ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸುವಲ್ಲಿ ಯಶಸ್ವಿಯಾಗಿರುವುದಾಗಿ ಮೋದಿ ಹೇಳಿಕೊಂಡಿದ್ದಾರೆ. ಕೆಲವೇ ವಾರಗಳಲ್ಲಿ ವಿಧಾನಸಭೆಗೆ ಚುನಾವಣೆ ನಡೆಯಲಿರುವ ಗುಜರಾತ್‌ನ ಆಣಂದ್‌ನಲ್ಲಿ ಸಮಾವೇಶ ಉದ್ದೇಶಿಸಿ ಅವರು ಮಾತನಾಡಿದರು.

ಸರ್ದಾರ್ ಸರೋವರ ಅಣೆಕಟ್ಟೆ ಯೋಜನೆಯನ್ನು ತಡೆಯಲು 'ನಗರ ನಕ್ಸಲರು' ಯತ್ನಿಸಿದ್ದರು ಎಂದೂ ಮೋದಿ ಆರೋಪಿಸಿದ್ದಾರೆ. ನಕ್ಸಲರು ಪ್ರತಿಪಾದಿಸುವ ವಿಚಾರಗಳ ಬಗ್ಗೆ ಸಹಾನುಭೂತಿ ಇರುವವರು ಮತ್ತು ನಿರ್ದಿಷ್ಟ ರೀತಿಯ ಸಾಮಾಜಿಕ ಹೋರಾಟಗಾರರನ್ನು ಬಣ್ಣಿಸಲು ಬಿಜೆಪಿಯು 'ನಗರ ನಕ್ಸಲ್' ಎಂಬ ಹೆಸರನ್ನು ಬಳಸುತ್ತಿದೆ.

'ಸರ್ದಾರ್ ಪಟೇಲರ ಹಾದಿಯಲ್ಲಿ ಸಾಗುತ್ತಿರುವ ನಾನು ಸರ್ದಾರ್ ಅವರ ನಾಡಿನ ಮೌಲ್ಯಗಳನ್ನು ಹೊಂದಿದ್ದೇನೆ. ಆ ಕಾರಣದಿಂದಾಗಿಯೇ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಿ ಪಟೇಲ್ ಅವರಿಗೆ ನಮನ ಸಲ್ಲಿಸಿದ್ದೇನೆ' ಎಂದು ಮೋದಿ ಹೇಳಿದರು. ಗುಜರಾತ್‌ನಲ್ಲಿ ಈ ಹಿಂದೆ ಆಳಿದ್ದ ಕಾಂಗ್ರೆಸ್ ಸರ್ಕಾರಗಳನ್ನೂ ಅವರು ಟೀಕಿಸಿದರು. ಅವರು ಅಣೆಕಟ್ಟೆಗಳನ್ನು ನಿರ್ಮಿಸಿದ್ದಾರೆ. ಆದರೆ, ನೀರು ಹರಿಸಲು ಕಾಲುವೆ ಕಟ್ಟಲಿಲ್ಲ. ಅಣೆಕಟ್ಟೆಯನ್ನು ಪ್ರದರ್ಶನಕ್ಕಾಗಿ ಕಟ್ಟಿದರೇ ಎಂದು ಮೋದಿ ಪ್ರಶ್ನಿಸಿದ್ದಾರೆ. ಈ ಕೆಲಸವನ್ನು ತಾವು ಕೈಗೆತ್ತಿಕೊಂಡು 20 ವರ್ಷಗಳಲ್ಲಿ ಮುಗಿಸಿದ್ದಾಗಿ ಹೇಳಿದರು.

ಸರ್ದಾರ್ ಸರೋವರ ಯೋಜನೆಯನ್ನು ಸ್ಥಗಿತಗೊಳಿಸಲು ಯತ್ನಿಸಿದ 'ನಗರ ನಕ್ಸಲರು' ವ್ಯಾಜ್ಯಕ್ಕೂ ಇಳಿದರು. 40–50 ವರ್ಷಗಳಷ್ಟು ನಮ್ಮ ಸಮಯ ವ್ಯರ್ಥ ಮಾಡಿದರು. ನ್ಯಾಯಾಲಯದ ಕಂಬ ಅಲೆಯುವಂತೆ ಮಾಡಿದರು. ಗುಜರಾತ್‌ನ ಬಡ ಜನರ ಹಣ ಪೋಲಾಗುವಂತೆ ಮಾಡಿದರು ಎಂದು ಮೋದಿ ಹೇಳಿದರು.

ಬಿಜೆಪಿ ಪರಿಶಿಷ್ಟರ ವಿರೋಧಿ: ರಾಹುಲ್

ಹಿರಿಯೂರು (ಚಿತ್ರದುರ್ಗ): ಪರಿಶಿಷ್ಟ ಜಾತಿ ಹಾಗೂ ಪಂಗಡದ ಮೀಸಲಾತಿ ಪ್ರಮಾಣ ಹೆಚ್ಚಿಸದೇ ಎರಡೂವರೆ ವರ್ಷ ಕಾಲಹರಣ ಮಾಡಿದ ರಾಜ್ಯ ಬಿಜೆಪಿ ಸರ್ಕಾರ, ಪರಿಶಿಷ್ಟರ ವಿರೋಧಿ ಎಂಬುದನ್ನು ನಿರೂಪಿಸಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗದ ವರದಿಯ ತ್ವರಿತ ಅನುಷ್ಠಾನವಾಗಲಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಗ್ರಹಿಸಿದರು. 5

ನಾಗರಾಳ: ಮಂಗಳಮುಖಿಯರ ಸ್ವ–ಉದ್ಯೋಗಕ್ಕೆ ಆರ್ಥಿಕ ನೆರವು

• ಎಚ್.ಎಸ್.ಘಂಟಿ

ಗುಳೇದಗುಡ್ಡ: ತಾಲ್ಲೂಕಿನ ನಾಗರಾಳ ಎಸ್.ಪಿ ಗ್ರಾಮದಲ್ಲಿ ತೃತೀಯ ಲಿಂಗಿಗಳನ್ನು ಸ್ವಸಹಾಯ ಸಂಘದ ಸದಸ್ಯರನ್ನಾಗಿಸಿ, ಸ್ವಯಂ ಉದ್ಯೋಗಕ್ಕಾಗಿ ಸಾಲ ನೀಡಿರುವ ಜಿಲ್ಲಾ ಪಂಚಾಯಿತಿ, ಅವರು ಸ್ವಾವಲಂಬಿಗಳಾಗಲು ಅವಕಾಶ ಮಾಡಿಕೊಟ್ಟಿದೆ.

ಸಂಘದಲ್ಲಿ ಇಂತಹ 20 ಸದಸ್ಯರಿದ್ದು, ಮೇಕೆ ಸಾಕಾಣಿಕೆ ಮಾಡುತ್ತಿದ್ದಾರೆ. ಅವರು ಸಾಲವನ್ನೂ ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡುತ್ತಿದ್ದಾರೆ.

ಬಾಗಲಕೋಟೆ ಜಿ.ಪಂ ಸಿಇಒ ಟಿ. ಭೂಬಾಲನ್, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ನಿರ್ವಹಣೆ ಮಿಷನ್ (ಎನ್‌ಆರ್‌ಎಲ್‌ಎಂ) ತಾಲ್ಲೂಕು ಪ್ರೋಗ್ರಾಮರ್ ಗುರುಲಿಂಗಯ್ಯ ಗೌಡರ ಅವರು ಜಿಲ್ಲಾ ಪಂಚಾಯಿತಿಯಲ್ಲಿ ತೃತೀಯಲಿಂಗಿಗಳ ಸಭೆ ನಡೆಸಿ, ನಾಗರಾಳ ಎಸ್.ಪಿ ಗ್ರಾಮದಲ್ಲಿ ತೃತೀಯ ಲಿಂಗಿಗಳ ಮನವೊಲಿಸಿ ಅವರದ್ದೇ ಮಂಗಳಾದೇವಿ ಸ್ತ್ರೀಶಕ್ತಿ ಸ್ವ ಸಹಾಯ ಸಂಘವನ್ನು ರಚಿಸಿದರು. ಬ್ಯಾಂಕ್ ಖಾತೆ ಸಹ ತೆರೆದ ಅವರು ಎನ್‌ಆರ್‌ಎಲ್‌ಎಂ ಯೋಜನೆಯಡಿ ಕಮ್ಯುನಿಟಿ ಬಂಡವಾಳ ನಿಧಿಯಾಗಿ ₹ 1.50 ಲಕ್ಷವನ್ನು ಶೂನ್ಯ ಬಡ್ಡಿ ದರದಲ್ಲಿ ಕಳೆದ ಮೇ ತಿಂಗಳಲ್ಲಿ ನೀಡಿದ್ದಾರೆ.

ಆಗಿನ ಬಾಗಲಕೋಟೆಯ ಯೋಜನಾ ಅಭಿವೃದ್ಧಿ ಅಧಿಕಾರಿ ಎಂ.ವಿ. ಚಳಗೇರಿ ಅವರೇ ಖುದ್ದಾಗಿ ಸಂಘದ ಸದಸ್ಯರಿಗೆ ಮೇಕೆಗಳನ್ನು ಖರೀದಿಸಿ ಕೊಟ್ಟಿದ್ದರು. ಪಶು ಇಲಾಖೆಯಿಂದ ಎಲ್ಲ ಮೇಕೆಗಳಿಗೆ ವಿಮೆ ಮಾಡಿಸಲಾಗಿದೆ. ಮೇಕೆ ಸಾಕಾಣಿಕೆಗೆ ಬೇಕಾದ ಶೆಡ್ ಅನ್ನು ನರೇಗಾ ಯೋಜನೆಯಡಿ ₹ 68 ಸಾವಿರ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದ್ದು, ನಾಲ್ಕು ಶೆಡ್‌ಗಳ ನಿರ್ಮಾಣ ಪೂರ್ಣಗೊಂಡಿದೆ.



ಮಂಗಳಾದೇವಿ ಸ್ತ್ರೀಶಕ್ತಿ ಸ್ವ ಸಹಾಯ ಸಂಘದ ಸದಸ್ಯರು ಎನ್‌ಆರ್‌ಎಲ್‌ಎಂ ಯೋಜನೆಯಡಿ ನೀಡಿದ ಸಾಲದಲ್ಲಿ ಖರೀದಿಸಿದ ಮೇಕೆ ಹಾಗೂ ನರೇಗಾ ಯೋಜನೆಯಡಿ ನಿರ್ಮಿಸಿದ ಮೇಕೆ ಶೆಡ್

> **ಮೇಕೆ ಸಾಕಾಣಿಕೆಗೆ ಸಾಲ ನೀಡಿರುವುದರಿಂದ ನಮ್ಮ ಜೀವನಕ್ಕೆ ನೆಲೆ ಸಿಕ್ಕಂತಾಗಿದೆ. ಇನ್ನಷ್ಟು ಸೌಲಭ್ಯ ನೀಡಬೇಕು, ಸಾಲವನ್ನು ಸರಿಯಾಗಿ ಕಟ್ಟುತ್ತೇವೆ**
> **ಯಮನಪ್ಪ ಮಲ್ಲಪ್ಪ ಚಿಕ್ಕದ್ಯಾವಪ್ಪನವರ,** ಫಲಾನುಭವಿ



ಕಾಸರಗೋಡು ಜಿಲ್ಲೆಯ ಅನಂತಪುರದ ಅನಂತಪದ್ಮನಾಭ ದೇವಾಲಯದ ದೇವರ ಮೊಸಳೆಯ ಅಂತಿಮ ಸಂಸ್ಕಾರದಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು – ಎಎಫ್‌ಪಿ ಚಿತ್ರ

'ದೇವರ ಮೊಸಳೆ'ಗೆ ವಿದಾಯ

• ವೀಜಿ ಕಾಸರಗೋಡು

ಕಾಸರಗೋಡು: ಜಿಲ್ಲೆಯ ಕುಂಬಳೆ ಬಳಿಯ ಸರೋವರ ಕ್ಷೇತ್ರ ಅನಂತಪುರದ 'ದೇವರ ಮೊಸಳೆ' 'ಬಬಿಯಾ' ಭಾನುವಾರ ತಡರಾತ್ರಿ ಮೃತಪಟ್ಟಿದ್ದು, ಸಕಲ ಧಾರ್ಮಿಕ ವಿಧಿ ವಿಧಾನದಂತೆ ಭಕ್ತರ ಸಮ್ಮುಖದಲ್ಲಿ ಸೋಮವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸರೋವರದ ಮಧ್ಯಭಾಗದಲ್ಲಿ ಈ ದೇವಸ್ಥಾನ ಇದೆ. ಸಹಾಯಕ ಅರ್ಚಕರು ಪೂಜೆಯ ನಂತರ ಈ ಸರೋವರಕ್ಕೆ ಬಂದು 'ಬಬಿಯಾ' ಎಂದು ಕರೆಯುತ್ತಿದ್ದರು. ಆಗ ಅಲ್ಲಿಗೆ ಬರುತ್ತಿದ್ದ ಮೊಸಳೆ, ಅವರು ಕೊಡುವ ಪ್ರಸಾದ ಸೇವಿಸುತ್ತಿತ್ತು.

'ಸುಮಾರು 80 ವರ್ಷದ ಈ ಮೊಸಳೆ ಸರೋವರದಲ್ಲಿ ತಂಗಿದ್ದು, ದೇವಸ್ಥಾನಕ್ಕೆ ಬರುವ ಭಕ್ತರಿಗೆ ಪ್ರಮುಖ ಆಕರ್ಷಣೆಯಾಗಿತ್ತು. ದೇವಾಲಯದ ಸೇವೆಗಳಲ್ಲಿ ಮೊಸಳೆಗೆ ನೈವೇದ್ಯವೂ ಪ್ರಧಾನವಾಗಿತ್ತು. ಸರೋವರದ ಸುತ್ತ ಜಾನುವಾರುಗಳು, ಹಕ್ಕಿಗಳು ಸ್ವಚ್ಛಂದವಾಗಿ ವಿಹರಿಸುತ್ತಿದ್ದು, ಯಾವ ಪ್ರಾಣಿಗೂ ಈ ಮೊಸಳೆ ಈವರೆಗೆ ತೊಂದರೆ ಮಾಡಿಲ್ಲ' ಎಂದು ದೇವಾಲಯದ ನಿವೃತ್ತ ಪರಿಚಾರಕ ಚಂದ್ರಶೇಖರ್ ಹೇಳಿದರು.

ಅನಾರೋಗ್ಯ: ಎರಡು ದಿನಗಳಿಂದ ಮಂಕಾಗಿದ್ದ ಬಬಿಯಾ, ಆಹಾರ ಸೇವಿಸಿರಲಿಲ್ಲ. ದೇವಾಲಯದ ಆಡಳಿತಾಧಿಕಾರಿ, ಪಶುವೈದ್ಯರನ್ನು ಕರೆಯಿಸಿ ಪರಿಶೀಲನೆ ನಡೆಸಿದಾಗ, ಆಹಾರ ಸೇವಿಸದಿರುವುದೇ ಅಸ್ವಸ್ಥತೆಗೆ ಕಾರಣ ಎಂದು ವೈದ್ಯರು ತಿಳಿಸಿದ್ದರು. ಸಾಮಾನ್ಯವಾಗಿ ಕೆರೆಯ ಗುಹೆಯೊಳಗೆ ಇರುತ್ತಿದ್ದ ಮೊಸಳೆ, ದೇವಾಲಯದ ಅಡುಗೆ ಆಲಯದ ಬಳಿಯ ಕೆರೆಯತ್ತ ಬಂದು ಮಲಗಿಕೊಂಡಿತ್ತು. ಭಾನುವಾರ ರಾತ್ರಿ ಮಗುಚಿ ಬಿದ್ದುಕೊಂಡ ಸ್ಥಿತಿಯಲ್ಲಿ ಇದೇ ಜಾಗದಲ್ಲಿ ಮೊಸಳೆಯ ಕಳೇಬರ ಪತ್ತೆಯಾಗಿತ್ತು ಎಂದು ದೇವಾಲಯದ ಆಡಳಿತ ಸಮಿತಿ ಪದಾಧಿಕಾರಿಗಳು ತಿಳಿಸಿದರು.

ಅಂತಿಮ ದರ್ಶನ: ಅನಂತಪುರ ದೇವಾಲಯದ ಮುಂಭಾಗದಲ್ಲಿ ಶವಪಟ್ಟಿಗೆಯಲ್ಲಿ ಬಬಿಯಾ ಕಳೇಬರ ಇರಿಸಿ ಸೋಮವಾರ ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗಿತ್ತು.

8ನೇ ಪುಟ ನೋಡಿ

ಪಿಯು ಪರೀಕ್ಷಾ ಶುಲ್ಕ: 31ರವರೆಗೆ ಅವಕಾಶ

ಬೆಂಗಳೂರು: ಮಾರ್ಚ್ 2023ರಲ್ಲಿ ನಡೆಯುವ ದ್ವಿತೀಯ ಪಿಯು ಪರೀಕ್ಷೆ ತೆಗೆದುಕೊಳ್ಳುವ ಪುನರಾವರ್ತಿತ, ಫಲಿತಾಂಶ ತಿರಸ್ಕರಿಸಿದ್ದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಭರಿಸಲು ಅ.31ರವರೆಗೆ ಗಡುವು ವಿಸ್ತರಿಸಲಾಗಿದೆ.

ದಿನಕ್ಕೆ ₹ 50ರಂತೆ ದಂಡ ಶುಲ್ಕದೊಂದಿಗೆ ನ.15ರವರೆಗೂ ಶುಲ್ಕ ಪಾವತಿಸಬಹುದು ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಪ್ರಕಟಿಸಿದೆ. ಈ ಮೊದಲು ಶುಲ್ಕ ಭರಿಸಲು ಅ.10 ಕೊನೆಯ ದಿನವಾಗಿತ್ತು.

ಖಾಸಗಿಯಾಗಿ ಪಿಯು ಓದಲು ಇಚ್ಛಿಸುವವರು ಸರ್ಕಾರಿ ಪಿಯು ಕಾಲೇಜುಗಳಲ್ಲಿ ಅ.10ರಿಂದ ಹೆಸರು ನೋಂದಾಯಿಸಿ, ಪರೀಕ್ಷಾ ಶುಲ್ಕ ಪಾವತಿಸಲು ಅನುಮತಿ ನೀಡಲಾಗಿದೆ. ಅಂತಹ ವಿದ್ಯಾರ್ಥಿಗಳ ವಯಸ್ಸು ಮಾರ್ಚ್ 31, 2023ಕ್ಕೆ 17 ವರ್ಷ ತುಂಬಬೇಕು. 2022ರ ಜೂನ್ ಅಥವಾ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ತೇರ್ಗಡೆಯಾಗಿರಬೇಕು. ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ವಿಷಯಗಳನ್ನು ಆಯ್ಕೆ ಮಾಡಿಕೊಂಡು, ಅ.31ರ ಒಳಗೆ ಶುಲ್ಕ ಪಾವತಿಸಬೇಕು ಎಂದೂ ಇಲಾಖೆ ತಿಳಿಸಿದೆ.

ಎಸ್‌ಪಿ ನಾಯಕ ಮುಲಾಯಂ ನಿಧನ



ಗುರುಗ್ರಾಮ (ಪಿಟಿಐ): ಸಮಾಜವಾದಿ ಪಕ್ಷದ ನಾಯಕ ಮುಲಾಯಂ ಸಿಂಗ್ ಯಾದವ್ (82) ಅವರು ಗುರುಗ್ರಾಮದ ಮೇದಾಂತ ಆಸ್ಪತ್ರೆಯಲ್ಲಿ ಸೋಮವಾರ ಬೆಳಿಗ್ಗೆ ನಿಧನರಾದರು. 8

ಕ್ರಿಕೆಟ್: ಸರಣಿ ಕಿರೀಟಕ್ಕಾಗಿ ಹಣಾಹಣಿ ಇಂದು

ನವದೆಹಲಿ (ಪಿಟಿಐ): ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳು ಮಂಗಳವಾರ ಇಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯ ಕೊನೆಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಉಭಯ ತಂಡಗಳು 1–1ರಿಂದ ಸಮಬಲ ಸಾಧಿಸಿದ್ದು, ಕೊನೆಯ ಪಂದ್ಯದಲ್ಲಿ ಜಯಿಸಿದವರಿಗೆ ಸರಣಿ ಕಿರೀಟ ಒಲಿಯಲಿದೆ. 10

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶಿಕ್ಷಣ ಇಲಾಖೆ: ನೇಮಕದಲ್ಲಿ ಅಕ್ರಮ ತಡೆ ಉದ್ದೇಶ

ಬೋಧಕೇತರರ ವರ್ಗಕ್ಕೆ ನಿಯಮ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಶಾಲಾ ಶಿಕ್ಷಣ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಗಳ ವಿವಿಧ ಕಚೇರಿಗಳಲ್ಲಿ ಐದು ವರ್ಷಕ್ಕಿಂತ ಹೆಚ್ಚಿನ ಅವಧಿ ಒಂದೇ ಸ್ಥಳದಲ್ಲಿರುವ ಬೋಧಕೇತರ ಸಿಬ್ಬಂದಿ ವರ್ಗಾವಣೆಗೆ ಹೊಸ ನಿಯಮಗಳನ್ನು ರೂಪಿಸಲು ಸರ್ಕಾರ ಮುಂದಾಗಿದೆ.

ಇತ್ತೀಚೆಗೆ ಪತ್ತೆಯಾದ ಶಿಕ್ಷಕರ ನೇಮಕಾತಿ ಅಕ್ರಮ ಹಾಗೂ ಕೆಲವು ಯೋಜನೆಗಳು ಸಮರ್ಪಕವಾಗಿ ಕಾರ್ಯಗತವಾಗದೇ ಇರಲು ಒಂದೇ ಸ್ಥಳದಲ್ಲಿ ಬಹಳ ವರ್ಷ ಇರುವ ನೌಕರರೇ ಕಾರಣ ಎನ್ನುವುದನ್ನು ಗುರುತಿಸಿರುವ ಇಲಾಖೆಯು ಇಂತಹದೊಂದು ಉಪಕ್ರಮಕ್ಕೆ ನಿರ್ಧರಿಸಿದೆ.

2012–13, 2015, 2017 ಮತ್ತು 2018ರಲ್ಲಿ ಕೆಲವರು ಅಕ್ರಮವಾಗಿ ಶಿಕ್ಷಕರ ಹುದ್ದೆ ಪಡೆಯುವಲ್ಲಿ ಒಂದೇ ಸ್ಥಳದಲ್ಲಿರುವ ಅಧಿಕಾರಿ, ಸಿಬ್ಬಂದಿಯ ಪಾತ್ರವಿರುವುದು ಸಿಐಡಿ ತನಿಖೆಯಿಂದ ದೃಢಪಟ್ಟಿತ್ತು. ಇಂತಹ ಅಕ್ರಮ ಮತ್ತೆ ಮರುಕಳಿಸುವುದನ್ನು ತಪ್ಪಿಸುವ ಉದ್ದೇಶವು ಇಲಾಖೆಯದ್ದಾಗಿದೆ.

> **ಬೋಧಕೇತರ ಅಧಿಕಾರಿಗಳು, ಸಿಬ್ಬಂದಿ ವರ್ಗಾವಣೆಗೆ ಹೊಸ ಮಾರ್ಗಸೂಚಿ ಸಿದ್ಧಪಡಿಸಲಾಗಿದೆ. ಇದರಿಂದ ನೇಮಕಾತಿ ಪ್ರಕ್ರಿಯೆ ಮತ್ತು ಆಡಳಿತದ ಮತ್ತಷ್ಟು ಪಾರದರ್ಶಕವಾಗಲಿದೆ**
> **ಬಿ.ಸಿ.ನಾಗೇಶ್,** ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ

ಪ್ರಜಾವಾಣಿ ವಿಶೇಷ

8ನೇ ಪುಟ ನೋಡಿ

ಮಹೇಶ್ ಬಾಬು ನೂತನ ಕುಲಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರನ್ನಾಗಿ ಮಹೇಶ್ ಬಾಬು ಅವರನ್ನು ನೇಮಿಸಲಾಗಿದೆ. ಮಹೇಶ್‌ಬಾಬು ಅವರು ಇದುವರೆಗೆ ವಿಜಯನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಓಲಾ – ಉಬರ್ ಆ್ಯಪ್ ಬಳಕೆ ಮಾಡುತ್ತಿದ್ದ ಚಾಲಕರ ವಿರುದ್ಧ ಸಾರಿಗೆ ಇಲಾಖೆ ಕಾರ್ಯಾಚರಣೆ

ಆಟೊ ಚಾಲಕರಿಗೆ ದಂಡ, ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಲಾ, ಉಬರ್ ಮತ್ತು ರ್‍ಯಾಪಿಡೊ ಕಂಪನಿಗಳು ಆಟೊರಿಕ್ಷಾ ಸೇವೆ ಮುಂದುವರಿಸಿದ್ದು, ಇತ್ತ ಆ್ಯಪ್ ಆಧಾರಿತ ಸೇವೆ ಒದಗಿಸುತ್ತಿದ್ದ ಆಟೊರಿಕ್ಷಾ ಚಾಲಕರಿಗೆ ಸಾರಿಗೆ ಇಲಾಖೆ ಅಧಿಕಾರಿಗಳು ದಂಡ ವಿಧಿಸಿದರು. ಇದರಿಂದ ಆಕ್ರೋಶಗೊಂಡ ಚಾಲಕರು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಬೇಡಿಕೆ ಆಧಾರಿತ ಸಾರಿಗೆ ತಂತ್ರಜ್ಞಾನ ನಿಯಮ –2016 ಪ್ರಕಾರ ಟ್ಯಾಕ್ಸಿ ಸೇವೆ ಒದಗಿಸುತ್ತಿರುವ ಕಂಪನಿಗಳು ರಿಕ್ಷಾ ಸೇವೆ ನೀಡುವಂತಿಲ್ಲ. ಕೂಡಲೇ ಈ ಸೇವೆ ಸ್ಥಗಿತಗೊಳಿಸಬೇಕು ಎಂದು ಮೂರು ಕಂಪನಿಗಳಿಗೆ ಅ.6ರಂದು ಸಾರಿಗೆ ಇಲಾಖೆ ನೋಟಿಸ್ ನೀಡಿತ್ತು. ಸಾರಿಗೆ ಇಲಾಖೆ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ದರ ವಸೂಲಿ ಮಾಡಬಾರದು ಎಂದೂ ನೋಟಿಸ್‌ನಲ್ಲಿ ತಿಳಿಸಿತ್ತು.

ಆದರೆ, ಆಟೊರಿಕ್ಷಾ ಸೇವೆ ಮತ್ತು ದುಬಾರಿ ದರ ವಸೂಲಿ ಸೋಮವಾರವೂ ಮುಂದುವರಿದಿತ್ತು. ಆ್ಯಪ್ ಆಧಾರಿತ ಸೇವೆ ಒದಗಿಸುತ್ತಿದ್ದ ಆಟೊರಿಕ್ಷಾಗಳನ್ನು ಸೋಮವಾರ ಸಾರಿಗೆ ಇಲಾಖೆ ಅಧಿಕಾರಿಗಳು ಅಲ್ಲಲ್ಲಿ ಅಡ್ಡಗಟ್ಟಿ ದಂಡ ವಿಧಿಸಿದರು. ನಗರದ ಹಲವೆಡೆ ಕಾರ್ಯಾಚರಣೆ ನಡೆಸಿ, ಕೆಲ ಆಟೊಗಳನ್ನು ಜಪ್ತಿ ಮಾಡಿದರು.

ಕೆ.ಆರ್.ಪುರ, ಎಲೆಕ್ಟ್ರಾನಿಕ್ ಸಿಟಿ, ಜಯನಗರ, ರಾಜಾಜಿನಗರ ಸೇರಿ ಹಲವೆಡೆ ಆ್ಯಪ್ ಬಳಕೆ ಮಾಡಿ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ಆಟೊರಿಕ್ಷಾಗಳನ್ನು ತಡೆದು ದಂಡ ವಿಧಿಸಿದರು.

ಕೆಲವೆಡೆ ಸಾರಿಗೆ ಅಧಿಕಾರಿಗಳು ಪ್ರಯಾಣಿಕರ ಸೋಗಿನಲ್ಲಿ ಓಲಾ ಮತ್ತು ಉಬರ್ ಆ್ಯಪ್ ಮೂಲಕ ಆಟೊರಿಕ್ಷಾಗಳನ್ನು ಕಾಯ್ದಿರಿಸಿದರು. ಪ್ರಯಾಣಿಕರೆಂದು ಭಾವಿಸಿ ಹತ್ತಿಸಿಕೊಳ್ಳಲು ಬಂದ ಆಟೊ ಚಾಲಕರನ್ನು ಹಿಡಿದು ದಂಡ ಹಾಕಿದರು.

'ಆ್ಯಪ್‌ಗಳನ್ನು ಬಳಕೆ ಮಾಡದಂತೆ ಸೂಚಿಸಿದ್ದರೂ, ಬಳಕೆ ಮಾಡುತ್ತಿದ್ದಾರೆ. ನಿಯಮ ಉಲ್ಲಂಘಿಸಿದವರಿಗೆ ಸಾರಿಗೆ ಆಯುಕ್ತರ ಸೂಚನೆಯಂತೆ ದಂಡ ವಿಧಿಸಲಾಗುತ್ತಿದೆ' ಎಂದು ಇಲಾಖೆ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.



ಜಯನಗರದಲ್ಲಿ ಆಟೊ ಚಾಲಕರು ದಿಢೀರ್ ಪ್ರತಿಭಟನೆ ನಡೆಸಿದರು

ಇಂದು ಸಭೆ

ಅಗ್ರಿಗೇಟರ್ ಕಂಪನಿಗಳು ಉತ್ತರ ನೀಡಿದ ಬೆನ್ನಲ್ಲೇ ಕಂಪನಿಗಳ ಪ್ರತಿನಿಧಿಗಳ ಮತ್ತು ಅಧಿಕಾರಿಗಳ ಸಭೆಯನ್ನು ಮಂಗಳವಾರ ಮಧ್ಯಾಹ್ನ 2.30ಕ್ಕೆ ಸಾರಿಗೆ ಇಲಾಖೆ ಕರೆದಿದೆ.

'ಸಭೆಯ ನಡಾವಳಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಕಂಪನಿಗಳು ಹೆಚ್ಚುವರಿ ದರ ವಸೂಲಿ ಮಾಡುತ್ತಿರುವುದನ್ನು ನ್ಯಾಯಾಲಯದ ಗಮನಕ್ಕೆ ತರಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸಾರಿಗೆ ಕಚೇರಿಗೆ ಮುತ್ತಿಗೆ: ಚಾಲಕರ ಆಕ್ರೋಶ

ಜಯನಗರದಲ್ಲಿ ದಿಢೀರ್ ರಸ್ತೆಗಿಳಿದ ಚಾಲಕರು ಸಾರಿಗೆ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ದಂಡ ವಿಧಿಸಿದ ಸಾರಿಗೆ ಇಲಾಖೆಯ ಕ್ರಮ ಆಟೊರಿಕ್ಷಾ ಚಾಲಕರನ್ನು ಕೆರಳುವಂತೆ ಮಾಡಿತು.

ನೂರಾರು ಆಟೊ ರಿಕ್ಷಾಗಳು ಜಮಾವಣೆಗೊಂಡಿದ್ದರಿಂದ ಜಯನಗರ ಪ್ರಾದೇಶಿಕ ಸಾರಿಗೆ ಕಚೇರಿ ಎದುರು ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಇಡೀ ಪ್ರದೇಶದಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಸ್ಥಳಕ್ಕೆ ಬಂದ ಪೊಲೀಸರ ಜತೆಗೂ ಚಾಲಕರು ವಾಗ್ವಾದ ನಡೆಸಿದರು. ಶಾಂತ ರೀತಿಯಲ್ಲಿ ಪ್ರತಿಭಟನೆ ನಡೆಸದಿದ್ದರೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಪೊಲೀಸ್ ಅಧಿಕಾರಿಗಳು ಎಚ್ಚರಿಸಿದರು.

'ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳದೆ ಬಡ ಚಾಲಕರ ಹೊಟ್ಟೆ ಮೇಲೆ ಹೊಡೆಯಲು ಸಾರಿಗೆ ಇಲಾಖೆ ಮುಂದಾಗಿದೆ. ಓಲಾ ಮತ್ತು ಉಬರ್ ಕಂಪನಿಗಳು ಮಾಡುವ ತಪ್ಪಿಗೆ ಚಾಲಕರಿಗೆ ಶಿಕ್ಷೆ ನೀಡುವುದು ಸರಿಯಲ್ಲ. ದರ ನಿಗದಿ ವಿಷಯದಲ್ಲಿ ಚಾಲಕರ ಪಾತ್ರ ಏನೂ ಇರುವುದಿಲ್ಲ. ಇದನ್ನು ಅರ್ಥ ಮಾಡಿಕೊಳ್ಳದ ಅಧಿಕಾರಿಗಳು ಚಾಲಕರನ್ನು ಕಳ್ಳರಂತೆ ನೋಡುತ್ತಿದ್ದಾರೆ' ಎಂದು ದೂರಿದರು.

'ಚಾಲಕರು ₹5 ಸಾವಿರದಿಂದ ₹10 ಸಾವಿರ ದಂಡ ಪಾವತಿಸಬೇಕಾಗಿದೆ. ಪ್ರಯಾಣಿಕರ ಸೋಗಿನಲ್ಲಿ ಆ್ಯಪ್‌ಗಳನ್ನು ಬಳಕೆ ಮಾಡಿ ಚಾಲಕರನ್ನು ಹಿಡಿದಿದ್ದಾರೆ. ಇದು ಸರಿಯಾದ ಕ್ರಮ ಅಲ್ಲ' ಎಂದು ಆಟೊ ಚಾಲಕರ ಒಕ್ಕೂಟದ ರುದ್ರಮೂರ್ತಿ ಹೇಳಿದರು.

ಕಾನೂನು ಉಲ್ಲಂಘಿಸಿಲ್ಲ: ಕಂಪನಿಗಳ ಉತ್ತರ

ಸಾರಿಗೆ ಇಲಾಖೆ ನೋಟಿಸ್‌ಗೆ ಓಲಾ ಮತ್ತು ಉಬರ್ ಕಂಪನಿಗಳು ಉತ್ತರ ನೀಡಿದ್ದು, 'ಕಾನೂನು ಉಲ್ಲಂಘನೆ ಮಾಡಿಲ್ಲ' ಎಂದು ಸ್ಪಷ್ಟಪಡಿಸಿವೆ.

'ಪರವಾನಗಿ ನೀಡುವಾಗ ವಿಧಿಸಲಾಗಿರುವ ಷರತ್ತುಗಳ ಆಧಾರದಲ್ಲಿಯೇ ಸೇವೆ ನೀಡಲಾಗುತ್ತಿದೆ. ಸಭೆ ಕರೆದರೆ ಹೆಚ್ಚಿನ ವಿವರ ನೀಡಲಾಗುವುದು ಎಂದು ತಿಳಿಸಿವೆ. ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂಬುದನ್ನು ಕಾನೂನು ಕೋಶದ ಮೂಲಕ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಅ.16ಕ್ಕೆ ಕೆ.ಆರ್.ಪೇಟೆಗೆ ಯೋಗಿ

ಬೆಂಗಳೂರು: ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಇದೇ 16ರಂದು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು ಸಮೀಪದ ಅಂಬಿಗರಹಳ್ಳಿಯಲ್ಲಿ ನಡೆಯುವ ಕುಂಭಮೇಳದಲ್ಲಿ ಭಾಗವಹಿಸಲಿದ್ದಾರೆ.



ಯೋಗಿ ಆದಿತ್ಯನಾಥ

ಕಾವೇರಿ, ಲಕ್ಷ್ಮಣತೀರ್ಥ ಮತ್ತು ಹೇಮಾವತಿ ನದಿಗಳ ಸಂಗಮ ಸ್ಥಳವಾದ ಇಲ್ಲಿ ಇದೇ 14ರಿಂದ ಮೂರು ದಿನಗಳ ಕುಂಭಮೇಳ ನಡೆಯಲಿದೆ.

ಆದಿಚುಂಚನಗಿರಿ ಮಠದ ಮುಂದಾಳತ್ವದಲ್ಲಿ ಕುಂಭಮೇಳ ನಡೆಯುತ್ತಿದ್ದು, ಇದಕ್ಕೆ ಯೋಗಿ ಅವರನ್ನು ಆಹ್ವಾನಿಸಲಾಗಿದೆ.

ಆದಿಚುಂಚನಗಿರಿ ಮಠ ಮತ್ತು ಯೋಗಿ ಆದಿತ್ಯನಾಥ ಅವರು ಮಹಂತರಾಗಿರುವ ಗೋರಕ್ಷ ಪೀಠವೂ ನಾಥ ಸಂಪ್ರದಾಯಕ್ಕೆ ಸೇರಿವೆ. ಒಕ್ಕಲಿಗರ ಸಂಖ್ಯೆ ಹೆಚ್ಚಾಗಿರುವ ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಯೋಗಿಯವರ ಭೇಟಿಯಿಂದ ಪಕ್ಷಕ್ಕೆ ಲಾಭ ಆಗಬಹುದು ಎಂಬುದು ಬಿಜೆಪಿಯ ಲೆಕ್ಕಾಚಾರವಾಗಿದೆ. ಆದರೆ, ಪಕ್ಷದ ವತಿಯಿಂದ ಯಾವುದೇ ಕಾರ್ಯಕ್ರಮ ಹಮ್ಮಿಕೊಂಡಿಲ್ಲ.



ನಗರದಲ್ಲಿ ಇಂದು

ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪ್ರದಾನ: ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನ: ವಿ.ಸುನಿಲ್‌ಕುಮಾರ್, ಸ್ಮರಣ ಸಂಚಿಕೆ ಬಿಡುಗಡೆ: ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11

ಐವತ್ತೇಳನೆಯ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಬಿ.ಸಿ.ಪಾಟೀಲ, ಅತಿಥಿಗಳು: ಪಿ. ಚಂದ್ರಶೇಖರ, ಅಧ್ಯಕ್ಷತೆ: ಕೆ.ಸಿ. ನಾರಾಯಣಸ್ವಾಮಿ, ಆಯೋಜನೆ: ಕೃಷಿ ವಿಶ್ವವಿದ್ಯಾಲಯ, ಸ್ಥಳ: ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಳಿಗ್ಗೆ 10.30

ಅಂತರರಾಷ್ಟ್ರೀಯ ಹೆಣ್ಣು ಮಕ್ಕಳ ದಿನ: ಮುಖ್ಯ ಅತಿಥಿ: ವರ್ಗೀಸ್ ಪಲ್ಲಿಪುರಂ, ಎಚ್.ಕೆ. ಅಶೋಕ, ಎಚ್.ಆರ್. ಸುಧಾ, ಮುಮ್ತಾಜ್ ಹುಂಟಿಯಾರ್, ಆಯೋಜನೆ: ಬೋಸ್ಕೊ ಬೆಂಗಳೂರು, ಸ್ಥಳ: ಬೋಸ್ಕೊ ರೈನ್ಬೊ ಹೋಮ್, ವಿಲ್ಸನ್ ಗಾರ್ಡನ್, ಬೆಳಿಗ್ಗೆ 10





ಜಯಪ್ರಕಾಶ ನಾರಾಯಣ

ಜಯಪ್ರಕಾಶ್ ನಾರಾಯಣ–121 ಹಾಗೂ ಜೆ.ಪಿ. ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಪಿಜಿಆರ್ ಸಿಂಧ್ಯಾ, ಪ್ರಶಸ್ತಿ ಪ್ರದಾನ: ಬಿ.ಎಲ್.ಶಂಕರ್, ಅಧ್ಯಕ್ಷತೆ: ಬಿ.ಆರ್.ಪಾಟೀಲ, ಅತಿಥಿಗಳು: ಎಸ್. ಸುರೇಶ್‌ಕುಮಾರ್, ಎಂ.ಪಿ.ನಾಡಗೌಡ, ಎಚ್. ಕೆ.ವಿವೇಕಾನಂದ, ಎಂ.ವಿ.ಗಣೇಶ, ಆಯೋಜನೆ: ಭಾರತ ಯಾತ್ರಾ ಕೇಂದ್ರ ಮತ್ತು ಲೋಕನಾಯಕ ಜೆ.ಪಿ. ವಿಚಾರ ವೇದಿಕೆ, ಸ್ಥಳ: ಚಿತ್ರಕಲಾ ಪರಿಷತ್ತು, ಸಂಜೆ 6

ಮಾರ್ಗದರ್ಶಕ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತರು: ಅಶೋಕ್ ಸೂಟಾ, ಭವಿಶ್ ಅಗರ್ವಾಲ್, ಕ್ಯಾಪ್ಟನ್ ಗೋಪಿನಾಥ್, ಮೀನಾ ಗಣೇಶ್, ಮೋಹನದಾಸ್ ಪೈ, ನಿತಿನ್ ಕಾಮತ್, ಪ್ರಶಾಂತ್ ಪ್ರಕಾಶ್, ಸುಬ್ರೋತ್ ಬಾಗ್ಚಿ, ಆಯೋಜನೆ: ಟಿಐಇ ಬೆಂಗಳೂರು, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ(ಬಿಐಸಿ), ದೊಮ್ಮಲೂರು, ಸಂಜೆ 4

ಸುದ್ದಿ 2 ನಿಮಿಷ

ಕಾಂಗ್ರೆಸ್ ಪಾತ್ರ ಏನಿದೆ: ರಾಜೂಗೌಡ

ಬೆಂಗಳೂರು: 'ನಾಯಕ ಜನಾಂಗವನ್ನು ಎಸ್‌ಟಿಗೆ ಸೇರಿಸುವಾಗ ಮತ್ತು ಮೀಸಲಾತಿ ಪ್ರಮಾಣ ಹೆಚ್ಚಿಸುವ ವಿಷಯದಲ್ಲಿ ಕಾಂಗ್ರೆಸ್‌ನ ಯಾವುದೇ ಪಾತ್ರ ಇರಲಿಲ್ಲ' ಎಂದು ಬಿಜೆಪಿ ಶಾಸಕ ರಾಜೂಗೌಡ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ನಾಯಕ ಜನಾಂಗವನ್ನು ಎಸ್‌ಟಿಗೆ ಸೇರಿಸಿದ್ದು ಮತ್ತು ಮೀಸಲಾತಿ ಹೆಚ್ಚಿಸಿದ್ದು ಯಾರು ಎಂಬುದು ಜನರಿಗೆ ಗೊತ್ತಿದೆ. ಸುಖಾಸುಮ್ಮನೆ ಕ್ರೆಡಿಟ್ ತೆಗೆದುಕೊಳ್ಳುವ ಅಗತ್ಯವಿಲ್ಲ. ಇವೆಲ್ಲದರಲ್ಲಿ ಕಾಂಗ್ರೆಸ್‌ನ ಪಾತ್ರವಂತೂ ಇಲ್ಲವೇ ಇಲ್ಲ' ಎಂದರು.

ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗದ ವರದಿಯ ಶಿಫಾರಸ್ಸಿನ ಆಧಾರದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಅವರು ತೀರ್ಮಾನ ತೆಗೆದುಕೊಂಡಿದ್ದಾರೆ. ಅದಕ್ಕೆ ಮುನ್ನ ಕಾಂಗ್ರೆಸ್ ಸೇರಿದಂತೆ ಸರ್ವ ಪಕ್ಷ ಸಭೆ ಮಾಡಿ ಒಪ್ಪಿಗೆ ಪಡೆದುಕೊಂಡಿದ್ದಾರೆ. ಈ ಸಭೆಯಲ್ಲಿ ಸತೀಶ ಜಾರಕಿಹೊಳಿ ಅವರು ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹೇಳಿ, ಹೊರ ಬಂದ ನಂತರ ಬೇರೆಯದೇ ರೀತಿಯಲ್ಲಿ ಮಾತನಾಡಿದ್ದು ಸರಿಯಲ್ಲ ಎಂದರು.

'ಕಾಂಗ್ರೆಸ್‌ನವರು ಮೀಸಲಾತಿಯಲ್ಲಿ ಜಾತಿಗಳನ್ನು ಹೆಚ್ಚಿಸುತ್ತಾ ಹೋದರೆ ಹೊರತು ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಲಿಲ್ಲ' ಎಂದು ಹೇಳಿದರು.

ಸಿಎಂ ಯಾತ್ರೆಗೆ 'ಜನಪರ ಕಾಳಜಿಯ ಜನನಾಯಕ' ಆಲ್ಬಂ ಬಿಡುಗಡೆ



ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಬಿಂಬಿಸುವ ಐದು ಹಾಡುಗಳುಳ್ಳ ವಿಡಿಯೊ ಆಲ್ಬಂ ಅನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ತಾರಾ ಅನೂರಾಧ ಸೋಮವಾರ ಬಿಡುಗಡೆ ಮಾಡಿದರು.

ಬಸವರಾಜ ಬೊಮ್ಮಾಯಿ ಅಭಿಮಾನಿ ಬಳಗದ ಶಿವಕುಮಾರ್ ಮೇಟಿ ಮತ್ತು ಅವರ ಸ್ನೇಹಿತರು ಒಗ್ಗೂಡಿ 'ಜನಪರ ಕಾಳಜಿಯ ಜನನಾಯಕ' ಹೆಸರಿನ ಈ ವಿಡಿಯೊ ಆಲ್ಬಂ ರೂಪಿಸಿದ್ದಾರೆ. ಮಂಗಳವಾರದಿಂದ ಆರಂಭವಾಗಲಿರುವ ಮುಖ್ಯಮಂತ್ರಿಯವರ ಜನಸ್ಪಂದನ ಯಾತ್ರೆಯಲ್ಲಿ ಈ ಹಾಡುಗಳನ್ನು ಬಳಸುವ ಯೋಜನೆ ಇದೆ.

'ಮುಖ್ಯಮಂತ್ರಿಯವರ ಸಾಧನೆಗಳ ಕುರಿತ ಆಲ್ಬಂ ಬಿಡುಗಡೆ ಮಾಡಿರುವುದು ಸಂತಸದ ವಿಚಾರ. ಬೊಮ್ಮಾಯಿ ಅವರು ಸಾಮಾನ್ಯ ಜನರ ಮುಖ್ಯಮಂತ್ರಿ ಎಂದೇ ಜನಪ್ರಿಯರಾಗಿದ್ದಾರೆ. ಅವರ ನೇತೃತ್ವದ ಸರ್ಕಾರದ ಕಾರ್ಯಕ್ರಮ ಮತ್ತು ಸಾಧನೆಗಳನ್ನು ಜನರಿಗೆ ತಲುಪಿಸುವ ದಿಸೆಯಲ್ಲಿ ಆಲ್ಬಂ ಸಹಕಾರಿಯಾಗಲಿದೆ' ಎಂದು ತಾರಾ ಹೇಳಿದರು.

ಶಿವಕುಮಾರ್ ಮೇಟಿ, ಎಂ.ಎಸ್. ಪಾಟೀಲ ನರಿಬೋಳ, ಜಯಪ್ರಕಾಶ್ ಜಾಲಿಗಿಡದ ಉಪಸ್ಥಿತರಿದ್ದರು.

ಸೋಂಪುರದಲ್ಲಿ ಮಳೆ: ಮೇವಿಗೆ ತೊಂದರೆ

ದಾಬಸ್ ಪೇಟೆ: ಸೋಂಪುರ ಹೋಬಳಿಯಲ್ಲಿ ಸೋಮವಾರ ಮಧ್ಯಾಹ್ನ ಆರಂಭವಾದ ಮಳೆ ಸಂಜೆವರೆಗೂ ಸುರಿಯಿತು.

ಮಳೆಯಿಂದಾಗಿ ಜನರ ಬದುಕು ಅಸ್ತವ್ಯಸ್ತಗೊಂಡಿದೆ. ಕಾರ್ಮಿಕರು, ಶಾಲಾ ಮಕ್ಕಳು, ನಿತ್ಯದ ಕೆಲಸ ಕಾರ್ಯಗಳಿಗೆ ಹೋಗುವವರಿಗೆ ಹಾಗೂ ಗ್ರಾಮೀಣ ಭಾಗದಲ್ಲಿ ದನಕರುಗಳ ಮೇವಿಗೆ ತೊಂದರೆಯಾಗಿದೆ.

ಮೂರ್ನಾಲ್ಕು ದಿನಗಳಿಂದ ಒಮ್ಮೆ ಜೋರಾಗಿ, ಮತ್ತೊಮ್ಮೆ ತುಂತುರು ಮಳೆ ಸುರಿಯುತ್ತಿದೆ. ಮಳೆಯ ಜೊತೆಗೆ ತಣ್ಣನೆಯ ಗಾಳಿ ಸಹ ಬೀಸುತ್ತಿದ್ದು ಚಳಿಯ ವಾತಾವರಣವಿದೆ. ಜಡಿ ಮಳೆ ಹಾಗೂ ತಣ್ಣನೆಯ ಗಾಳಿ ಬೀಸುತ್ತಿರುವುದರಿಂದ ಮಕ್ಕಳು, ವೃದ್ಧರು ಶೀತ, ಕೆಮ್ಮು ಜ್ವರದಿಂದ ಬಳಲುವಂತಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

16ಕ್ಕೆ 'ಅಗ್ನಿವೀರ್' ಸಾಮಾನ್ಯ ಪ್ರವೇಶ ಪರೀಕ್ಷೆ

ಬೆಂಗಳೂರು: 'ಅಗ್ನಿ ವೀರ್ ನೇಮಕಾತಿಯ ಸಾಮಾನ್ಯ ಪ್ರವೇಶ ಪರೀಕ್ಷೆಯು (CEE) ಇದೇ 16 ರಂದು ಜಯನಗರದ ಕಿತ್ತೂರು ರಾಣಿ ಚನ್ನಮ್ಮ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಸುಮಾರು 1,900 ಅಭ್ಯರ್ಥಿಗಳು ಭಾಗವಹಿಸಲಿದ್ದಾರೆ' ಎಂದು ದಕ್ಷಿಣ ವಿಭಾಗದ ಉಪವಿಭಾಗಾಧಿಕಾರಿ ಕೆ.ಎನ್. ರಘು ನಂದನ್ ತಿಳಿಸಿದ್ದಾರೆ.

ಪರೀಕ್ಷೆಯ ಪೂರ್ವ ಸಿದ್ಧತೆಗೆ ಸಂಬಂಧಿಸಿದಂತೆ ಸೋಮವಾರ ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ಪರೀಕ್ಷೆಯು ಅಂದು ಬೆಳಿಗ್ಗೆ 4 ಗಂಟೆಗೆ ನಡೆಯಲಿದ್ದು, ಪರೀಕ್ಷಾರ್ಥಿಗಳು 15 ರಂದೇ ಸೂಚಿಸಿದ ಸ್ಥಳದಲ್ಲಿ ತಂಗಬೇಕು. ಅದಕ್ಕಾಗಿ ಸುತ್ತ ಮುತ್ತಲಿನ ಶಾಲೆಗಳಲ್ಲಿ ವ್ಯವಸ್ಥೆ ಮಾಡಲಾಗುವುದು' ಎಂದು ತಿಳಿಸಿದ್ದಾರೆ.

'10 ಮೊಬೈಲ್ ಟಾಯ್ಲೆಟ್, 15 ಕೆ.ವಿ. ಜನರೇಟರ್, ಒಂದು ಆಂಬುಲೆನ್ಸ್ ಜತೆಗೆ ವೈದ್ಯರು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗುವುದು' ಎಂದು ಕೆ.ಎನ್. ರಘು ನಂದನ್ ತಿಳಿಸಿದರು.

'ಪರೀಕ್ಷೆಯ ಹಿಂದಿನ ದಿನ ತಂಗುವ ವಿದ್ಯಾರ್ಥಿಗಳಿಗೆ ನೀರಿನ ವ್ಯವಸ್ಥೆ ಹಾಗೂ ಪರೀಕ್ಷಾರ್ಥಿಗಳಿಗೆ ಬೆಳಿಗ್ಗೆ 8 ಗಂಟೆಗೆ ಉಪಾಹಾರ ವ್ಯವಸ್ಥೆ ಮಾಡಲಾಗುವುದು' ಎಂದು ತಿಳಿಸಿದರು.

'ಪರೀಕ್ಷಾರ್ಥಿಗಳಿಗೆ ಸುಮಾರು 2000 ಆಸನಗಳ ವ್ಯವಸ್ಥೆ ಮಾಡಬೇಕು' ಎಂದು ನೇಮಕಾತಿ ನಿರ್ದೇಶಕರಾದ ಗೌರವ್ ಥಾಪ ರವರು ಉಪವಿಭಾಗಾಧಿಕಾರಿ ಅವರಿಗೆ ಕೋರಿದರು.

ನಿಮ್ಹಾನ್ಸ್ 26ನೇ ಘಟಿಕೋತ್ಸವದಲ್ಲಿ ಸಚಿವ ಕೆ.ಸುಧಾಕರ್

ಸಮಸ್ಯೆ; ವಾರದಲ್ಲಿ ಒಂದು ದಿನ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಿದುಳು ಆರೋಗ್ಯ ಯೋಜನೆ ಜಾರಿ ಮಾಡಲಾಗಿದ್ದು, ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುವವರ ಆರೈಕೆಗೆ ಪ್ರಾಥಮಿಕ ಹಾಗೂ ದ್ವಿತೀಯ ಹಂತದ ಆಸ್ಪತ್ರೆಗಳಲ್ಲಿ ವಾರದ ಒಂದು ದಿನ ಮೀಸಲಿಡಲಾಗುತ್ತದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಸುಧಾಕರ್ ಮಾಹಿತಿ ನೀಡಿದರು.


ರಾಷ್ಟ್ರೀಯ ಮಾನಸಿಕ ಅರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಸೋಮವಾರ ಹಮ್ಮಿಕೊಂಡಿದ್ದ 26ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

ಇ-ಮನಸ್ ಯೋಜನೆಯಲ್ಲಿ ತಂತ್ರಾಂಶಗಳ ಬಳಕೆ ಮಾಡಿಕೊಂಡು ಮಾನಸಿಕ ಆರೋಗ್ಯ ಚಟುವಟಿಕೆಗಳ ನಿರ್ವಹಣೆ ಮಾಡಲಾಗುತ್ತಿದೆ. ನರರೋಗ ಸಮಸ್ಯೆಗಳ ನಿವಾರಣೆಗಾಗಿ ಮಿದುಳು ಆರೋಗ್ಯ ಯೋಜನೆ ರೂಪಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಮಾದರಿಯಾಗಿಟ್ಟುಕೊಂಡು ಕೇಂದ್ರ ಸರ್ಕಾರ ಟಿ-ಮನಸ್ ಯೋಜನೆ ಜಾರಿ ಮಾಡಿದೆ ಎಂದು ಅವರು ಹೇಳಿದರು.

ದೈಹಿಕ ಆರೋಗ್ಯದ ಜತೆಗೆ, ಮಾನಸಿಕ ಆರೋಗ್ಯವೂ ಮುಖ್ಯ. ಎರಡೂ ಸದೃಢವಾಗಿರುವ ಜನರಿದ್ದರೆ ದೇಶದ ಪ್ರಗತಿ ಸಾಧ್ಯ. ಕೋವಿಡ್ ಸಮಯದಲ್ಲಿ ಹಲವು ಜನರು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು. ಅದಕ್ಕಾಗಿ ರಾಜ್ಯ ಸರ್ಕಾರ ನಿಮ್ಹಾನ್ಸ್ ಸಹಯೋಗದಲ್ಲಿ ಟೆಲಿ ಕೌನ್ಸಿಲಿಂಗ್ ಸೇವೆ ಆರಂಭಿಸಿತ್ತು. ಈವರೆಗೆ 23 ಲಕ್ಷ ಟೆಲಿ ಕನ್ಸಲ್ಟೇಶನ್ ನಡೆಸಲಾಗಿದೆ. ಈಗ ಸ್ವರೂಪ ಬದಲಿಸಿ, 'ಟೆಲಿ ಮಾನಸಿಕ ಆರೋಗ್ಯ'ದ ಹೆಸರಿನಲ್ಲಿ ಮುಂದುವರಿಸಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಿಗೂ ಮಾನಸಿಕ ಆರೋಗ್ಯ ನಿರ್ವಹಣೆ ಕುರಿತು ತರಬೇತಿ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನದ 30 ವಿಭಾಗಗಳಲ್ಲಿ ಉನ್ನತ ಶಿಕ್ಷಣ ಪೂರೈಸಿದ 347 ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. 17 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ವರ್ಚುಯಲ್ ಮೂಲಕ 'ಟೆಲಿ ಮನಸಾ ಕಾರ್ಯಕ್ರಮ' ಉದ್ಘಾಟಿಸಿದರು. ನಿಮ್ಹಾನ್ಸ್ ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಂ.ಕೆ. ರಮೇಶ್ ಉಪಸ್ಥಿತರಿದ್ದರು.



ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ಸೋಮವಾರ ಹಮ್ಮಿಕೊಂಡಿದ್ದ 26ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಾದ ಅನುಷಾ ರಂಗರಾಜನ್, ಮಾತಾಂಗಿ ಕೃಷ್ಣಕುಮಾರ್, ಡಿ.ಎಂ.ಸಿಂಧು, ಕಥೈ ರೋಶಿನಿ, ಮನೀಶಾ ಗುಪ್ತಾ, ಮೊಹಮ್ಮದ್ ನಾದೀಮ್, ವಸುಂಧರಾ ಟಿಯೋಟಿಯಾ, ಟಿ.ಪಿ.ದೇವರಾಜ್, ಸೋವಿಕ್ ಸಿಂಗಾ, ಎಸ್.ಎನ್.ಪ್ರಣತಿ, ವಿಭೋರ್ ಪಟೇರಿಯಾ, ಐಶ್ವರ್ಯ ಸಚ್‌ದೇವ್, ಕನಕ್ ಕಟೇರಿಯಾ, ಪಿ.ಅಮ್ರಿತಾ ರೇಖಾ, ನಿಶಾ ಸರ್ಕಾರ್, ಶ್ರೀರಾಮ್ ರಾಮಲಕ್ಷ್ಮಿ ನಿಹಾರಿಕಾ, ಶರ್ಮ ದಿನೇಶ್ ಅರುಣ್, ಭಾಸ್ವಟ್ಟಿ ದಾಸ್, ಕೆ.ಪ್ರಮೋದ್, ಮಹಮ್ಮದ್ ಹರ್ಷದ್ ಸಂಭ್ರಮಿಸಿದರು

ಸಂಕ್ಷಿಪ್ತ ಸುದ್ದಿ

ಬೈಕ್‌ಗೆ ಮಿನಿ ಬಸ್ ಡಿಕ್ಕಿ: ಉದ್ಯೋಗಿ ಸಾವು

ಬೆಂಗಳೂರು: ಉಲ್ಲಾಳ ಮುಖ್ಯರಸ್ತೆಯಲ್ಲಿ ಬೈಕ್ ಹಾಗೂ ಮಿನಿ ಬಸ್ ನಡುವೆ ಭಾನುವಾರ ಅಪಘಾತ ಸಂಭವಿಸಿದ್ದು, ಶ್ರೇಯಸ್ (26) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಉಲ್ಲಾಳ ನಿವಾಸಿ ಶ್ರೇಯಸ್, ಖಾಸಗಿ ಕಂಪನಿಯೊಂದರ ಉದ್ಯೋಗಿ. ಕೆಲಸ ನಿಮಿತ್ತ ಬೈಕ್‌ನಲ್ಲಿ ಹೊರಟಿದ್ದರು. ಅದೇ ಸಂದರ್ಭದಲ್ಲೇ ಮಿನಿ ಬಸ್, ಬೈಕ್‌ಗೆ ಡಿಕ್ಕಿ ಹೊಡೆದು ಅವಘಡ ಸಂಭವಿಸಿದೆ' ಎಂದು ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು ಹೇಳಿದರು.

'ತಲೆಗೆ ತೀವ್ರ ಪೆಟ್ಟು ಬಿದ್ದು ಶ್ರೇಯಸ್ ಮೃತಪಟ್ಟಿದ್ದಾರೆ. ಮಿನಿ ಬಸ್ ಚಾಲಕನ ನಿರ್ಲಕ್ಷ್ಯದ ಚಾಲನೆಯೇ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಈತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಭೀಮಾನದಿಯಲ್ಲಿ ಕೊಚ್ಚಿಹೋದ ಬೆಂಗಳೂರು ವ್ಯಕ್ತಿ

ಕಲಬುರಗಿ: ಅಫಜಲಪುರ ತಾಲ್ಲೂಕಿನ ಘತ್ತರಗಿಯ ಭಾಗ್ಯವಂತಿದೇವಿ ದರ್ಶನಕ್ಕೆ ಬಂದಿದ್ದ ಬೆಂಗಳೂರಿನ ಜೆ.ಪಿ.ನಗರದ ನಿವಾಸಿ ಸುರೇಶ್ (40) ಎಂಬುವರು ಭೀಮಾ ನದಿಯಲ್ಲಿ ಸ್ನಾನ ಮಾಡುವಾಗ, ನೀರಿನಲ್ಲಿ ಸೋಮವಾರ ಕೊಚ್ಚಿಕೊಂಡು ಹೋಗಿದ್ದಾರೆ.

ಸಂಜೆಯವರೆಗೆ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಹುಡುಕಾಟ ನಡೆಸಿದರೂ ಅವರು ಪತ್ತೆಯಾಗಿಲ್ಲ.

'ಪತ್ನಿ ಪದ್ಮಪ್ರಿಯಾ ಮತ್ತು ಪುತ್ರಿ ನೇಹಾ ಜೊತೆ ಸುರೇಶ್ ಘತ್ತರಗಿಗೆ ಬಂದಿದ್ದರು. ಪತ್ನಿ ಮತ್ತು ಪುತ್ರಿ ಇಬ್ಬರೂ ನದಿ ದಡದ ಕಲ್ಲಿನ ಕಟ್ಟೆ ಮೇಲೆ ಕೂತ ವೇಳೆ ದುರ್ಘಟನೆ ನಡೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಭೀಮಾ ನದಿ ತುಂಬಿ ಹರಿಯುತ್ತಿದೆ. ಹೀಗಾಗಿ, ಪತ್ತೆ ಕಾರ್ಯಾಚರಣೆ ಸವಾಲಾಗಿದೆ.

ಕೆಲಸಕ್ಕಿದ್ದ ಕಂಪನಿಯಲ್ಲಿ ₹ 2.81 ಲಕ್ಷ ಕಳ್ಳತನ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿರುವ ಅಮೆಜಾನ್ ಸೆಲ್ಲರ್ ಸರ್ವೀಸಸ್ ಕಂಪನಿಯಲ್ಲಿ ₹ 2.81 ಲಕ್ಷ ಕಳ್ಳತನ ಮಾಡಿದ್ದ ಆರೋಪದಡಿ ಮೊಹಮ್ಮದ್ ವಸೀಂ (24) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಅಂಚೆಪಾಳ್ಯದ ವಸೀಂ, ಅಮೆಜಾನ್ ಸೆಲ್ಲರ್ ಸರ್ವೀಸಸ್ ಕಂಪನಿಯಲ್ಲಿ ಕೆಲ ವರ್ಷ ಕೆಲಸ ಮಾಡಿದ್ದ. ಇತ್ತೀಚೆಗಷ್ಟೇ ಕೆಲಸ ಬಿಟ್ಟಿದ್ದ. ಕಂಪನಿಯಲ್ಲಿ ಸಂಗ್ರಹವಾಗುವ ಹಣ ಇರಿಸುತ್ತಿದ್ದ ನಗದು ಪೆಟ್ಟಿಗೆ ಬಗ್ಗೆ ತಿಳಿದುಕೊಂಡಿದ್ದ ಆರೋಪಿ, ಸೆ. 17 ರಂದು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದ. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಆರೋಪಿ ಕೃತ್ಯ ಸೆರೆಯಾಗಿತ್ತು. ಕಂಪನಿ ಭದ್ರತಾ ಸಿಬ್ಬಂದಿ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ₹ 1.30 ಲಕ್ಷ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

5 ಜಿ ಹೆಸರಿನಲ್ಲಿ ಸೈಬರ್ ವಂಚನೆ: ಪೊಲೀಸರ ಜಾಗೃತಿ

ಬೆಂಗಳೂರು: 4 ಜಿ ನೆಟ್‌ವರ್ಕ್‌ನಿಂದ 5 ಜಿ ನೆಟ್‌ವರ್ಕ್ ಬದಲಾವಣೆ ನೆಪದಲ್ಲಿ ಗ್ರಾಹಕರಿಗೆ ಕರೆ ಮಾಡುತ್ತಿರುವ ವಂಚಕರು, ವೈಯಕ್ತಿಕ ಮಾಹಿತಿ ಪಡೆದು ಹಣ ದೋಚುತ್ತಿದ್ದಾರೆ. ಈ ಬಗ್ಗೆ ಎಚ್ಚರ ವಹಿಸುವಂತೆ ನಗರದ ಪೊಲೀಸರು ಜನರದಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

ವಂಚನೆ ಜಾಲದ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಸಿಸಿಬಿ ಡಿಸಿಪಿ ಶರಣಪ್ಪ, 'ಏರ್‌ಟೆಲ್ ಹಾಗೂ ಇತರೆ ಮೊಬೈಲ್ ಸೇವಾ ಕಂಪನಿಗಳ ಹೆಸರಿನಲ್ಲಿ ವಂಚಕರು ಕರೆ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಇಂಥ ಕರೆಗಳ ಬಗ್ಗೆ ಜನರು ಜಾಗೃತಿ ವಹಿಸಬೇಕು. ನೆಟ್‌ವರ್ಕ್ ಬದಲಾವಣೆಗಾಗಿ ಮಾಹಿತಿ ಕೋರಿ ಯಾರಾದರೂ ಕರೆ ಮಾಡಿದರೆ, ಪೊಲೀಸ್ ನಿಯಂತ್ರಣ ಕೊಠಡಿ-112ಕ್ಕೆ ಕರೆ ಮಾಡಿ' ಎಂದರು.

'ವೈಯಕ್ತಿಕ ಮಾಹಿತಿ ಪಡೆಯುವ ವಂಚಕರು, ಮೊಬೈಲ್ ಸಂಖ್ಯೆಗೆ ಬರುವ ಒಟಿಪಿ (ಒನ್ ಟೈಂ ಪಾಸ್‌ವರ್ಡ್) ಕೇಳುತ್ತಿದ್ದಾರೆ. ಅದನ್ನು ನೀಡುತ್ತಿದ್ದಂತೆ, ಬ್ಯಾಂಕ್ ಖಾತೆಗಳಲ್ಲಿರುವ ಹಣವನ್ನು ವರ್ಗಾಯಿಸಿಕೊಂಡು ವಂಚಿಸುತ್ತಿರುವುದು ಗೊತ್ತಾಗಿದೆ' ಎಂದು ಹೇಳಿದರು.

ನಿಧನ ವಾರ್ತೆ

ಧನಲಕ್ಷ್ಮಿ .ಜಿ



ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಧನಲಕ್ಷ್ಮಿ ಜಿ. (29 ವರ್ಷ) ಅವರು ಮಿದುಳು ನಿಷ್ಕ್ರಿಯಗೊಂಡು ಸೋಮವಾರ ನಿಧನರಾಗಿದ್ದಾರೆ. ತುಮಕೂರು ಜಿಲ್ಲೆಯ ಕೊರಟಗೆರೆಯವರಾದ ಇವರು 2 ವರ್ಷಗಳ ಹಿಂದೆಯಷ್ಟೇ ಕಾನ್‌ಸ್ಟೆಬಲ್ ಆಗಿ ನೇಮಕಗೊಂಡಿದ್ದರು. ಮೃತರಿಗೆ ಪತಿ ಇದ್ದಾರೆ.

ಬೆಂಗಳೂರು ವಿ.ವಿ ಜ್ಞಾನಭಾರತಿ ಆವರಣದಲ್ಲಿ ಅವಘಡ: ಪ್ರತಿಭಟನಿರತ ವಿದ್ಯಾರ್ಥಿಗಳು ವಶಕ್ಕೆ

ವಿದ್ಯಾರ್ಥಿನಿ ಮೇಲೆ ಹರಿದ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಸೋಮವಾರ ಅಪಘಾತ ಸಂಭವಿಸಿದ್ದು, ಬಿಎಂಟಿಸಿ ಬಸ್ ಮೈ ಮೇಲೆ ಹರಿದು ಎಂ.ಎಸ್ಸಿ ವಿದ್ಯಾರ್ಥಿನಿ ಶಿಲ್ಪಶ್ರೀ (22) ಎಂಬುವರು ತೀವ್ರ ಗಾಯಗೊಂಡಿದ್ದಾರೆ.

ಅಪಘಾತದಿಂದ ಆಕ್ರೋಶಗೊಂಡ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ರಸ್ತೆಯಲ್ಲಿ ಕುಳಿತು ವಾಹನಗಳ ಸಂಚಾರ ತಡೆದು ರಾತ್ರಿಯವರೆಗೂ ಪ್ರತಿಭಟನೆ ನಡೆಸಿದರು.

'ಬೆಳಿಗ್ಗೆ 10.45ರ ಸುಮಾರಿಗೆ ಅಪಘಾತ ಸಂಭವಿಸಿದೆ. ಗಾಯಾಳು ಶಿಲ್ಪಶ್ರೀ (22) ಅವರನ್ನು ಫೋರ್ಟಿಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ. ಅಪಘಾತಕ್ಕೆ ಕಾರಣ ಎನ್ನಲಾದ ಬಿಎಂಟಿಸಿ ಬಸ್ ಜಪ್ತಿ ಮಾಡಲಾಗಿದ್ದು, ಚಾಲಕ ಸುರೇಶ್ ಅವರನ್ನು ಬಂಧಿಸಲಾಗಿದೆ' ಎಂದು ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು ಹೇಳಿದರು.

'ಕೋಲಾರ ಜಿಲ್ಲೆ ಬಂಗಾರಪೇಟೆಯ ಡಿ.ಕೆ.ಹಳ್ಳಿ ಬಳಿಯ ದಾಸರಹಳ್ಳಿ ನಿವಾಸಿ ಶಿಲ್ಪಶ್ರೀ, ಬೆಂಗಳೂರು ವಿಶ್ವವಿದ್ಯಾಲಯದ ಗಣಿತ ವಿಭಾಗದಲ್ಲಿ ಎಂ.ಎಸ್ಸಿ ವ್ಯಾಸಂಗ ಮಾಡುತ್ತಿದ್ದರು. ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದರು. ಸೋಮವಾರ ಬೆಳಿಗ್ಗೆ 10.45ರ ಸುಮಾರಿಗೆ ಹಾಸ್ಟೆಲ್‌ನಿಂದ ವಿಭಾಗಕ್ಕೆ ಹೋಗಲೆಂದು, ಮುನೇಶ್ವರ ಬಸ್ ತಂಗುದಾಣಕ್ಕೆ ಬಂದಿದ್ದರು. ತಂಗುದಾಣಕ್ಕೆ ಬಂದಿದ್ದ ಬಸ್ (ಕೆಎ 57 ಎಫ್‌ಓ 961) ಹತ್ತಲು ಮುಂದಾಗಿದ್ದರು.'

'ನಿರ್ಲಕ್ಷ್ಯದಿಂದ ವರ್ತಿಸಿದ್ದ ಚಾಲಕ, ಶಿಲ್ಪಶ್ರೀ ಹತ್ತುವುದಕ್ಕೂ ಮುನ್ನವೇ ಏಕಾಏಕಿ ಬಸ್ ಮುಂದಕ್ಕೆ ಚಲಾಯಿಸಿದ್ದ. ಈ ವೇಳೆ ಶಿಲ್ಪಶ್ರೀ ಆಯತಪ್ಪಿ ಬಿದ್ದಿದ್ದರು. ಅವರ ದೇಹದ ಎಡ ತೊಡೆ ಹಾಗೂ ಕಾಲಿನ ಮೇಲೆ ಬಸ್ಸಿನ ಚಕ್ರ ಹರಿದಿತ್ತು. ಸಹಾಯಕ್ಕೆ ಧಾವಿಸಿದ್ದ ವಿದ್ಯಾರ್ಥಿಗಳು, ಶಿಲ್ಪಶ್ರೀ ಅವರನ್ನು ಎತ್ತಿಕೊಂಡು ಖಾಸಗಿ ವಾಹನದ ಮೂಲಕ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ' ಎಂದು ತಿಳಿಸಿದರು.

ಖಾಸಗಿ ವಾಹನಗಳ ನಿಷೇಧಕ್ಕೆ ಆಗ್ರಹ: ಅಪಘಾತದ ಸುದ್ದಿ ತಿಳಿದು ರಸ್ತೆಯಲ್ಲಿ ಸೇರಿದ್ದ ವಿದ್ಯಾರ್ಥಿಗಳು, 'ಆವರಣದಲ್ಲಿ ಮೇಲಿಂದ ಮೇಲೆ ಅಪಘಾತಗಳು ಸಂಭವಿಸುತ್ತಿವೆ. ವಿದ್ಯಾರ್ಥಿಗಳು ಗಾಯಗೊಂಡು ಆಸ್ಪತ್ರೆ ಸೇರುತ್ತಿದ್ದಾರೆ. ಇದಕ್ಕೆಲ್ಲ ಕಾರಣವಾಗುತ್ತಿರುವ ಖಾಸಗಿ ವಾಹನಗಳ ಸಂಚಾರವನ್ನು ಆವರಣದಲ್ಲಿ ನಿಷೇಧಿಸಬೇಕು' ಎಂದು ಆಗ್ರಹಿಸಿದರು.



ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ವಾಹನಗಳ ಸಂಚಾರ ತಡೆದು ವಿದ್ಯಾರ್ಥಿಗಳು ಸೋಮವಾರ ಪ್ರತಿಭಟನೆ ನಡೆಸಿದರು

'ನಗರಕ್ಕೆ ಇತ್ತೀಚೆಗೆ ಬಂದಿದ್ದ ಪ್ರಧಾನ ಮಂತ್ರಿ ಸಂಚಾರಕ್ಕೆಂದು ಆವರಣದಲ್ಲಿದ್ದ ಹಂಪ್ಸ್‌ಗಳನ್ನು ತೆರವು ಮಾಡಲಾಗಿದೆ. ಹೀಗಾಗಿ, ಖಾಸಗಿ ವಾಹನಗಳು ಅತೀ ವೇಗವಾಗಿ ಸಂಚರಿಸುತ್ತಿವೆ. ವಿದ್ಯಾರ್ಥಿಗಳು ಭಯದಲ್ಲಿ ಓಡಾಡುವಂತಾಗಿದೆ. ಅಪಘಾತ ಸಂಭವಿಸಿದರೆ, ಗಾಯಾಳುವನ್ನು ಆಸ್ಪತ್ರೆಗೆ ಕರೆದೊಯ್ಯಲು ಆಂಬುಲೆನ್ಸ್ ವ್ಯವಸ್ಥೆ ಸಹ ಇಲ್ಲ' ಎಂದು ವಿದ್ಯಾರ್ಥಿಗಳು ದೂರಿದರು.

ಪ್ರತಿಭಟನೆ ಕಾವು ಹೆಚ್ಚಾಗುತ್ತಿದ್ದಂತೆ ಕುಲಪತಿ ಡಾ. ಎಸ್.ಎಂ. ಜಯಕರ್ ಹಾಗೂ ಬಿಎಂಟಿಸಿ ಅಧಿಕಾರಿಗಳು ಸ್ಥಳಕ್ಕೆ ಬಂದು ಮನವೊಲಿಸಲು ಯತ್ನಿಸಿದರು. ಅದಕ್ಕೆ ಒಪ್ಪದ ವಿದ್ಯಾರ್ಥಿಗಳು, ರಸ್ತೆಯಲ್ಲಿ ಕುಳಿತು ಪ್ರತಿಭಟನೆ ಮುಂದುವರಿಸಿದರು.

ವಿದ್ಯಾರ್ಥಿಗಳು ವಶಕ್ಕೆ: ಜ್ಞಾನಭಾರತಿ ಆವರಣ ಮಾರ್ಗವಾಗಿ ಸುತ್ತಮುತ್ತ ಪ್ರದೇಶಗಳಿಗೆ ಸಂಚರಿಸಬೇಕಾದ ಸಾರ್ವಜನಿಕರಿಗೆ ಪ್ರತಿಭಟನೆಯಿಂದಾಗಿ ತೊಂದರೆ ಉಂಟಾಯಿತು. ದಟ್ಟಣೆಯೂ ಕಂಡುಬಂತು.

ಸ್ಥಳದಲ್ಲಿದ್ದ ಪೊಲೀಸರು, ಪ್ರತಿಭಟನೆ ಕೈಬಿಡುವಂತೆ ಕೋರಿದರು. ಅದಕ್ಕೂ ವಿದ್ಯಾರ್ಥಿಗಳು ಸ್ಪಂದಿಸಲಿಲ್ಲ. ಬಳಿಕ 20ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ವಶಕ್ಕೆ ಪಡೆದ ಪೊಲೀಸರು, ಬಿಎಂಟಿಸಿ ಬಸ್‌ನಲ್ಲಿ ಕರೆದೊಯ್ದರು.



ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣದಲ್ಲಿ ಬಿಎಂಟಿಸಿ ಬಸ್ ಮೈ ಮೇಲೆ ಹರಿದು ಗಾಯಗೊಂಡ ವಿದ್ಯಾರ್ಥಿನಿ ಶಿಲ್ಪಶ್ರೀ ಅವರನ್ನು ವಿದ್ಯಾರ್ಥಿಗಳು ಆಸ್ಪತ್ರೆಗೆ ಕರೆದೊಯ್ದರು

ಮತ್ತಷ್ಟು ವಿದ್ಯಾರ್ಥಿಗಳು ಭಾಗಿ: ಪೊಲೀಸರು ವಶಕ್ಕೆ ಪಡೆದ ಸುದ್ದಿ ತಿಳಿಯುತ್ತಿದ್ದಂತೆ, ಮತ್ತಷ್ಟು ವಿದ್ಯಾರ್ಥಿಗಳು ರಸ್ತೆಗೆ ಇಳಿದರು. ಆಡಳಿತ ಭವನ ಎದುರಿನ ರಸ್ತೆ ಹಾಗೂ ಜ್ಞಾನಭಾರತಿ ಠಾಣೆ ಎದುರು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸೇರಿದ್ದರು.

'ಸರ್ಕಾರ, ಬಿಬಿಎಂಪಿಗೆ ಪತ್ರ'

'ಆವರಣದಲ್ಲಿ ಖಾಸಗಿ ವಾಹನಗಳ ಸಂಚಾರ ಸಂಬಂಧ ನಿಯಮಗಳನ್ನು ರೂಪಿಸಬೇಕು. ಈ ಬಗ್ಗೆ ಸರ್ಕಾರ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಪತ್ರ ಬರೆಯುತ್ತೇವೆ' ಎಂದು ಕುಲಪತಿ ಡಾ. ಎಸ್.ಎಂ. ಜಯಕರ್ ತಿಳಿಸಿದರು.

'ವಿ.ವಿ ಪ್ರವೇಶ ದ್ವಾರಗಳು ಬಂದ್'

ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರಿಂದ, ಮುಂಜಾಗ್ರತಾ ಕ್ರಮವಾಗಿ ವಿಶ್ವವಿದ್ಯಾಲಯದ ಎಲ್ಲ ಪ್ರವೇಶ ದ್ವಾರಗಳನ್ನು ಬಂದ್ ಮಾಡಲಾಯಿತು. ಕಲ್ಲು ತೂರಾಟ ನಡೆಯಬಹುದೆಂದು ಖಾಸಗಿ ವಾಹನಗಳ ಸಂಚಾರ ನಿರ್ಬಂಧಿಸಲಾಯಿತು.

'ಅಪಘಾತ ನಡೆದ ಸಮಯದಿಂದಲೇ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ. ಅಹಿತಕರ ಘಟನೆಗಳು ನಡೆಯಬಾರದೆಂದು ಪ್ರವೇಶ ದ್ವಾರಗಳನ್ನು ಬಂದ್ ಮಾಡಲಾಗಿದೆ' ಎಂದು ವಿ.ವಿ ಮೂಲಗಳು ಹೇಳಿವೆ.

ಪ್ರತಿಭಟನೆ ಕಾವು ಹೆಚ್ಚಾಯಿತು. ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಬಂದು ವಿದ್ಯಾರ್ಥಿಗಳ ಮನವೊಲಿಸಲು ಯತ್ನಿಸಿದರು. ಅದಕ್ಕೆ ಒಪ್ಪದ ವಿದ್ಯಾರ್ಥಿಗಳು, ರಾತ್ರಿಯೂ ಪ್ರತಿಭಟನೆ ಮುಂದುವರಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ಗುಂಡೇಟು ತಿಂದು ಜೈಲಿಗೆ: ಹೊರಬಂದು ಪುನಃ ಸರಗಳವು

ಅಪರಾಧ ಸುದ್ದಿ



ಅಚ್ಯುತ್ ಕುಮಾರ್

ಬೆಂಗಳೂರು: ನಗರದ ಹಲವೆಡೆ ಮಹಿಳೆಯರ ಸರ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡದ ಅಚ್ಯುತ್ ಕುಮಾರ್ ಗಣಿ ಅಲಿಯಾಸ್ ವಿಶ್ವನಾಥ್ (31), ಪ್ರಜ್ವಲ್ (23) ಹಾಗೂ ಪ್ರಸನ್ನಕುಮಾರ್ (30) ಬಂಧಿತರು. ಇವರಿಂದ ₹ 5 ಲಕ್ಷ ಮೌಲ್ಯದ 100 ಗ್ರಾಂ ಚಿನ್ನಾಭರಣ ಹಾಗೂ ಪಲ್ಸರ್ ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಪ್ರಮುಖ ಆರೋಪಿ ಅಚ್ಯುತ್ ಕುಮಾರ್, ಸರ ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ. ಈತನ ಕೃತ್ಯಕ್ಕೆ ಪತ್ನಿ ಸಹ ಸಹಕಾರ ನೀಡುತ್ತಿದ್ದರು. ರಾಜ್ಯದ ಹಲವೆಡೆ 150ಕ್ಕೂ ಹೆಚ್ಚು ಮಹಿಳೆಯರ ಸರಗಳವು ಮಾಡಿದ್ದ. ತಲೆಮರೆಸಿಕೊಂಡಿದ್ದ ಈತನನ್ನು ವಿಶೇಷ ಕಾರ್ಯಾಚರಣೆ ನಡೆಸಿ ಬಂಧಿಸಿದ್ದ ಪಶ್ಚಿಮ ವಿಭಾಗದ ಪೊಲೀಸರು, ಕಾಲಿಗೆ ಗುಂಡು ಹೊಡೆದಿದ್ದರು.'

'ಗುಂಡೇಟಿನಿಂದ ಗಾಯಗೊಂಡಿದ್ದ ಅಚ್ಯುತ್‌ಕುಮಾರ್‌ಗೆ ಪೊಲೀಸರೇ ಚಿಕಿತ್ಸೆ ಕೊಡಿಸಿದ್ದರು. ನಂತರ, ಆರೋಪಿ 4 ವರ್ಷ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ. ಪ್ರಜ್ವಲ್ ಹಾಗೂ ಪ್ರಸನ್ನಕುಮಾರ್, ಅಪರಾಧ ಪ್ರಕರಣಗಳಲ್ಲಿ ಜೈಲು ಸೇರಿದ್ದ. ಅಲ್ಲಿಯೇ ಮೂವರಿಗೂ ಪರಿಚಯವಾಗಿ ಸರಗಳವು ಮಾಡಲು ಸಂಚು ರೂಪಿಸಿದ್ದರು. ಕೆಲ ತಿಂಗಳ ಹಿಂದೆಯಷ್ಟೇ ಜಾಮೀನು ಪಡೆದು ಹೊರಬಂದಿದ್ದ ಮೂವರು, ಸರಗಳವು ಮಾಡಲಾರಂಭಿಸಿದ್ದರು' ಎಂದೂ ತಿಳಿಸಿದರು.

'ಬಾಗಲಗುಂಟೆ, ವಿದ್ಯಾರಣ್ಯಪುರ, ನೆಲಮಂಗಲ, ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ಮಹಿಳೆಯರ ಸರಗಳವು ಮಾಡಲಾಗಿತ್ತು. ಈ ಬಗ್ಗೆ ದಾಖಲಾದ ಪ್ರಕರಣಗಳ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದೂ ಹೇಳಿದರು.

ತಿಂಗಳಿಗೊಮ್ಮೆ ಮನೆ ಬದಲಿಸಿ ಕೃತ್ಯ: 'ಹುಬ್ಬಳ್ಳಿ, ಧಾರವಾಡ, ಗದಗ, ಹಾವೇರಿ, ಯಲ್ಲಾಪುರ, ಹೊಸಪೇಟೆ, ಹಾಸನ, ತುಮಕೂರು, ಬಳ್ಳಾರಿ, ಚನ್ನಪಟ್ಟಣ ಸೇರಿದಂತೆ 150ಕ್ಕೂ ಹೆಚ್ಚು ನಗರಗಳಲ್ಲಿ ಆರೋಪಿ ಅಚ್ಯುತ್ ಕುಮಾರ್ ಸರಗಳವು ಮಾಡಿದ್ದ. ಜೈಲಿನಿಂದ ಬಂದ ಬಳಿಕವೂ ಕೃತ್ಯ ಮುಂದುವರಿಸಿದ್ದ. ಪೊಲೀಸರಿಗೆ ಸುಳಿವು ಸಿಗಬಾರದೆಂದು ತಿಂಗಳಿಗೊಮ್ಮೆ ಮನೆ ಬದಲಿಸುತ್ತಿದ್ದ. ಕೃತ್ಯಕ್ಕೆಂದು ಕದ್ದ ದ್ವಿಚಕ್ರ ವಾಹನ ಬಳಸುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಬೆಳಿಗ್ಗೆ ಹಾಗೂ ಸಂಜೆ ವೇಳೆಯಲ್ಲಿ ಆರೋಪಿಗಳು ನಗರದಲ್ಲಿ ಸುತ್ತಾಡುತ್ತಿದ್ದರು. ಒಂಟಿ ಮಹಿಳೆಯರನ್ನು ಹಿಂಬಾಲಿಸಿ, ಸರ ಕಿತ್ತುಕೊಂಡು ಪರಾರಿಯಾಗುತ್ತಿದ್ದರು' ಎಂದು ಹೇಳಿದರು.

ಗಾಳಿ ಸಹಿತ ಮಳೆ: ಉರುಳಿಬಿದ್ದ ಮರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲದಿನಗಳಿಂದ ಮೋಡ ಕವಿದ ವಾತಾವರಣ ಕಾಣಿಸಿಕೊಳ್ಳುತ್ತಿದ್ದು, ಸೋಮವಾರ ಸಂಜೆಯಿಂದ ರಾತ್ರಿಯವರೆಗೆ ಗಾಳಿ ಸಹಿತ ಜೋರು ಮಳೆ ಸುರಿಯಿತು.

ನಗರದ ಹಲವೆಡೆ ಭಾನುವಾರ ಸಂಜೆಯೂ ಮಳೆ ಆಗಿತ್ತು. ನಂತರ, ಬಿಡುವು ನೀಡಿತ್ತು. ಸೋಮವಾರ ಬೆಳಿಗ್ಗೆಯಿಂದಲೇ ಹಲವು ಪ್ರದೇಶಗಳಲ್ಲಿ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನದ ನಂತರ ಅಲ್ಲಲ್ಲಿ ತುಂತುರು ಮಳೆ ಆರಂಭವಾಯಿತು. ಸಂಜೆಯ ನಂತರ ಮಳೆ ಅರ್ಭಟ ಜೋರಾಗಿತ್ತು.

ಮಳೆಗೂ ಮುನ್ನ ಜೋರು ಗಾಳಿ ಬೀಸಿದ್ದರಿಂದ, ಆನೇಪಾಳ್ಯ ಹಾಗೂ ಸದಾಶಿವನಗರದಲ್ಲಿ ಮರಗಳು ಉರುಳಿಬಿದ್ದಿವೆ. ಪ್ರಮುಖ ರಸ್ತೆಗಳ ಮೇಲೆಯೇ ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು.



ನಗರದಲ್ಲಿ ಸೋಮವಾರ ರಾತ್ರಿ ಮಳೆ ಸುರಿದು ಹೊಸೂರು ರಸ್ತೆಯಲ್ಲಿ ನೀರು ಧಾರಾಕಾರವಾಗಿ ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು

ಹೆಬ್ಬಾಳ, ಸಂಜಯನಗರ, ಆರ್‌.ಟಿ. ನಗರ, ಶಿವಾಜಿನಗರ, ಅಶೋಕನಗರ, ಎಂ.ಜಿ. ರಸ್ತೆ, ಕೋರಮಂಗಲ, ಮಡಿವಾಳ, ಶಾಂತಿನಗರ, ವಿಲ್ಸನ್ ಗಾರ್ಡನ್, ಚಾಮರಾಜಪೇಟೆ, ಬಸನವಗುಡಿ, ಜಯನಗರ, ಜೆ.ಪಿ. ನಗರ, ಹನುಮಂತನಗರ, ಗಿರಿನಗರ ಹಾಗೂ ಸುತ್ತಮುತ್ತ ಮಳೆ ಸುರಿಯಿತು.

ಕೆ.ಆರ್. ಮಾರುಕಟ್ಟೆ, ಮೆಜೆಸ್ಟಿಕ್, ಗಾಂಧಿನಗರ, ಚಿಕ್ಕಪೇಟೆ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಮಂಜುನಾಥ್ ನಗರ, ಲಗ್ಗೆರೆ, ಪೀಣ್ಯ, ಯಶವಂತಪುರ, ಸದಾಶಿವನಗರ, ರಾಜರಾಜೇಶ್ವರಿನಗರ, ಜ್ಞಾನಭಾರತಿ, ನಾಯಂಡನಹಳ್ಳಿ ಹಾಗೂ ಸುತ್ತಮುತ್ತ ಮಳೆ ಸುರಿಯಿತು.

ಕಚೇರಿ ಹಾಗೂ ಇತರೆ ಕೆಲಸ ನಿಮಿತ್ತ ಹೊರಗೆ ಬಂದಿದ್ದ ಜನ, ಸಂಜೆ ಮನೆಯತ್ತ ಹೊರಟಿದ್ದರು. ಮಳೆ ಜೋರಾಗಿ ಸುರಿದಿದ್ದರಿಂದ ಹಲವು ರಸ್ತೆಗಳ ಮೇಲೆಯೇ ನೀರು ಹರಿಯಿತು. ಇದರಿಂದಾಗಿ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ವಿಪರೀತ ದಟ್ಟಣೆ ಸಹ ಉಂಟಾಗಿತ್ತು.

'ಜೋರು ಗಾಳಿ ಸಮೇತ ಮಳೆ ಆಗಿದೆ. ಕೆಲವೆಡೆ ಮರದ ಕೊಂಬೆಗಳು ಬಿದ್ದಿರುವ ಬಗ್ಗೆ ದೂರುಗಳು ಬಂದಿವೆ. ಬೇರೆ ಹಾನಿ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಪ್ರವಾಸಕ್ಕೆ ಬಂದು ಡ್ರಗ್ಸ್ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸಿ ವೀಸಾದಡಿ ನಗರಕ್ಕೆ ಬಂದು ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆ ಕಿಂಗ್‌ಸ್ಲೆಯಾ (44) ಎಂಬುವರನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಕಿಂಗ್‌ಸ್ಲೆಯಾ, 2018 ರಲ್ಲಿ ನಗರಕ್ಕೆ ಬಂದಿದ್ದ. ಆಫ್ರಿಕಾ ಪೆಡ್ಲರ್‌ಗಳ ಜೊತೆ ಒಡನಾಡವಿಟ್ಟುಕೊಂಡು, ಅವರಿಂದ ಡ್ರಗ್ಸ್ ಖರೀದಿ ಮಾಡುತ್ತಿದ್ದ. ಈತನನ್ನು ಬಂಧಿಸಿ ₹ 5.60 ಲಕ್ಷ ಮೌಲ್ಯದ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಚ್‌.ಬಿ.ಆರ್ ಬಡಾವಣೆಯ 3ನೇ ಹಂತದ ಬಿಡಿಎ ಉದ್ಯಾನ ಎದುರು ಅ. 9ರಂದು ಸುತ್ತಾಡುತ್ತಿದ್ದ ಆರೋಪಿ, ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರಲು ಯತ್ನಿಸುತ್ತಿದ್ದ. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಸೆರೆ ಹಿಡಿಯಲಾಯಿತು' ಎಂದು ತಿಳಿಸಿದರು.

'ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಉದ್ಯಮಿಗಳು ಹಾಗೂ ಇತರರಿಗೆ ಹಲವು ವರ್ಷಗಳಿಂದ ಆರೋಪಿ ಡ್ರಗ್ಸ್ ಮಾರುತ್ತಿದ್ದ. ಈತನ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದೂ ಹೇಳಿದರು.

ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆಯ ಕೊಳವೆ ಮಾರ್ಗ ಸಿದ್ಧ • ಮೇ ಅಂತ್ಯಕ್ಕೆ ಕಾವೇರಿ ನೀರು ಪೂರೈಕೆ

110 ಹಳ್ಳಿಗಳ ಕನಸು ಸಾಕಾರಕ್ಕೆ ಕೆಲವು ತಿಂಗಳು ಬಾಕಿ


• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಗೆ ಸೇರಿಕೊಂಡಿರುವ 110 ಹಳ್ಳಿ ನಿವಾಸಿಗಳ ಕನಸಾಗಿದ್ದ ಕುಡಿಯುವ ನೀರಿನ ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆ ಸಾಕಾರಗೊಳ್ಳುವ ಹಂತಕ್ಕೆ ಬಂದು ನಿಂತಿದೆ. ಕುಡಿಯುವ ನೀರು ಪೂರೈಕೆ ಮಾರ್ಗ ಪೂರ್ಣಗೊಂಡಿದ್ದು, ಕಾವೇರಿ 5ನೇ ಹಂತ ಪೂರ್ಣಗೊಂಡರೆ ನೀರು ಸರಬರಾಜು ಆರಂಭವಾಗುತ್ತದೆ. ಇನ್ನು ಒಳಚರಂಡಿ ವ್ಯವಸ್ಥೆ ಕೊಳವೆ ಮಾರ್ಗ ಬಹುತೇಕ ಪೂರ್ಣಗೊಂಡಿದ್ದು, ಕೆಲವು ಅಂತಿಮ ಹಂತದ ಕಾಮಗಾರಿಗಳು ನಡೆಯುತ್ತಿದ್ದು 2023ರ ಮಾರ್ಚ್ ವೇಳೆಗೆ ಮುಗಿಯಲಿವೆ.

ಬಿಬಿಎಂಪಿಯ ಐದು ವಲಯಗಳಲ್ಲಿರುವ 110 ಹಳ್ಳಿಗಳಿಗೆ ಕುಡಿಯುವ ನೀರು ಕಲ್ಪಿಸುವ ಉದ್ದೇಶದಿಂದ 2017ರಲ್ಲಿ ಯೋಜನೆ ಆರಂಭಿಸಲಾಯಿತು. 2018ರಲ್ಲಿ ಒಳಚರಂಡಿ ಯೋಜನೆಗೆ ಚಾಲನೆ ಸಿಕ್ಕಿತು. ಈ ಎರಡೂ ಯೋಜನೆಗಳ ಕಾಮಗಾರಿ ಬಹುತೇಕ ಮುಗಿದಿದೆ. ಹಳ್ಳಿಗಳ ಒಳಚರಂಡಿಯ ಕೊಳವೆ ಮಾರ್ಗವನ್ನು ಮುಖ್ಯ ಮಾರ್ಗಕ್ಕೆ ಸಂಪರ್ಕಿಸುವ ಕಾಮಗಾರಿ ಕೆಲವು ಭಾಗದಲ್ಲಿ ಮಾತ್ರ ಆಗಿದೆ. ಒಳಚರಂಡಿ ನೀರು ಸಂಸ್ಕರಣೆ ಘಟಕಗಳು (ಎಸ್‌ಟಿಪಿ) ಕಾರ್ಯಾರಂಭವಾಗದ ಹೊರತು ಎಲ್ಲೆಡೆಯೂ ಮನೆಗಳ ಒಳಚರಂಡಿ ನೀರಿನ ಸಂಪರ್ಕ ನೀಡುವುದು ಸದ್ಯಕ್ಕೆ ಸಾಧ್ಯವಿಲ್ಲ.

ತೊರೆಕಾಡನಹಳ್ಳಿಯಿಂದ ಹಾರೋಹಳ್ಳಿಯವರೆಗೆ ಕೊಳವೆ ಮಾರ್ಗ ಪೂರ್ಣಗೊಂಡಿದ್ದು, ಎಂಎಸ್ ಪೈಪ್‌ನಲ್ಲಿ ಅಲ್ಟ್ರಾಸೋನಿಕ್ ಪರೀಕ್ಷೆಯನ್ನು ಸಹ ಪೂರ್ಣಗೊಳಿಸಲಾಗಿದೆ. ತಾತಗುಣಿಯ ನಂತರದ ಪಂಪ್‌ಸ್ಟೇಷನ್‌ಗಳಿಂದ 110 ಹಳ್ಳಿಗಳಿಗೆ ನೀರನ್ನು ಪಂಪ್ ಮಾಡಲಾಗುತ್ತದೆ. ಈ ಪಂಪ್‌ಸ್ಟೇಷನ್ ಹಾಗೂ ಜಲಾಗಾರಗಳ ಕಾಮಗಾರಿ ಪೂರ್ಣಗೊಳ್ಳುವುದಷ್ಟೇ ಸದ್ಯಕ್ಕೆ ಬಾಕಿ ಇರುವ ಕಾಮಗಾರಿ.

ಜೈಕಾದಿಂದ ಸಾವಿರ ಕೋಟಿ: 110 ಹಳ್ಳಿಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಸಂಪರ್ಕಿಸಿ ಅವುಗಳನ್ನು ಎಸ್‌ಟಿಪಿವರೆಗೂ ಕೊಂಡೊಯ್ಯುವ ಯೋಜನೆಗೆ ಜೈಕಾ ಸಂಸ್ಥೆ 2019ರಲ್ಲಿ ಅನುಮೋದನೆ ನೀಡಿತು. ₹1,014 ಕೋಟಿ ವೆಚ್ಚದ ಜಲಮಂಡಳಿಯ ಯೋಜನೆಗೆ 2021ರಲ್ಲಿ ಗುತ್ತಿಗೆಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಯನ್ನು ಆರ್.ಆರ್. ನಗರ ಮತ್ತು ದಾಸರಹಳ್ಳಿ ವಲಯ, ಮಹದೇವಪುರ ಮತ್ತು ಬೊಮ್ಮನಹಳ್ಳಿ ವಲಯ ಹಾಗೂ ಬ್ಯಾಟರಾಯನಪುರ ವಲಯ ಎಂದು ಮೂರು ಪ್ಯಾಕೇಜ್ ಆಗಿ ವಿಂಗಡಿಸಲಾಗಿದೆ. ಈ ಮೂಲಕ ಒಳಚರಂಡಿ ನೀರನ್ನು ಎಸ್‌ಟಿಪಿವರೆಗೆ ಕೊಂಡೊಯ್ಯಲು ವ್ಯವಸ್ಥೆ ಕಲ್ಪಿಸಲಾಗುತ್ತದೆ. ಒಳಚರಂಡಿ ನೀರನ್ನು ಪಂಪ್ ಮಾಡಲು 8 ಮಧ್ಯಂತರ ಒಳಚರಂಡಿ ನೀರಿನ ಜಲಾಗಾರ (ಐಎಸ್‌ಪಿಎಸ್) ಸ್ಥಾಪಿಸಲಾಗುತ್ತಿದೆ. 213 ಕಿ.ಮೀಗಳಷ್ಟು ಟ್ರಂಕ್ ಸೀವರ್ ಅಳವಡಿಸಲಾಗುತ್ತಿದೆ. 14 ತ್ಯಾಜ್ಯ ನೀರು ಸಂಸ್ಕರಣೆ ಘಟಕ (ಎಸ್‌ಟಿಪಿ) ಸ್ಥಾಪಿಸುವುದೂ ಈ ಯೋಜನೆಯಲ್ಲಿದೆ. ಎಲ್ಲ ಎಸ್‌ಟಿಪಿಗಳು ಕೆರೆಗಳ ಪಕ್ಕದಲ್ಲೇ ಇವೆ. ಸಂಸ್ಕರಿಸಿದ ನೀರನ್ನು ಮಾತ್ರ ಕೆರೆಗಳಿಗೆ ಹರಿಸುವುದು ಇದರ ಉದ್ದೇಶ. ಈ ಯೋಜನೆ 2024ಕ್ಕೆ ಮುಗಿಯುವ ನಿರೀಕ್ಷೆ ಇದೆ.



ಎಸ್‌ಟಿಪಿ ಎಲ್ಲೆಲ್ಲಿ? (ಎಂಎಲ್‌ಡಿ)

ವರ್ತೂರು	25	ಜಕ್ಕೂರು	7
ಬಿಳಿಶಿವಾಲೆ	17	ಯಲಹಂಕ	6
ಹೆಮ್ಮಿಗೆಪುರ	13	ಹೊಸಹಳ್ಳಿ	6
ಕರಿಹೋಬನಹಳ್ಳಿ	10	ತಲಘಟ್ಟಪುರ	5
ನಾಗಸಂದ್ರ	9	ಪಿಳ್ಳಗಾನಹಳ್ಳಿ	4
ಸೋಮಪುರ	8	ಚಿಕ್ಕಬಾಣಾವರ	4
ದೊಡ್ಡಬೆಟ್ಟಹಳ್ಳಿ	7	ಹೇರೋಹಳ್ಳಿ	3
		ಒಟ್ಟು	124

ಎಲ್ಲ ಮುಗಿಯಲು ಇನ್ನೂ ಒಂದು ಸಾವಿರ ಕೋಟಿ ಬೇಕು...

ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸಲು ರಾಜ್ಯ ಸರ್ಕಾರ 2017ರಲ್ಲಿ ಒಂದು ಸಾವಿರ ಕೋಟಿ ಬಿಡುಗಡೆ ಮಾಡಿತ್ತು. ಈ ಮೊತ್ತಕ್ಕೆ ಅನುಗುಣವಾಗಿ ಮಾತ್ರ ಯೋಜನೆ ಅನುಷ್ಠಾನ ಮಾಡಲು ಸೂಚಿಸಿತ್ತು. ಜಲಸಂಗ್ರಹಗಾರಗಳನ್ನು ನಿರ್ಮಿಸಬೇಕಾಯಿತು. ಅದಕ್ಕೆ ಹಣ ವ್ಯಯವಾಯಿತು. ಹೀಗಾಗಿ, ಕುಡಿಯುವ ನೀರು ಯೋಜನೆಯಲ್ಲಿ 110 ಹಳ್ಳಿಗಳಲ್ಲೂ ಎಲ್ಲ ಕಾಮಗಾರಿ ಮುಗಿದಿಲ್ಲ. ಹತ್ತಾರು ಹಳ್ಳಿಗಳ ವ್ಯಾಪ್ತಿಯಲ್ಲಿ ಕೊಳವೆ ಮಾರ್ಗ ಅಳವಡಿಸಲಾಗಿಲ್ಲ.

2018ರಲ್ಲಿ ಇದೇ ರೀತಿ ಒಳಚರಂಡಿ ವ್ಯವಸ್ಥೆಗೆ ಒಂದು ಸಾವಿರ ಕೋಟಿ ನೀಡಲಾಗಿತ್ತು. 110 ಹಳ್ಳಿಗಳಲ್ಲೂ ಒಳಚರಂಡಿ ಮಾರ್ಗ ಅಳವಡಿಕೆಯಾಗಿಲ್ಲ. ಉತ್ತರ ಹಾಗೂ ಪೂರ್ವಭಾಗದಲ್ಲಿ ಅತಿಹೆಚ್ಚು ಜನಸಂಖ್ಯೆ ಹಾಗೂ ಕ್ಷಿಪ್ರ ಪ್ರಗತಿಯನ್ನು ಹೊಂದಿದೆ. ಹೀಗಾಗಿ ಐದಾರು ಹಳ್ಳಿಗಳಲ್ಲಿ ಒಳಚರಂಡಿ ವ್ಯವಸ್ಥೆ ಮಾಡಲಾಗಿಲ್ಲ. ಈ ಯೋಜನೆಯೂ ಮುಗಿದುಹೋಗಿದೆ.

ಈ ಎರಡೂ ಯೋಜನೆಗಳು ಮುಗಿದುಹೋಗಿದ್ದರೂ 110 ಹಳ್ಳಿಗಳಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಸಂಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಹೀಗಾಗಿ ಜಲಮಂಡಳಿ 'ಫೇಸ್–2' ಎಂದು 'ಮಿಸ್ಸಿಂಗ್ ಬಿಟ್' ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಜಲಮಂಡಳಿ ತಯಾರಿ ರಾಜ್ಯ ಸರ್ಕಾರಕ್ಕೆ ಕಳುಹಿಸಿದೆ. ಆದರೆ ಈವರೆಗೆ ರಾಜ್ಯ ಸರ್ಕಾರ ಇದಕ್ಕೆ ಅನುಮೋದನೆ ನೀಡಿಲ್ಲ. ಈ ಯೋಜನೆ ಅನುಷ್ಠಾನವಾದ ಹೊರತು 110 ಹಳ್ಳಿಗಳಲ್ಲಿ ಪೂರ್ಣವಾಗಿ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆ ಅನುಷ್ಠಾನ ಸಾಧ್ಯವಾಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದರು.

5ನೇ ಹಂತ ಮೇ 2023ಕ್ಕೆ

ಜೈಕಾ ಸಂಸ್ಥೆಯ ₹4 ಸಾವಿರ ಕೋಟಿ ವೆಚ್ಚದ ಕಾವೇರಿ 5ನೇ ಹಂತ ಮೇ 2023ಕ್ಕೆ ಮುಗಿಯಲಿದೆ. 775 ಎಂಎಲ್‌ಡಿ ನೀರನ್ನು ತರಲಾಗುತ್ತಿದೆ. 205 ಕಿ.ಮೀ ಕೊಳವೆ ಮಾರ್ಗವನ್ನು ಅಳವಡಿಸುವ ಕಾಮಗಾರಿ 2019ರಿಂದ ನಡೆಯುತ್ತಿದೆ. ತೊರೆಕಾಡನಹಳ್ಳಿ, ಹಾರೋಹಳ್ಳಿ, ತಾತಗುಣಿ ಮೂರು ಕಡೆ ನೀರು ಸಂಸ್ಕರಣೆ ಘಟಕ (ಡಬ್ಲ್ಯುಟಿಪಿ) ಸ್ಥಾಪಿಸಲಾಗುತ್ತಿದೆ. ಜಲಾಗಾರ, ಪಂಪಿಂಗ್ ಸ್ಟೇಷನ್‌ಗಳು ಇದರಲ್ಲಿ ಸೇರಿವೆ. ಈ ಯೋಜನೆ ಸುಮಾರು ಶೇ 70ರಷ್ಟು ಮುಗಿದಿದೆ. ಮಾರ್ಚ್ ಅಥವಾ ಏಪ್ರಿಲ್‌ಗೆ ಈ ಯೋಜನೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಈ ನೀರು ಬಂದರೆ ಮಾತ್ರ 110 ಹಳ್ಳಿಗಳಿಗೆ ನೀರು ಪೂರೈಸಲಾಗುತ್ತಿದೆ. ಏಕೆಂದರೆ ಅಲ್ಲಿಂದ ಬರುವ ನೀರನ್ನು ಪಂಪ್ ಸ್ಟೇಷನ್‌ಗಳ ಮೂಲಕ 110 ಹಳ್ಳಿಗಳಿಗೆ ಸರಬರಾಜು ಮಾಡಲಾಗುತ್ತದೆ. ಈ ವ್ಯಾಪ್ತಿಯಲ್ಲಿ ₹900 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಜಲಮಂಡಳಿಯ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಕೆ.ಎನ್. ರಾಜೀವ್ ತಿಳಿಸಿದರು.

ಕುಡಿಯುವ ನೀರು

ಆರಂಭ: ಮೇ 2017 — ವೆಚ್ಚ ₹1,500 ಕೋಟಿ (ಸರ್ಕಾರ ₹1,000 ಕೋಟಿ; ಜಲಮಂಡಳಿ ₹500 ಕೋಟಿ) — ಕೊಳವೆ ಮಾರ್ಗ 2,815 ಕಿ.ಮೀ — 1: 50 ಎಂಎಲ್‌ಡಿ ಸಾಮರ್ಥ್ಯದ ನೆಲಮಟ್ಟದ ಜಲಸಂಗ್ರಹಗಾರ — 8: ಮೇಲ್ಮಟ್ಟದ ನೀರು ಸಂಗ್ರಹಣಾಗಾರ

ಒಳಚರಂಡಿ ವ್ಯವಸ್ಥೆ

ಆರಂಭ: ಮಾರ್ಚ್ 2018 — ಒಟ್ಟು ವೆಚ್ಚ ₹1,000 ಕೋಟಿ (ಜಲಮಂಡಳಿ ₹500 ಕೋಟಿ; ಸರ್ಕಾರ ₹250 ಕೋಟಿ) — ಸರ್ಕಾರ ₹250 ಕೋಟಿ ಸಾಲದ ರೂಪದಲ್ಲಿ ನೀಡಿರುವ ಹಣ — 1,538 ಕಿ.ಮೀ ಒಟ್ಟು ಒಳಚರಂಡಿ ಮಾರ್ಗ — 10 ಕಿ.ಮೀ ಒಳಚರಂಡಿ ಮಾರ್ಗ ಬಾಕಿ

ಪ್ರಜಾವಾಣಿ ಗ್ರಾಫಿಕ್ಸ್: ಶಶಿಧರ ಹಳೇಮನಿ

110 ಹಳ್ಳಿಗಳು

ಯಲಹಂಕ ವಲಯ

ಯಲಹಂಕ ವಿಧಾನಸಭೆ ಕ್ಷೇತ್ರ: ಗೋವಿಂದಪುರ, ಮಂಚೇನಹಳ್ಳಿ, ವಾಸುದೇವಪುರ, ಹಾರೋಹಳ್ಳಿ, ಕೆಂಚನಹಳ್ಳಿ, ಅನಂತಾಪುರ, ಚಿಕ್ಕಬೆಟ್ಟಹಳ್ಳಿ, ದೊಡ್ಡ ಬೆಟ್ಟಹಳ್ಳಿ.

ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರ: ಬೆಲ್ಲಹಳ್ಳಿ, ಚೊಕ್ಕನಹಳ್ಳಿ, ಕಟ್ಟಿಗೇನಹಳ್ಳಿ, ತಿರುಮೇನಹಳ್ಳಿ, ಶ್ರೀನಿವಾಸಪುರ, ದಾಸರಹಳ್ಳಿ, ರಾಚೇನಹಳ್ಳಿ, ಥಣಿಸಂದ್ರ.

ಮಹದೇವಪುರ ವಲಯ

ಕೆ.ಆರ್.ಪುರ ವಿಧಾನಸಭೆ ಕ್ಷೇತ್ರ: ಅಮಾನಿ ಬೈರತಿಖಾನೆ; ಚಲ್ಲಕೆರೆ; ಗೆದ್ದಲಹಳ್ಳಿ, ಹೊರಮಾವು, ಹೊರಮಾವು ಅಗರ, ಕೊತ್ತನೂರು ನಾರಾಯಣಪುರ, ಕೊತ್ತನೂರು, ಕ್ಯಾಲಸನಹಳ್ಳಿ, ನಗರೇಶ್ವರ ನಾಗೇನಹಳ್ಳಿ, ಕೆ. ಚನ್ನಸಂದ್ರ, ಕಲ್ಕೆರೆ.

ಮಹದೇವಪುರ ವಿಧಾನಸಭೆ ಕ್ಷೇತ್ರ: ಬೆಳತೂರು, ಬಿಳಿಶಿವಾಲೆ, ಬೈರತಿ, ಕುಂಬೇನ ಅಗ್ರಹಾರ, ವಾರಣಾಸಿ, ಬಳಗೆರೆ, ಬೆಳ್ಳಂದೂರು ಅಮಾನಿಕೆರೆ, ಚಿಕ್ಕಬೆಳ್ಳಂದೂರು, ಗುಂಜೂರು, ಖಾನೆಕಂದಾಯ, ಪಣತ್ತೂರು, ಸೊರಹುಣಿಸೆ, ವರ್ತೂರು, ಅಂಬಲಿಪುರ, ಬೆಳ್ಳಂದೂರು, ಭೋಗನಹಳ್ಳಿ, ದೇವರಬೀಸನಹಳ್ಳಿ, ದೊಡ್ಡಕನ್ನಳ್ಳಿ, ಹರಳೂರು, ಜುನ್ನಸಂದ್ರ, ಕಾಡಬೀಸನಹಳ್ಳಿ, ಕೈಕೊಂಡಹಳ್ಳಿ, ಕರಿಯಮ್ಮನ ಅಗ್ರಹಾರ, ಕಾಸವನಹಳ್ಳಿ, ಚನ್ನಸಂದ್ರ, ಕಾಡುಗೋಡಿ ಪ್ಲಾಂಟೇಷನ್, ಹಗದೂರು, ನಾಗೊಂಡಹಳ್ಳಿ, ರಾಮಗೊಂಡನಹಳ್ಳಿ, ಸಿದ್ದಾಪುರ, ತುರುಬರಹಳ್ಳಿ.

ಬೊಮ್ಮನಹಳ್ಳಿ ವಲಯ

ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರ: ಅರೆಹಳ್ಳಿ, ಗುಬ್ಬಲಾಳು, ಸುಬ್ರಮಣ್ಯಪುರ, ತುರುಹಳ್ಳಿ, ಉತ್ತರಹಳ್ಳಿ, ವಡ್ಡರಪಾಳ್ಯ, ಬಸಾಪುರ, ಬಸವನಪುರ, ಬೇಗೂರು, ಬೆರಟೇನ ಅಗ್ರಹಾರ, ಚಂದ್ರಶೇಖರಪುರ, ಚಿಕ್ಕತೋಗೂರು, ದೊಡ್ಡತೋಗೂರು, ಕಾಳೇನ ಅಗ್ರಹಾರ, ಕಮ್ಮನಹಳ್ಳಿ, ಯಲೇನಹಳ್ಳಿ, ಗೊಟ್ಟಿಗೆರೆ, ಪಿಳಗಾನಹಳ್ಳಿ, ಆಲಹಳ್ಳಿ, ಅಂಜನಾಪುರ, ಗೊಲ್ಲಹಳ್ಳಿ, ಕೆಂಬತ್ತಹಳ್ಳಿ, ತಿಪ್ಪಸಂದ್ರ, ದೊಡ್ಡಕಲ್ಲಸಂದ್ರ, ವಸಂತಪುರ, ನಾಗನಾಥಪುರ, ಪರಪ್ಪನ ಅಗ್ರಹಾರ. **ಆನೇಕಲ್ ವಿಧಾನಸಭೆ ಕ್ಷೇತ್ರ:** ಕೂಡ್ಲು

ರಾಜರಾಜೇಶ್ವರಿನಗರ ವಲಯ

ಯಶವಂತಪುರ ವಿಧಾನಸಭೆ ಕ್ಷೇತ್ರ: ದೊಡ್ಡಬಿದರಕಲ್ಲು, ಅಂದ್ರಹಳ್ಳಿ, ಹೊಸಹಳ್ಳಿ ಜಿ. ಪಾಳ್ಯ, ಕರಿಹೋಬನಹಳ್ಳಿ, ಲಿಂಗಧೀರನಹಳ್ಳಿ, ಗಿಡ್ಡಕೊನೇನಹಳ್ಳಿ, ಹೇರೋಹಳ್ಳಿ, ಸೂಣ್ಣೇನಹಳ್ಳಿ, ಉಲ್ಲಾಳು, ಗಾಣಕಲ್, ಹೆಮ್ಮಿಗೆಪುರ, ಹೊಸಹಳ್ಳಿ, ರಘುವನಹಳ್ಳಿ, ಸೋಮಪುರ, ತಲಘಟ್ಟಪುರ, ಯು.ಎಂ. ಕಾವಲ್, ವಾಜರಹಳ್ಳಿ, ವರಾಹಸಂದ್ರ.

ದಾಸರಹಳ್ಳಿ ವಲಯ

ದಾಸರಹಳ್ಳಿ ವಿಧಾನಸಭೆ ಕ್ಷೇತ್ರ: ಅಬ್ಬಿಗೆರೆ, ಚಿಕ್ಕಸಂದ್ರ, ಮ್ಯಾದರಹಳ್ಳಿ, ಶೆಟ್ಟಿಹಳ್ಳಿ, ಸಿಡೇದಹಳ್ಳಿ.

ಉದ್ಯಮಿ ಹತ್ಯೆ ಪ್ರಕರಣ ಮೂವರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದಲ್ಲಿ ಕೊಲೆಗೀಡಾಗಿದ್ದ ಹೈದರಾಬಾದ್ ಉದ್ಯಮಿ ಮನೋಜ್ ಕುಮಾರ್ ಗ್ರಂಧಿ ಹತ್ಯೆಯ ಮೂವರು ಆರೋಪಿಗಳಿಗೆ ನಗರದ ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ 52ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಬಿ.ಜಿ.ಪ್ರಮೋದ್, 'ಸಾಕ್ಷ್ಯಗಳ ಆಧಾರದಡಿ ಆರೋಪ ಸಾಬೀತಾಗಿದೆ' ಎಂದು ಇದೇ 1ರಂದು ಮೂವರೂ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ.

ಪ್ರಕರಣದಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಸಿ.ಎಚ್. ಹನುಮಂತರಾಯ ಅವರು ಮಂಡಿಸಿದ್ದ ವಾದವನ್ನು ಮಾನ್ಯ ಮಾಡಿದ್ದಾರೆ.

ಪ್ರಕರಣವೇನು?: 44 ವರ್ಷದ ಮನೋಜ್ ಕುಮಾರ್ ಗ್ರಂಧಿ ಅವರು, 2012ರ ಫೆಬ್ರುವರಿ 6ರಂದು ಇಂಡಿಗೊ ವಿಮಾನದಲ್ಲಿ ಹೈದರಾಬಾದ್‌ನಿಂದ ಬೆಂಗಳೂರಿಗೆ ಬಂದಿದ್ದರು. ಕಾರ್ ಝೋನ್ ಕಂಪನಿಗೆ ಸೇರಿದ ಕಾರೊಂದನ್ನು ಬಾಡಿಗೆಗೆ ಪಡೆದಿದ್ದ ಅವರು ಪ್ರಕರಣದ ಒಂದನೇ ಆರೋಪಿ ರವಿಕುಮಾರ್ ಜೊತೆ ನಗರದಲ್ಲಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಮನೋಜ್ ಕುಮಾರ್ ತಮ್ಮ ಬ್ಯಾಗ್ ನಲ್ಲಿ ಇರಿಸಿಕೊಂಡಿದ್ದ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಆಭರಣಗಳನ್ನು ರವಿಕುಮಾರ್ ನೋಡಿದ್ದ. 2ನೇ ಆರೋಪಿ ಕೃಷ್ಣೇಗೌಡ ಮತ್ತು 3ನೇ ಆರೋಪಿ ಶಿವಲಿಂಗಯ್ಯ ಜತೆ ಸೇರಿ, ಮನೋಜ್ ಕುಮಾರ್ ಅವರನ್ನು ಕೊಂದು ಅವರಿಗೆ ಸೇರಿದ ಆಭರಣಗಳನ್ನು ದೋಚುವ ಸಂಚು ರೂಪಿಸಿದ್ದ.

ಮನೋಜ್ ಅವರನ್ನು ಸುತ್ತಾಡಿಸುತ್ತಿದ್ದ ವೇಳೆ ರವಿಕುಮಾರ್, 'ಕಾರ್ ಗೇರ್ ಬೀಳುತ್ತಿಲ್ಲ' ಎಂದು ಗಾಡಿಯನ್ನು ನಿಲ್ಲಿಸಿದ್ದ. ಈ ವೇಳೆ ಮೊದಲೇ ರೂಪಿಸಿದ್ದ ಸಂಚಿನಂತೆ 2 ಮತ್ತು 3ನೇ ಆರೋಪಿಗಳು 2012ರ ಫೆಬ್ರುವರಿ 7ರಂದು ಬಳ್ಳಾರಿ ರಸ್ತೆಯ ವಿಂಡ್ಸರ್ ಮ್ಯಾನರ್ ಬ್ರಿಡ್ಜ್ ಬಳಿ ನಿಂತಿದ್ದ ಕಾರಿನ ಬಳಿ ಬಂದು ಮನೋಜ್ ಕುಮಾರ್‌ಗೆ ಚಾಕು ತೋರಿಸಿ, ಹೆದರಿಸಿ, ಕಾರಿನ ಸೀಟಿನ ಕೆಳಗೆ ಕೂರಿಸಿ, ಬಾಯಿಗೆ ಬಟ್ಟೆ ತುರುಕಿ, ಕತ್ತಿಗೆ ನೈಲಾನ್ ಹಗ್ಗ ಬಿಗಿದು, ಉಸಿರುಗಟ್ಟಿಸಿ ಕೊಲೆ ಮಾಡಿದ್ದರು.

ನಂತರ ಶವವನ್ನು ಚಾರ್ಮಾಡಿ ಘಾಟ್‌ನಲ್ಲಿ ಬಿಸಾಡಿ, ಮೃತರ ಬಟ್ಟೆ ಮತ್ತು ಅವರೊಟ್ಟಿಗೆ ಇದ್ದ ಪುಸ್ತಕಗಳನ್ನು ಸುಟ್ಟು ಹಾಕಿ, ಕದ್ದ ಆಭರಣಗಳನ್ನು ಬಚ್ಚಿಟ್ಟಿದ್ದರು.

ಈ ಸಂಬಂಧ ಮನೋಜ್ ಕುಮಾರ್ ಮನೆಯವರು ನೀಡಿದ ದೂರಿನ ಆಧಾರದಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು, ತನಿಖೆ ನಡೆಸಿದ್ದ ಶೇಷಾದ್ರಿಪುರಂ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದರು. ₹ 2 ಕೋಟಿ ಮೌಲ್ಯದ ಆಭರಣಗಳನ್ನು ವಶಪಡಿಸಿಕೊಂಡು, ಕೋರ್ಟ್‌ಗೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಪ್ರಕೃತಿ ವಿಕೋಪ ವಿಶ್ವಬ್ಯಾಂಕ್ ನೆರವು

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ವಾತಾವರಣ ವೈಪರೀತ್ಯದಿಂದ ಉಂಟಾಗುತ್ತಿರುವ ಪ್ರಕೃತಿ ವಿಕೋಪವನ್ನು ನಿಯಂತ್ರಿಸಲು ತಾಂತ್ರಿಕ ಹಾಗೂ ಆರ್ಥಿಕ ನೆರವು ನೀಡಲು ವಿಶ್ವಬ್ಯಾಂಕ್ ಆಸಕ್ತಿ ತೋರಿದೆ.

ಮಳೆ ನೀರಿನ ಸಮರ್ಪಕ ಉಪಯೋಗ, ಮಳೆಗಾಲದ ವೇಳೆಯಾಗುವ ಹಾನಿಯನ್ನು ತಡೆಯುವುದು, ಕೆರೆ ನೀರು ಬಳಕೆ, ರಾಜಕಾಲುವೆಗೆ ಒಳಚರಂಡಿಯ ನೀರು ಬಿಡದಂತೆ ತಡೆಯುವುದು, ಮಳೆಯ ನೀರನ್ನು ನಾಗರಿಕರ ಬಳಕೆಗೆ ಉಪಯೋಗವಾಗುವಂತೆ ಮಾಡಲು ಯೋಜನೆ ರೂಪಿಸುವುದು ಸೇರಿದಂತೆ ಇನ್ನಿತರೆ ವಿಷಯಗಳ ಬಗ್ಗೆ ವಿಶ್ವಬ್ಯಾಂಕ್ ಅಧಿಕಾರಿಗಳು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಎಂಜಿನಿಯರಿಂಗ್ ವಿಭಾಗದ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಪ್ರಾತ್ಯಕ್ಷಿಕೆ ಮೂಲಕ ಹಲವು ವಿಷಯಗಳನ್ನು ವಿವರಿಸಿದರು. ವಿಶ್ವಬ್ಯಾಂಕ್ ಪ್ರತಿನಿಧಿಗಳು ಕೋರಮಂಗಲ ರಾಜಕಾಲುವೆ(ಕೆ-100) ಕೆ.ಆರ್.ಮಾರುಕಟ್ಟೆಯಿಂದ ಬೆಳ್ಳಂದೂರು ಕೆರೆಯವರೆಗಿನ 9.6 ಕಿ.ಮೀ ಉದ್ದದ ರಾಜಕಾಲುವೆಯಲ್ಲಿ ಜಲಮಾರ್ಗ ಯೋಜನೆ ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಿಶೇಷ ಆಯುಕ್ತ ಪಿ.ಎನ್.ರವೀಂದ್ರ ಇದ್ದರು.

ವಿಶ್ವ ಬ್ಯಾಂಕ್ ಪ್ರತಿನಿಧಿಗಳು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರೊಂದಿಗೆ ರಾಜ್ಯ ವಿವಿಧ ವಲಯಗಳಲ್ಲಿ ವಾತಾವರಣದ ಸ್ಥಿತಿಸ್ಥಾಪಕತ್ವ ಕುರಿತಾದ ಸಂವಾದ ನಡೆಸಿದರು. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೆಲ್ವ ಕುಮಾರ್, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ಇದ್ದರು.

'ಗ್ರಾಪಂ: ಅಧಿಕಾರ ಮೊಟಕು ಪ್ರಸ್ತಾವ ಕೈಬಿಡಿ'

ಬೆಂಗಳೂರು: ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರ ಅಧಿಕಾರಗಳನ್ನು ಮೊಟಕುಗೊಳಿಸುವ ಪ್ರಸ್ತಾವವನ್ನು ತಕ್ಷಣವೇ ಕೈಬಿಡಬೇಕು ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆಗ್ರಹಿಸಿದ್ದಾರೆ.

ಈ ಕುರಿತು ಅವರು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ.

'ಗ್ರಾಮ ಪಂಚಾಯಿತಿಗಳ ಆಡಳಿತ ವ್ಯವಸ್ಥೆಯಲ್ಲಿ ತರಲು ಹೊರಟಿರುವ ಬದಲಾವಣೆಯು ಸ್ಥಳೀಯ ಸಂಸ್ಥೆಗಳ ಬಲ ಕುಗ್ಗಿಸುವಂತಿದೆ. ಚುನಾಯಿತ ಸದಸ್ಯರ ಅಧಿಕಾರಗಳನ್ನು ಮೊಟಕುಗೊಳಿಸಿ, ಅಂತಹ ಅಧಿಕಾರಗಳನ್ನು ಅಧಿಕಾರಿಗಳ ಕೈಗೆ ವರ್ಗಾಯಿಸುವುದು ಸರಿಯಲ್ಲ' ಎಂದು ಹೇಳಿದ್ದಾರೆ.

ಎಸಿಬಿ ರದ್ದು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಜಾ

ಕರ್ನಾಟಕ ಪೊಲೀಸ್ ಮಹಾಸಂಘಕ್ಕೆ ತರಾಟೆ

ಪ್ರಜಾವಾಣಿ ವಾರ್ತೆ



ನವದೆಹಲಿ: ಕರ್ನಾಟಕದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ರದ್ದುಗೊಳಿಸಿ ಅಲ್ಲಿನ ಹೈಕೋರ್ಟ್ ಆಗಸ್ಟ್ 11ರಂದು ನೀಡಿರುವ ಆದೇಶವನ್ನು ಪ್ರಶ್ನಿಸಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಹಿಮಾ ಕೊಹ್ಲಿ ಅವರನ್ನು ಒಳಗೊಂಡ ನ್ಯಾಯಪೀಠವು, ಕನಕರಾಜು ಹಾಗೂ ಕರ್ನಾಟಕ ಪೊಲೀಸ್ ಮಹಾಸಂಘ ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳನ್ನು ವಜಾಗೊಳಿಸಿತು.

ಎಸಿಬಿಯನ್ನು ರದ್ದುಗೊಳಿಸಿ ಎಲ್ಲ ಬಾಕಿ ಇರುವ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವರ್ಗಾಯಿಸಿರುವ ಹೈಕೋರ್ಟ್ ಆದೇಶದ ಬಗ್ಗೆ ಅರ್ಜಿದಾರರಿಗೆ ತಕರಾರು ಇರುವುದು ಏಕೆ ಎಂದು ನ್ಯಾಯಪೀಠ ಪ್ರಶ್ನಿಸಿತು. 'ನಿಮಗೆ ಈ ವಿಷಯದಲ್ಲಿ ತಕರಾರು ಇರುವುದು ಏಕೆ' ಎಂದು ಪೀಠ ಕೇಳಿತು.

'ಪ್ರಕರಣದ ವಿಚಾರಣೆಯ ಅಧಿಕಾರ ಲೋಕಾಯುಕ್ತದ ಬಳಿ ಇರಲಿದೆ ಎಂದು ಹೈಕೋರ್ಟ್ ಸ್ಪಷ್ಟವಾಗಿ ತಿಳಿಸಿದೆ. ಈ ವಿಷಯದಲ್ಲಿ ನಾವು ಮಧ್ಯಪ್ರವೇಶಿಸುವುದಿಲ್ಲ' ಎಂದೂ ಹೇಳಿತು.

ಆಗ ಅರ್ಜಿದಾರರ ಪರ ವಕೀಲರು, 'ಎಸಿಬಿ ತನಿಖೆ ನಡೆಸಿದ್ದ ಎಲ್ಲ ಪ್ರಕರಣಗಳ ವಿಚಾರಣೆ ನಡೆಸಲು ಲೋಕಾಯುಕ್ತಕ್ಕೆ ಅಧಿಕಾರ ಇಲ್ಲ. ತಿಂಗಳಿಗೆ ₹20 ಸಾವಿರಕ್ಕಿಂತ ಕಡಿಮೆ ವೇತನ ಪಡೆಯುವ ಸರ್ಕಾರಿ ನೌಕರರ ವಿರುದ್ಧ ತನಿಖೆ ನಡೆಸಲು ಲೋಕಾಯುಕ್ತಕ್ಕೆ ಅಧಿಕಾರ ಇಲ್ಲ' ಎಂದರು. ಇದನ್ನು ಪರಿಗಣಿಸಲು ನ್ಯಾಯಪೀಠ ನಿಕಾರಿಸಿತು.

ಇದೇ ವೇಳೆ, ಕರ್ನಾಟಕ ಪೊಲೀಸ್ ಮಹಾಸಂಘದ ಅರ್ಜಿಯನ್ನು ತಿರಸ್ಕರಿಸಿದ ನ್ಯಾಯಪೀಠ, 'ಸಂಘಕ್ಕೆ ಕೇವಲ ಹಣ ಮಾಡುವ ಉದ್ದೇಶವಿದೆ. ರಾಜ್ಯದ ಸರ್ಕಾರಿ ನೌಕರರು ಮಹಾಸಂಘದ ಮೂಲಕ ಅರ್ಜಿ ಸಲ್ಲಿಸುವಂತಿಲ್ಲ. ಇದನ್ನು ಪರಿಗಣಿಸುವುದಿಲ್ಲ. ತಕರಾರು ಇರುವ ವ್ಯಕ್ತಿಯೇ ಅರ್ಜಿ ಸಲ್ಲಿಸಿದರೆ ಪರಿಗಣಿಸೋಣ' ಎಂದಿತು.

ಸಾರ್ವಜನಿಕ ಸೇವೆಯಲ್ಲಿರುವ ಸರ್ಕಾರಿ ನೌಕರರ ವಿರುದ್ಧದ ಭ್ರಷ್ಟಾಚಾರ ಆರೋಪ ಪ್ರಕರಣಗಳ ತನಿಖೆ ನಡೆಸಲು 2016ರಲ್ಲಿ ರಚಿಸಲಾಗಿದ್ದ ಎಸಿಬಿಯನ್ನು 2022ರ ಆಗಸ್ಟ್ 11ರಂದು ರದ್ದುಗೊಳಿಸಿದ್ದ ಹೈಕೋರ್ಟ್, 'ಎಸಿಬಿ ವ್ಯಾಪ್ತಿಯಲ್ಲಿ ಸದ್ಯ ತನಿಖೆಗೆ ಒಳಪಟ್ಟಿರುವ ಎಲ್ಲ ಪ್ರಕರಣಗಳನ್ನೂ ಲೋಕಾಯುಕ್ತಕ್ಕೆ ವರ್ಗಾಯಿಸಬೇಕು' ಎಂದು ತೀರ್ಪು ನೀಡಿತ್ತು.




ಕೆ.ಆರ್.ಪುರದಲ್ಲಿ ಒತ್ತುವರಿ ತೆರವಿಗೆ ಸ್ಥಳೀಯರು ವಿರೋಧ ವ್ಯಕ್ತಪಡಿಸಿದರು (ಎಡ ಚಿತ್ರ). ಕೆ.ಆರ್.ಪುರದ ಗಾಯಿತ್ರಿ ಬಡಾವಣೆಯಲ್ಲಿ ಜೆಸಿಬಿ ಮೂಲಕ ಒತ್ತುವರಿ ತೆರವು ಮಾಡಲಾಯಿತು

10 ದಿನಗಳ ನಂತರ ಬಿಬಿಎಂಪಿ ಅಧಿಕಾರಿಗಳಿಂದ ಕಾರ್ಯಾಚರಣೆ

ರಾಜಕಾಲುವೆ ಒತ್ತುವರಿ ತೆರವು ಮತ್ತೆ ಆರಂಭ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- **ನಾವು ಈಗ ಮನೆ ಖಾಲಿ ಮಾಡಿ ಎಲ್ಲಿ ಹೋಗಬೇಕು: ಸ್ಥಳೀಯರ ಪ್ರಶ್ನೆ**
- **ಅಪಾರ್ಟ್‌ಮೆಂಟ್ ನಿವಾಸಿಗಳಿಂದ ತೆರವು ಕಾರ್ಯಾಚರಣೆಗೆ ವಿರೋಧ**
- **ಕೆಲ ಕಾಲ ಕಾರ್ಯಾಚರಣೆ ಸ್ಥಗಿತಗೊಳಿಸಿದ ಅಧಿಕಾರಿಗಳು**

ಬೆಂಗಳೂರು: ಬಿಬಿಎಂಪಿ 10 ದಿನಗಳ ನಂತರ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಸೋಮವಾರ ಆರಂಭಿಸಿದೆ.

ಮಹದೇವಪುರ ವಲಯದ ಆರ್.ನಾರಾಯಣಪುರ, ಶೀಲವಂತ ನಕೆರೆ, ಕಸವನಹಳ್ಳಿ ಹಾಗೂ ಕೆ.ಆರ್.ಪುರ ವಿಭಾಗದ ಬಸವನಪುರ ವಾರ್ಡ್ ವ್ಯಾಪ್ತಿಯಲ್ಲಿ ಒತ್ತುವರಿ ತೆರವುಗೊಳಿಸಲಾಗಿದೆ.

ಮಹದೇವಪುರ ವಿಭಾಗದ ಆರ್.ನಾರಾಯಣಪುರ ಮತ್ತು ವೈಟ್ ಫೀಲ್ಡ್ ಹತ್ತಿರದ ಶೀಲವಂತನ ಕೆರೆಯ ಬಳಿ ರಾಜಕಾಲುವೆ ಮೇಲೆ ಸುಮಾರು 10 ಮೀಟರ್ ಉದ್ದ ಹಾಗೂ 4 ಮೀಟರ್ ಅಗಲದ ಕವರ್ ಸ್ಲ್ಯಾಬ್, 4 ಮೀಟರ್ ಉದ್ದದ ಕಾಂಪೌಂಡ್ ಗೋಡೆ ಹಾಗೂ 4 ಶೆಡ್‌ಗಳನ್ನು ತೆರವುಗೊಳಿಸಲಾಗಿದೆ.

ಕಸವನಹಳ್ಳಿಯ ವಲ್ಲಿಯಮ್ಮ ಲೇಔಟ್‌ನಲ್ಲಿ ಸುಮಾರು 20 ಮೀಟರ್ ಉದ್ದ ಹಾಗೂ 3 ಮೀಟರ್ ಅಗಲದ ಜಾಗದಲ್ಲಿದ್ದ 3 ಶೆಡ್‌ಗಳನ್ನು ತೆರವುಗೊಳಿಸಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಸ್ಥಳೀಯರ ಆಕ್ರೋಶ: ಕೆ.ಆರ್.ಪುರದ ಬಸವನಪುರ ವಾರ್ಡ್‌ನ ಎಸ್.ಆರ್. ಬಡಾವಣೆ ಮತ್ತು ದೇವಸಂದ್ರದ ವ್ಯಾಪ್ತಿಯ ಗಾಯಿತ್ರಿ ಬಡಾವಣೆಯಲ್ಲಿ ಸುಮಾರು 100 ಮೀಟರ್ ಉದ್ದದ ಅಪಾರ್ಟ್‌ಮೆಂಟ್ ಗೋಡೆ ಹಾಗೂ 2 ಮನೆಯ 10 ಮೀಟರ್ ಉದ್ದದ ಗೋಡೆ ಹಾಗೂ ಒಂದು ಶೆಡ್ ಅನ್ನು ತೆರವುಗೊಳಿಸಲಾಗಿದೆ.

ತೆರವು ಕಾರ್ಯಾಚರಣೆ ನಡೆಸಲು ಮುಂದಾದಾಗ, '20 ವರ್ಷಗಳಿಂದ ಇಲ್ಲಿಯೇ ವಾಸ ಮಾಡುತ್ತಿದ್ದೇವೆ. ಪ್ರತಿ ವರ್ಷ ತೆರಿಗೆ ಕಟ್ಟುತ್ತಿದ್ದೇವೆ, ನೀರಿನ ಬಿಲ್, ಕರೆಂಟ್ ಬಿಲ್ ಎಲ್ಲವೂ ಕಟ್ಟುತ್ತಿದ್ದೇವೆ. ಆದರೆ, ಆಗ ಇಲ್ಲದ ಒತ್ತುವರಿ ಈಗ ಏಕೆ? ನಾವು ಈಗ ಮನೆ ಖಾಲಿ ಮಾಡಿ ಎಲ್ಲಿ ಹೋಗಬೇಕು' ಎಂದು ಅಧಿಕಾರಿಗಳನ್ನು ಸ್ಥಳೀಯರು ತರಾಟೆಗೆ ತೆಗೆದುಕೊಂಡರು.

ಮಾಜಿ ಸಚಿವ ಎ. ಕೃಷ್ಣಪ್ಪ ಸಹೋದರ ಕಾಂಗ್ರೆಸ್ ಮುಖಂಡ ಡಿ.ಎ.ಗೋಪಾಲ್ ಮತ್ತು ಅಪಾರ್ಟ್‌ಮೆಂಟ್ ನಿವಾಸಿಗಳು ತೆರವು ಕಾರ್ಯಾಚರಣೆಗೆ ವಿರೋಧ ವ್ಯಕ್ತಪಡಿಸಿದರು.

'ನೀವು ಕೊಟ್ಟಿರುವ ನೋಟಿಸ್‌ನಲ್ಲಿ ಸರ್ವೆ ನಂಬರ್ ತಪ್ಪಾಗಿ ನಮೂದಿಸಲಾಗಿದೆ. ನಮ್ಮ ಅಪಾರ್ಟ್‌ಮೆಂಟ್ ಕೆ.ಆರ್.ಪುರ ವ್ಯಾಪ್ತಿಗೆ ಬರುತ್ತದೆ. ನೀವು ದೇವಸಂದ್ರ ಎಂದು ಬೇರೆ ಸರ್ವೆ ನಂಬರ್ ಕೊಟ್ಟಿದ್ದೀರಿ. ಅಲ್ಲದೇ ರಾಜಕಾಲುವೆ ಎಲ್ಲಿಂದ ಆರಂಭವಾಗಿದೆಯೋ ಅಲ್ಲಿಂದಲೇ ಮೊದಲು ಒತ್ತುವರಿ ತೆರವು ಮಾಡದೇ ಕಾಲುವೆ ಹಿಂದೆ ಮುಂದೆ ಬಿಟ್ಟು ಮಧ್ಯದಲ್ಲಿ ನಮ್ಮ ಅಪಾರ್ಟ್‌ಮೆಂಟ್ ಜಾಗ ಮಾತ್ರ ಏಕೆ ತೆರವು ಮಾಡುತ್ತಿದ್ದೀರಿ? ಯಾರ ಕೈವಾಡದಿಂದ ಬಂದಿದ್ದೀರಿ. ಎಲ್ಲ ಕಡೆ ಒತ್ತುವರಿ ತೆರವು ಮಾಡಿ ಅಮೇಲೆ ನಮ್ಮದು ಮಾಡಿ' ಎಂದು ಆಗ್ರಹಿಸಿದರು.


ಭಾರಿ ವಿರೋಧ ವ್ಯಕ್ತವಾದ ಹಿನ್ನೆಲೆ ಕೆಲಕಾಲ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಅಧಿಕಾರಿಗಳು ಸ್ಥಗಿತಗೊಳಿಸಿದ್ದರು. ಮಧ್ಯಾಹ್ನದ ಬಳಿಕ ಕೆ.ಆರ್.ಪುರ ತಹಶೀಲ್ದಾರ್ ಹೊರಡಿಸಿದ್ದ ತೆರವು ಆದೇಶದ ಪ್ರತಿ ನೀಡಿ ಪುನಃ ತೆರವು ಕಾರ್ಯ ಆರಂಭಿಸಲಾಯಿತು. ರಾಜಕಾಲುವೆ ಹಾದು ಹೋಗಿದ್ದ ಅಪಾರ್ಟ್‌ಮೆಂಟ್ ಪಕ್ಕದ ಕಾಂಪೌಂಡ್ ತೆರವುಗೊಳಿಸಿದರು.

ನಾಲ್ವರು ಕಲಾವಿದರಿಗೆ 'ಆಶ್ವಾಸನ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ನಾರಾಯಣ ಭಟ್ಟ


ಜಿ.ಡಿ. ಭಟ್ಟ


ಉಸ್ತಾದ್ ಕಾಸಿಂ ಜಮಾದಾರ್


ರಹಮತ್ತಾಭೀ ಕುತುಬುಬ್ಬಿನ್

ಬೆಂಗಳೂರು: ಪ್ರಸಕ್ತ ವರ್ಷದ 'ಆಶ್ವಾಸನ' ಪ್ರಶಸ್ತಿಗೆ ನಾಲ್ವರನ್ನು ಆಯ್ಕೆ ಮಾಡಲಾಗಿದೆ. ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿ, ಎಲೆಮರೆಯ ಕಾಯಿಯಂತೆ ಇರುವವರನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಸಂಗೀತ ಕ್ಷೇತ್ರದಲ್ಲಿನ ಸಾಧನೆಗಾಗಿ ದಾಂಡೇಲಿಯ ಉಸ್ತಾದ್ ಕಾಸಿಂ ಜಮಾದಾರ್, ಯಕ್ಷಗಾನಕ್ಕಾಗಿ ಶಿವಮೊಗ್ಗದ ನಿಟ್ಟೂರಿನ ಸಂತೆಗುಳಿ ನಾರಾಯಣ ಭಟ್ಟ, ಚಿತ್ರಕಲೆ ಮತ್ತು ನಾಟಕಕ್ಕಾಗಿ ಉತ್ತರ ಕನ್ನಡ ಜಿಲ್ಲೆಯ ಕೆಕ್ಕಾರಿನ ಜಿ.ಡಿ.ಭಟ್ಟ, ಕರಕುಶಲ ಕಲೆಗಾಗಿ ನವಲಗುಂದದ ರಹಮತ್ತಾಭೀ ಕುತುಬುಬ್ಬಿನ್ ಪಾವಟೆಕರ್ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಗೆ ಆಯ್ಕೆಯಾದವರಿಗೆ ಸ್ಮರಣಿಕೆ ಹಾಗೂ ₹15 ಸಾವಿರ ನೀಡಿ ಗೌರವಿಸಲಾಗುವುದು ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಜಿ.ಎಸ್. ಹೆಗಡೆ ತಿಳಿಸಿದ್ದಾರೆ.

ಘರಾಣಾದ ಪ್ರಸಿದ್ಧ ಗಾಯಕಿ ಲಲಿತಾ ಶಿವರಾಮ ಉಭಯಕರ್ ಅವರು 1993ರಲ್ಲಿ 'ಆಶ್ವಾಸನ ಫೌಂಡೇಷನ್' ಸ್ಥಾಪಿಸಿದ್ದರು.

ಇದೇ 15ರಂದು ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅಧ್ಯಕ್ಷೆ ಮಾಲವಿಕಾ ಬಿಜೂರ ಉಭಯಕರ್ ತಿಳಿಸಿದ್ದಾರೆ.

ನೀರಿನ ಪೈಪ್‌ಗೆ ಹಾನಿ; ರಸ್ತೆಯಲ್ಲಿ ಕಂದಕ

ಪ್ರಜಾವಾಣಿ ವಾರ್ತೆ



ಕೆಂಗೇರಿಯ ಎನ್‌ಪಿಎಸ್ ಶಾಲೆ ಬಳಿ ಪೈಪ್ ಒಡೆದ ಪರಿಣಾಮ ರಸ್ತೆಯಲ್ಲಿ ಕಂದಕ ನಿರ್ಮಾಣವಾಗಿದೆ

ಕೆಂಗೇರಿ: ಕೆಂಗೇರಿ ಉಪನಗರದ ಎನ್‌ಪಿಎಸ್ ಶಾಲೆ ಬಳಿ ಕಾವೇರಿ ನೀರು ಸರಬರಾಜಿನ ಪೈಪ್ ಒಡೆದು ಬೃಹತ್ ಗಾತ್ರದ ಗುಂಡಿ ಬಿದ್ದಿದೆ.

ಭಾನುವಾರ ಸಂಜೆ ಗುಂಡಿ ಬಿದ್ದಿದ್ದು, ಸುಮಾರು 10 ಅಡಿ ಉದ್ದದ ರಸ್ತೆ ಕಿತ್ತು ಬಂದಿದೆ. ಕಳೆದ ಇಪ್ಪತ್ತು ವರ್ಷಗಳ ಹಿಂದೆ ಕೆಂಗೇರಿ ಸುತ್ತ ಮುತ್ತ ನಾಗರಿಕ ವಸತಿ ಪ್ರದೇಶಗಳಿಗೆ ಕಾವೇರಿ ನೀರು ಸರಬರಾಜು ಮಾಡಲು ಪೈಪ್ ಅಳವಡಿಕೆ ಮಾಡಲಾಗಿತ್ತು. ಪೈಪ್ ಹಳೆಯದಾದ ಕಾರಣ ಹಾಗೂ ನೀರಿನ ಒತ್ತಡಕ್ಕೆ ಪೈಪ್ ಶಿಥಿಲಗೊಂಡು ಒಡೆದುಹೋಗಿದೆ. ಇದರಿಂದ ಪೈಪ್ ಹಾಳಾಗಿರುವ ಸುತ್ತಮುತ್ತಲ ಪ್ರದೇಶದ ಡಾಂಬರು ಕಿತ್ತು ಹೋಗಿದ್ದು ಗುಂಡಿ ನಿರ್ಮಾಣವಾಗಿದೆ.

'ದುರಸ್ತಿ ಕಾಮಗಾರಿ ಕೈಗೊಳ್ಳಲಾಗಿದೆ. ಶೀಘ್ರ ಸಮಸ್ಯೆ ಬಗೆಹರಿಸಲಾಗುವುದು' ಎಂದು ಜಲಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ ನಾಗರತ್ನ ತಿಳಿಸಿದರು.

'ಭಾನುವಾರ ಸಂಜೆ ವೇಳೆಗಾಗಲೇ ಕೆಂಗೇರಿ ಸುತ್ತಮುತ್ತಲಿನ ಸ್ಥಳಗಳಿಗೆ ನೀರು ಸರಬರಾಜು ಮಾಡಲಾಗಿತ್ತು. ಹೀಗಾಗಿ ನೀರಿನ ಬವಣೆ ಉಂಟಾಗಿಲ್ಲ. ಬುಧವಾರದಿಂದ ಎಂದಿನಂತೆ ಕೆಂಗೇರಿ ನಿವಾಸಿಗಳಿಗೆ ನೀರು ಸರಬರಾಜು ಮಾಡಲಾಗುವುದು' ಎಂದು ಹೇಳಿದರು.

ಮುಂಜಾಗ್ರತಾ ಕ್ರಮವಾಗಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಸವಾರರಿಗೆ ಪರ್ಯಾಯ ಮಾರ್ಗದ ವ್ಯವಸ್ಥೆ ಮಾಡಲಾಗಿದೆ ಎಂದರು.

ದೇಗುಲದಲ್ಲಿ ಪೂಜೆ ಸಲ್ಲಿಸಿದ್ದಕ್ಕೆ ದಲಿತ ವ್ಯಕ್ತಿಯ ಮೇಲೆ ಹಲ್ಲೆ

ಬಂಗಾರಪೇಟೆ (ಕೋಲಾರ ಜಿಲ್ಲೆ): ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಗುಟ್ಲೂರು ಗ್ರಾಮದ ಪರಿಶಿಷ್ಟ ಜಾತಿಯ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ಆರು ಸವರ್ಣೀಯರ ವಿರುದ್ಧ ಬೂದಿಕೋಟೆ ಠಾಣೆಯಲ್ಲಿ ದೌರ್ಜನ್ಯ ಪ್ರಕರಣ ದಾಖಲಾಗಿದೆ.

'ಗುಟ್ಲೂರು -ದೊಡ್ಡಪುರ ಗ್ರಾಮದ ನಡುವಿನ ಪೆದ್ದಪಲ್ಲಿ ಗಂಗಮ್ಮ ದೇಗುಲದಲ್ಲಿ ಪೂಜೆ ಸಲ್ಲಿಸುತ್ತಿದ್ದಾಗ ಗುಂಪುಕಟ್ಟಿಕೊಂಡು ಬಂದ ದೊಡ್ಡಪುರ ಗ್ರಾಮದ ಕೆಲವರು ಅವಾಚ್ಯ ಶಬ್ದಗಳಿಂದ ನಿಂದಿಸಿ, ದೊಣ್ಣೆಯಿಂದ ಹಲ್ಲೆ ನಡೆಸಿದರು' ಎಂದು ಗುಟ್ಲೂರಿನ ಪರಿಶಿಷ್ಟಜಾತಿಯ ಮುನಿರಾಜು ಪೊಲೀಸರಿಗೆ ದೂರು ನೀಡಿದ್ದರು.

'ಘಟನೆಗೆ ಸಂಬಂಧಿಸಿದಂತೆ ಪ್ರಮುಖ ಆರೋಪಿಗಳಾದ ಚಂದ್ರಪ್ಪ, ಸಿದ್ದಯ್ಯ ಅವರನ್ನು ಬಂಧಿಸಲಾಗಿದೆ. ಡಿವೈಎಸ್ಪಿ ರಮೇಶ್ ನೇತೃತ್ವದಲ್ಲಿ ಪ್ರಕರಣದ ತನಿಖೆ ನಡೆಯುತ್ತಿದೆ' ಎಂದು ಕೆಜಿಎಫ್ ಪೊಲೀಸ್ ವರಿಷ್ಠಾಧಿಕಾರಿ ಧರಣಿದೇವಿ ಮಾಲಗತ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

ಮುನಿರಾಜು ಅವರಿಗೆ ಗಾಯವಾಗಿದ್ದು, ಕೋಲಾರ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದೊಡ್ಡಪುರ ಗ್ರಾಮದ ಚಂದ್ರಪ್ಪ, ಸಿದ್ದಯ್ಯ, ರಾಮಕೃಷ್ಣಪ್ಪ, ಗಜಮ್ಮ, ವೆಂಕಟೇಶಮ್ಮ, ಪ್ರಮೀಳಮ್ಮ ವಿರುದ್ಧ ಬೂದಿಕೋಟೆ ಪೊಲೀಸರು ದೌರ್ಜನ್ಯ ಪ್ರಕರಣ ದಾಖಲಿಸಿದ್ದಾರೆ. ಅ.7ರಂದು (ಶುಕ್ರವಾರ) ಘಟನೆ ನಡೆದಿದ್ದು, 8 ರಂದು (ಶನಿವಾರ) ದೂರು ದಾಖಲಾಗಿದೆ. ಎಸ್.ಪಿ ಧರಣಿದೇವಿ ಮಾಲಗತ್ತಿ, ಡಿವೈಎಸ್ಪಿ ರಮೇಶ್, ಬೂದಿಕೋಟೆ ಠಾಣೆ ಎಎಸ್‌ಐ ರಘು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



ಮೈಸೂರಿನಲ್ಲಿ ಸೋಮವಾರ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ರಜತ ಮಹೋತ್ಸವದಲ್ಲಿ ಶಿಲ್ಪಿಗಳಾದ ಡಿ.ಎನ್‌.ಚಂದ್ರಶೇಖರ (ಶಿವಮೊಗ್ಗ), ನಿಂಗಪ್ಪ ಡಿ.ಕೇರಿ (ಕಲಬುರಗಿ), ವೀರೇಶ್ ಜಿ.ಮಾಯಾಚಾರ್ಯ (ಬಾಗಲಕೋಟೆ), ನಾಗರಾಜ ಬಿ.ಕಂಬಾರ (ಯಾದಗಿರಿ), ಜಿ.ವಿ.ಶಿವಕುಮಾರ್ (ಬೆಂಗಳೂರು), ಅಶೋಕ ಆರ್‌.ಬಡಿಗೇರ (ಬೆಳಗಾವಿ), ನಾಗೇಂದ್ರ ಎಸ್‌.ಕಮ್ಮಾರ (ಧಾರವಾಡ), ಕೆ.ಸುರೇಶ್ ಆಚಾರ್ಯ (ವಿಜಯನಗರ), ಕೆ.ಸತೀಶ್ ಆಚಾರ್ಯ (ಉಡುಪಿ) ಹಾಗೂ ರಾಘವೇಂದ್ರ ಎನ್‌. (ಗದಗ) ಅವರಿಗೆ 2022ನೇ ಸಾಲಿನ 'ಶಿಲ್ಪಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಕಾಡೆಮಿ ರಿಜಿಸ್ಟ್ರಾರ್ ಆರ್‌.ಚಂದ್ರಶೇಖರ್‌, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ನಟ ಸುಚೇಂದ್ರ ಪ್ರಸಾದ್‌, ಹಾಸನ ಜಿಲ್ಲೆ ಅರೇಮಾದನಹಳ್ಳಿ ವಿಶ್ವಕರ್ಮ ಪೀಠದ ಶಿವಸುಜ್ಞಾನತೀರ್ಥ ಸ್ವಾಮೀಜಿ, ಅಕಾಡೆಮಿ ಅಧ್ಯಕ್ಷ ವೀರಣ್ಣ ಅರ್ಕಸಾಲಿ, ವಿಜಯನಗರ ಸಾಮ್ರಾಜ್ಯದ ರಾಜ ಶ್ರೀಕೃಷ್ಣದೇವರಾಯನ ವಂಶಸ್ಥ ಶ್ರೀಕೃಷ್ಣದೇವರಾಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್‌.ಮಲ್ಲಿಕಾರ್ಜುನಸ್ವಾಮಿ ಇದ್ದಾರೆ –ಪ್ರಜಾವಾಣಿ ಚಿತ್ರ

'ಹಿಂದಿಸ್ತಾನ್' ಮಾಡುವ ಹುನ್ನಾರ'

ಬೆಂಗಳೂರು: ಕನ್ನಡವೂ ಸೇರಿದಂತೆ ಪ್ರಾದೇಶಿಕ ಭಾಷೆಗಳನ್ನು ಹೊಸಕಿ ಹಾಕಿ, ಇಡೀ ದೇಶದ ಮೇಲೆ ಹಿಂದಿ ಹೇರುವ ಮೂಲಕ ಬಹುತ್ವದ ಭಾರತವನ್ನು 'ಹಿಂದಿಸ್ತಾನ್' ಮಾಡುವ ಹುನ್ನಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಅಧಿಕೃತ ಭಾಷೆಗಳ ಬಗೆಗಿನ ಸಂಸದೀಯ ಸ್ಥಾಯಿ ಸಮಿತಿ ವರದಿಯಲ್ಲಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಸೋಮವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಕೇಂದ್ರ ಸರ್ಕಾರ ತನ್ನ ಚಾಳಿ ಮುಂದುವರಿಸಿದೆ. ಇಡೀ ಭಾರತವನ್ನು ತನ್ನ ಗುಪ್ತ ಕಾರ್ಯಸೂಚಿ ಮೂಲಕ ಹಿಡಿದಿಟ್ಟುಕೊಳ್ಳುವ ಕಪಟ ಯತ್ನ ಮಾಡುತ್ತಿದೆ. ರಾಷ್ಟ್ರಪತಿಯವರಿಗೆ ಸಮಿತಿ ಸಲ್ಲಿಸಿರುವ ವರದಿ ಆಘಾತಕಾರಿ ಮಾತ್ರವಲ್ಲ, ಒಕ್ಕೂಟ ವ್ಯವಸ್ಥೆಯ ವಿನಾಶಕ್ಕೆ ದಾರಿ' ಎಂದು ಟೀಕಿಸಿದ್ದಾರೆ.

ನಾಲ್ವರು ನ್ಯಾಯಮೂರ್ತಿಗಳ ನೇಮಕ ಪದ್ಧತಿಗೆ ವಿರೋಧ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನಲ್ಲಿ ಖಾಲಿ ಇರುವ ನಾಲ್ಕು ಹುದ್ದೆಗಳಿಗೆ ಸುತ್ತೋಲೆ ಪದ್ಧತಿ ಮೂಲಕ ನ್ಯಾಯಮೂರ್ತಿಗಳನ್ನು ನೇಮಿಸಲು ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ನೇತೃತ್ವದ ಕೊಲಿಜಿಯಂ ಮುಂದಾಗಿದ್ದು, ಈ ಪ್ರಕ್ರಿಯೆಗೆ ಕೊಲಿಜಿಯಂನ ಸದಸ್ಯರಾದ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ಎಸ್.ಅಬ್ದುಲ್ ನಜೀರ್ ವಿರೋಧ ವ್ಯಕ್ತಪಡಿಸಿದ್ದಾರೆ.

34 ನ್ಯಾಯಮೂರ್ತಿಗಳ ಹುದ್ದೆಗಳ ಪೈಕಿ ಐದು ಹುದ್ದೆಗಳು ಖಾಲಿ ಇದ್ದವು. ಲಲಿತ್, ಚಂದ್ರಚೂಡ್, ನಜೀರ್, ಸಂಜಯ್ ಕಿಶನ್ ಕೌಲ್ ಮತ್ತು ಕೆ.ಎಂ. ಜೋಸೆಫ್ ಅವರನ್ನೊಳಗೊಂಡ ಕೊಲಿಜಿಯಂ, ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ದೀಪಾಂಕರ್ ದತ್ತ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯನ್ನಾಗಿ ನೇಮಿಸಲು ಈ ಹಿಂದೆ ಒಪ್ಪಿಗೆ ಸೂಚಿಸಿತ್ತು.

'ಇತರ ನಾಲ್ಕು ಮಂದಿ ನ್ಯಾಯಮೂರ್ತಿಗಳ ನೇಮಕ ಸಂಬಂಧ ನಿರ್ಣಯ ಕೈಗೊಳ್ಳಲು ಸೆಪ್ಟೆಂಬರ್ 30ರಂದು ಕೊಲಿಜಿಯಂ ಸಭೆ ನಿಗದಿಯಾಗಿತ್ತು. ನ್ಯಾಯಮೂರ್ತಿ ಚಂದ್ರಚೂಡ್ ಅವರು ಆ ದಿನ ರಾತ್ರಿ 9 ಗಂಟೆವರೆಗೂ ನ್ಯಾಯಾಲಯದ ಕಲಾಪಗಳಲ್ಲಿ ಭಾಗಿಯಾಗಿದ್ದರಿಂದ ಸಭೆ ರದ್ದಾಗಿತ್ತು. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ರವಿಶಂಕರ್ ಝಾ, ಪಟ್ನಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜಯ್ ಕರೋಲ್, ಮಣಿಪುರ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ವಿ.ಸಂಜಯ್ ಕುಮಾರ್ ಹಾಗೂ ಹಿರಿಯ ವಕೀಲ ಕೆ.ವಿ.ವಿಶ್ವನಾಥನ್ ಅವರನ್ನು ನ್ಯಾಯಮೂರ್ತಿಗಳನ್ನಾಗಿ ನೇಮಿಸುವ ಕುರಿತ ಪ್ರಸ್ತಾವನೆಯೊಂದನ್ನು ಲಲಿತ್ ಅವರು ಸೆಪ್ಟೆಂಬರ್ 30ರಂದೇ ಕೊಲಿಜಿಯಂನ ಸದಸ್ಯರಿಗೆ ಕಳುಹಿಸಿದ್ದರು. ಇದಕ್ಕೆ ನ್ಯಾಯಮೂರ್ತಿಗಳಾದ ಕೌಲ್ ಮತ್ತು ಜೋಸೆಫ್ ಅನುಮೋದನೆ ನೀಡಿದ್ದರು. ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದ್ದ ನೇಮಕಾತಿ ಪದ್ಧತಿಗೆ ಚಂದ್ರಚೂಡ್ ಹಾಗೂ ನಜೀರ್ ಅವರು ವಿರೋಧ ವ್ಯಕ್ತಪಡಿಸಿದ್ದರು' ಎಂದು ಪ್ರಕಟಣೆ ತಿಳಿಸಿದೆ.

'ಇದೇ 2 ರಂದು ಮತ್ತೊಂದು ಪತ್ರ ಬರೆದಿದ್ದ ಲಲಿತ್ ಅವರು ಪರ್ಯಾಯ ಸಲಹೆಗಳನ್ನು ಆಹ್ವಾನಿಸಿದ್ದರು. ಇದಕ್ಕೆ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿರಲಿಲ್ಲ' ಎಂದು ತಿಳಿಸಿದೆ. ಇದನ್ನು ಸೋಮವಾರ ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಬೇಡಿಕೆಗಳ ಈಡೇರಿಕೆಗೆ ಆಗ್ರಹ: ರಕ್ತದಾನ ಶಿಬಿರ ಹಮ್ಮಿಕೊಂಡಿದ್ದ ಪಾದಯಾತ್ರಿಗಳು

ಪಿಂಚಣಿ ವಂಚಿತ ನೌಕರರ ಪಾದಯಾತ್ರೆ

ನೆಲಮಂಗಲ: ಪಿಂಚಣಿ ಹಾಗೂ ವಿವಿಧ ಸೌಲಭ್ಯಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘ ಅ.7ರಿಂದ ತುಮಕೂರಿನ ಸಿದ್ದಗಂಗಾ ಮಠದಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆಯು ಸೋಮವಾರ ಬೆಳಿಗ್ಗೆ ಪಟ್ಟಣದ ಬಸವಣ್ಣದೇವರ ಮಠದಿಂದ ಪ್ರಾರಂಭವಾಯಿತು.

ಶನಿವಾರ ರಾತ್ರಿ ಪಟ್ಟಣ ಪ್ರವೇಶಿಸಿದ್ದ ನೌಕರರು ಪಟ್ಟಣದ ಬಸವಣ್ಣದೇವರ ಮಠದಲ್ಲಿ ಆಶ್ರಯ ಪಡೆದಿದ್ದರು. ಭಾನುವಾರ ರಕ್ತದಾನ ಶಿಬಿರ ಹಮ್ಮಿಕೊಂಡಿದ್ದರು. ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಹಾಗೂ ಮಾಜಿ ಶಾಸಕ ಎಂ.ವಿ. ನಾಗರಾಜು ಭೇಟಿ ನೀಡಿ ನೌಕರರ ಬೇಡಿಕೆ ಈಡೇರಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ಸೋಮವಾರ ಬೆಳಿಗ್ಗೆ ಶಾಸಕ ಡಾ.ಕೆ. ಶ್ರೀನಿವಾಸಮೂರ್ತಿ ಪ್ರತಿಭಟನಕಾರರಿಗೆ ಬೆಂಬಲ ಸೂಚಿಸಿ ತಮ್ಮ ಬೇಡಿಕೆ ಈಡೇರಿಕೆಗೆ ಜೆಡಿಎಸ್ ಶಾಸಕಾಂಗ ಪಕ್ಷದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರ ಮುಖಾಂತರ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದು ಭರವಸೆ ನೀಡಿ ಬೀಳ್ಕೊಟ್ಟರು.

ರಾಜ್ಯ ಕಾರ್ಯಾಧ್ಯಕ್ಷ ಸಿ.ಎಂ. ಶಶಿಧರ್ ಮಾತನಾಡಿ, '2006ರ ನಂತರ ನೇಮಕಗೊಂಡಿರುವ ಹಾಗೂ ಅದಕ್ಕೂ ಮೊದಲೇ ನೇಮಕಗೊಂಡು ನಂತರ ಅನುದಾನಕ್ಕೆ ಒಳಪಟ್ಟಿರುವ ನೌಕರರಿಗೆ ಪಿಂಚಣಿ ಸೌಲಭ್ಯ ಇರುವುದಿಲ್ಲ' ಎಂದು ಆರೋಪಿಸಿದರು.



ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಹಮ್ಮಿಕೊಂಡಿರುವ ಪಾದಯಾತ್ರೆಯಲ್ಲಿ ಶಾಸಕ ಡಾ.ಕೆ.ಶ್ರೀನಿವಾಸಮೂರ್ತಿ ಅವರು ಭಾಗವಹಿಸಿದ್ದರು. ಕಾರ್ಯಾಧ್ಯಕ್ಷ ಸಿ.ಎಂ.ಶಶಿಧರ್, ಅಧ್ಯಕ್ಷ ಜೆ.ಹನುಮಂತಪ್ಪ ಮತ್ತು ಪ್ರತಿಭಟನಕಾರರು ಇದ್ದಾರೆ

ಔಷಧ ಸೇವನೆಯಲ್ಲಿ ಶಿಸ್ತಿನ ಪಾಲನೆ



ಡಾ. ಕಿರಣ್ ವಿ. ಎಸ್.

‘ಜೀವನದಲ್ಲಿ ಇದುವರೆಗೆ ಒಂದು ಮಾತ್ರೆಯನ್ನೂ ನುಂಗಿಲ್ಲ’ ಎಂದು ಹೆಮ್ಮೆಯಿಂದ ಹೇಳುತ್ತಿದ್ದ ಹಿರಿಯರಿದ್ದರು. ಇಂದಿನ ಕಾಲದಲ್ಲಿ ಈ ಮಾತನ್ನು ಹೇಳಬಲ್ಲವರು ತೀರಾ ವಿರಳ. ಔಷಧಸೇವನೆ ನಮ್ಮ ಆಧುನಿಕ ಜೀವನದ ಭಾಗವೇ ಆಗಿಹೋಗಿದೆ. ದೈನಂದಿನ ಬದುಕಿನಲ್ಲಿ ಶಿಸ್ತಿನ ಅಗತ್ಯವೆಷ್ಟಿದೆಯೋ, ಅದೇ ರೀತಿಯ ಶಿಸ್ತು ಔಷಧಸೇವನೆಯಲ್ಲೂ ಇರುತ್ತದೆ. ತಪ್ಪು ಔಷಧಸೇವನೆಯಿಂದ ಕಾಯಿಲೆ ಹೇಗೆ ಗುಣವಾಗುವುದಿಲ್ಲವೋ, ಅಂತೆಯೇ ಔಷಧವನ್ನು ತಪ್ಪಾಗಿ ಸೇವಿಸಿದರೂ ವ್ಯಾಧಿ ನಿವಾರಣೆ ಆಗುವುದಿಲ್ಲ. ಯಾವುದೇ ಔಷಧ ತೆಗೆದುಕೊಳ್ಳುವಾಗ ಅದರ ಪರಿಣಾಮ ಸರಿಯಾಗಿ ಆಗಬೇಕೆಂದರೆ ಕೆಲವೊಂದು ನಿಯಮಗಳನ್ನು ಪಾಲಿಸಬೇಕು.

1. ಔಷಧವನ್ನು ಏಕೆ ತೆಗೆದುಕೊಳ್ಳುತ್ತಿದ್ದೇವೆ ಎಂದು ತಿಳಿದಿರಬೇಕು. ಬಹಳ ಮಂದಿ ಔಷಧದ ಪರಿಣಾಮಗಳ ಬಗ್ಗೆ ತಪ್ಪು ಕಲ್ಪನೆ ಹೊಂದಿರುತ್ತಾರೆ. ಪ್ರತಿಯೊಂದು ಔಷಧಕ್ಕೂ ಬೇರೆ ರೀತಿಯ ಪರಿಣಾಮಗಳಿವೆ. ಮದ್ದಿನ ಮಿತಿಯನ್ನು ತಿಳಿದಿರಬೇಕು. ಸೋಂಕು ಉಂಟಾದಾಗ ಜ್ವರ ಬಂದಿರುತ್ತದೆ. ಸೋಂಕು ನಿವಾರಕ ಆ್ಯಂಟಿಬಯೋಟಿಕ್ ಔಷಧಗಳು ಜ್ವರವನ್ನು ತಗ್ಗಿಸುವುದಿಲ್ಲ. ಆದರೆ, ಅವುಗಳು ಸೋಂಕನ್ನು ನಿಯಂತ್ರಿಸುತ್ತಿದ್ದಂತೆ ಜ್ವರ ತಾನಾಗಿಯೇ ಕಡಿಮೆಯಾಗುತ್ತದೆ. ಹೀಗಾಗಿ, ಆರಂಭದಲ್ಲಿ ಆ್ಯಂಟಿಬಯೋಟಿಕ್ ಔಷಧಗಳ ಜೊತೆಯಲ್ಲಿ ಜ್ವರವನ್ನು ತಗ್ಗಿಸುವ ಮದ್ದು ಕೂಡ ಬೇಕಾಗುತ್ತದೆ. ಬಹಳ ಮಂದಿ ಆ್ಯಂಟಿಬಯೋಟಿಕ್ ಔಷಧಗಳು ಜ್ವರವನ್ನೂ ತಗ್ಗಿಸುತ್ತವೆ ಎಂದು ಭ್ರಮಿಸುತ್ತಾರೆ.

2. ಯಾವ ಔಷಧವನ್ನು ಯಾವಾಗ ಮತ್ತು ಎಷ್ಟು ಬಾರಿ ಸೇವಿಸಬೇಕು – ಎನ್ನುವುದು ಮುಖ್ಯ. ಮಾತ್ರೆ ಅಥವಾ ಕ್ಯಾಪ್ಸುಲ್ ಮಾದರಿಯ ಔಷಧವನ್ನು ಸೇವಿಸಿದ ನಂತರ ಅದು ಜೀರ್ಣವಾಗಿ ರಕ್ತದೊಳಗೆ ಸೇರುತ್ತದೆ. ಇದಕ್ಕೆ ಸ್ವಲ್ಪ ಕಾಲ ಹಿಡಿಯಬಹುದು. ಅನಂತರ ಅದು ರಕ್ತನಾಳಗಳ ಮೂಲಕ ಶರೀರದ ಎಲ್ಲೆಡೆ ವ್ಯಾಪಿಸುತ್ತದೆ. ಚುಚ್ಚುಮದ್ದಿನ ಮೂಲಕ ನೀಡಿದ ಔಷಧ ಶೀಘ್ರವಾಗಿ ರಕ್ತದೊಳಗೆ ಸೇರುವುದರಿಂದ ಅವುಗಳ ಪರಿಣಾಮ ಶೀಘ್ರವಾಗಿ ಆಗುತ್ತದೆ. ಶರೀರವನ್ನು ಸೇರಿದ ಯಾವುದೇ ಔಷಧವೂ ಬಹುಮಟ್ಟಿಗೆ ಯಕೃತ್ ಮತ್ತು ಮೂತ್ರಪಿಂಡಗಳ ನೆರವಿನಿಂದ ವಿಸರ್ಜಿಸಲ್ಪಡುತ್ತದೆ. ಅಂದರೆ, ರಕ್ತದಲ್ಲಿ ಸೇರುವ ಮತ್ತು ಶರೀರದಿಂದ ಹೊರಹೋಗುವ ಅವಧಿಯ ನಡುವೆ ಮಾತ್ರ ಅದರ ಪರಿಣಾಮ ಉಳಿಯುತ್ತದೆ. ಹೀಗಾಗಿ, ಪ್ರತಿಯೊಂದು ಔಷಧವೂ ಒಂದು ನಿರ್ದಿಷ್ಟ ಕಾಲಾವಧಿಗೆ ಮಾತ್ರ ಕೆಲಸ ಮಾಡುತ್ತದೆ. ಆ ಅವಧಿಯ ನಂತರ ಔಷಧದ ಪರಿಣಾಮ ಇಲ್ಲವಾಗುತ್ತದೆ. ಕೆಲವು ಸೆಕೆಂಡುಗಳ ಕಾಲದಿಂದ ಹಿಡಿದು ದಿನಗಟ್ಟಲೆ ಕೆಲಸ ಮಾಡಬಲ್ಲ ಔಷಧಗಳಿವೆ. ಒಂದು ವೇಳೆ ಔಷಧವೊಂದು 8 ಗಂಟೆಗಳ ಕಾಲ ಕೆಲಸ ಮಾಡಬಲ್ಲದು ಎಂದಾದರೆ, ಅದನ್ನು ದಿನಕ್ಕೆ ಮೂರು ಬಾರಿ ಸೇವಿಸಿದರೆ ಮಾತ್ರ ರಕ್ತದಲ್ಲಿ ಮದ್ದಿನ ಪ್ರಮಾಣ ಪರಿಣಾಮಕಾರಿ ಮಟ್ಟದಲ್ಲಿ ಉಳಿಯಬಲ್ಲದು. ಅದಕ್ಕಿಂತ ಕಡಿಮೆಯಾದರೆ ಅದರ ಪರಿಣಾಮ ಕುಂಠಿತವಾಗುತ್ತದೆ. ಆದ್ದರಿಂದ, ವೈದ್ಯರು ಔಷಧವನ್ನು ದಿನಕ್ಕೆ ಎಷ್ಟು ಬಾರಿ ಸೂಚಿಸುತ್ತಾರೋ ಅಷ್ಟು ಬಾರಿ ಸೇವಿಸಬೇಕು. ಕಡಿಮೆಯಾದರೆ ಪ್ರಯೋಜನವಾಗಲಾರದು.

3. ಕೆಲವು ಕಾಯಿಲೆಗಳಿಗೆ ಚಿಕಿತ್ಸೆಯಿದೆ; ಕೆಲವನ್ನು ನಿಯಂತ್ರಣದಲ್ಲಿ ಇರಿಸಲು ಮಾತ್ರ ಸಾಧ್ಯ. ಉದಾಹರಣೆಗೆ, ಶರೀರದಲ್ಲಿ ಸೋಂಕು ಉಂಟಾದಾಗ ಕೆಲವು ದಿನಗಳ ಕಾಲ ಆ್ಯಂಟಿಬಯೋಟಿಕ್ ಔಷಧಗಳನ್ನು ಸೇವಿಸಿದರೆ ಸೋಂಕುಕಾರಕ ಬ್ಯಾಕ್ಟೀರಿಯಾ ನಿವಾರಣೆಯಾಗಿ, ಮತ್ತಷ್ಟು ಔಷಧದ ಅಗತ್ಯ ಇಲ್ಲವಾಗುತ್ತದೆ. ಆದರೆ ಮಧುಮೇಹದ ಸಂಗತಿ ವಿಭಿನ್ನ. ಶರೀರದಲ್ಲಿ ಸಾಮಾನ್ಯವಾಗಿ ಉತ್ಪತ್ತಿಯಾಗುವ ಇನ್ಸುಲಿನ್ ಎಂಬ ಚೋದಕ ರಕ್ತದಲ್ಲಿನ ಸಕ್ಕರೆಯ ಅಂಶವನ್ನು ನಿಯಂತ್ರಿಸುತ್ತದೆ. ಒಂದು ವೇಳೆ ಈ ಚೋದಕದ ಉತ್ಪಾದನೆ ದೇಹದಲ್ಲಿ ಕಡಿಮೆಯಾದರೆ ರಕ್ತದಲ್ಲಿನ ಸಕ್ಕರೆಯ ಅಂಶದಲ್ಲಿ ಏರಿಕೆಯಾಗುತ್ತದೆ. ಈ ಸ್ಥಿತಿಯನ್ನು ‘ಮಧುಮೇಹ’ ಎನ್ನುತ್ತಾರೆ. ಇದಕ್ಕೆ ಇನ್ಸುಲಿನ್ ಚೋದಕದ ಉತ್ಪಾದನೆಯನ್ನು ಏರಿಸಬಲ್ಲ ಔಷಧ ಸೇವಿಸಬೇಕು; ಇಲ್ಲವೇ ಕೃತಕ ಇನ್ಸುಲಿನ್ ಚುಚ್ಚುಮದ್ದನ್ನು ತೆಗೆದುಕೊಳ್ಳಬೇಕು. ಇದರಿಂದ ರಕ್ತದಲ್ಲಿನ ಸಕ್ಕರೆಯ ಅಂಶವನ್ನು ನಿಯಂತ್ರಣದಲ್ಲಿ ಇಡಲು ಸಾಧ್ಯ. ಇದು ಔಷಧದ ಮೂಲಕ ಗುಣವಾಗಬಲ್ಲ ಸ್ಥಿತಿಯಲ್ಲ. ಆದರೆ, ಜೀವನವಿಡೀ ಸಮಯಾನುಸಾರ ತೆಗೆದುಕೊಳ್ಳುವ ಔಷಧಗಳ ಮೂಲಕ ಇದನ್ನು ನಿಯಂತ್ರಿಸಬಹುದು. ಯಾವ ಪರಿಸ್ಥಿತಿಗೆ ಎಷ್ಟು ಕಾಲದ ಚಿಕಿತ್ಸೆ ಬೇಕಾಗುತ್ತದೆ ಎಂಬುದನ್ನು ವೈದ್ಯರು ಸೂಚಿಸುತ್ತಾರೆ. ಅಂತಹ ಸೂಚನೆಯನ್ನು ಮೀರಿದರೆ ಅಪಾಯವಾಗಬಹುದು.

4. ಸೇವಿಸುವ ಔಷಧಗಳು ಜೀರ್ಣವಾಗಿ ರಕ್ತವನ್ನು ಸೇರುತ್ತವೆ. ಅವು ಎಷ್ಟು ಸಮರ್ಥವಾಗಿ ಜೀರ್ಣವಾಗುತ್ತವೆ ಎನ್ನುವುದರ ಮೇಲೆ ರಕ್ತದಲ್ಲಿ ಅವುಗಳ ಪ್ರಮಾಣ, ದೇಹದೊಳಗೆ ಅವುಗಳ ಪರಿಣಾಮ ನಿರ್ಧಾರವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಕೆಲವು ಔಷಧಗಳು ಖಾಲಿ ಹೊಟ್ಟೆಯಲ್ಲಿ ಚೆನ್ನಾಗಿ ಅರಗುತ್ತವೆ. ಹಲವು ನಾವು ಸೇವಿಸುವ ಆಹಾರದ ಜೊತೆ ಸೇರಿ ರಕ್ತವನ್ನು ಸೇರುತ್ತವೆ. ಕೆಲವು ಔಷಧಗಳು ನಿರ್ದಿಷ್ಟ ಆಹಾರಗಳ ಜೊತೆಗೆ ಸೇರಿದರೆ ತಮ್ಮ ಪ್ರಭಾವವನ್ನು ಕಳೆದುಕೊಳ್ಳುತ್ತವೆ. ಈ ಎಲ್ಲ ಕಾರಣಗಳಿಂದ ಕೆಲವು ಔಷಧಗಳ ಸೇವನೆಯ ವೇಳೆ ನಿರ್ದಿಷ್ಟ ಪಥ್ಯವನ್ನು ಅನುಸರಿಸಬೇಕು. ಯಾವ ಔಷಧವನ್ನು ಹೇಗೆ ಸೇವಿಸಬೇಕು ಎನ್ನುವುದನ್ನು ವೈದ್ಯರು ಸೂಚಿಸುತ್ತಾರೆ. ಔಷಧದಿಂದ ಒಳ್ಳೆಯ ಪರಿಣಾಮ ಅಪೇಕ್ಷಿಸುವವರು ಈ ಸೂಚನೆಗಳನ್ನು ಪಾಲಿಸಲೇಬೇಕು.

5. ಎರಡು ವಿಭಿನ್ನ ಔಷಧಗಳ ಪರಿಣಾಮಗಳು ಪರಸ್ಪರ ವಿರೋಧಿಯಾಗಿರಬಹುದು. ಅಥವಾ, ಒಂದು ಔಷಧದ ಪರಿಣಾಮಗಳನ್ನು ಮತ್ತೊಂದು ಔಷಧ ಹೆಚ್ಚಾಗಿಸಬಹುದು. ಹೀಗಾಗಿ, ವೈದ್ಯರ ಬಳಿ ಹೋದಾಗ ದಿನವಹಿ ಸೇವಿಸುವ ಅಥವಾ ದೀರ್ಘಕಾಲಿಕವಾಗಿ ಸೇವಿಸುತ್ತಿರುವ ಔಷಧಗಳ ಬಗ್ಗೆ ಅವರಿಗೆ ಮಾಹಿತಿ ನೀಡಬೇಕು. ಇದರಿಂದ ಒಂದಕ್ಕೊಂದು ಪೂರಕವಾಗಿರುವ ಔಷಧಗಳನ್ನು ನಿರ್ಧರಿಸುವುದು ಸಾಧ್ಯವಾಗುತ್ತದೆ. ಹೆಚ್ಚು ಔಷಧಗಳನ್ನು ಸೇವಿಸಿದಷ್ಟೂ ಇಂತಹ ಅವಲಂಬಿತ ಪರಿಣಾಮಗಳ ಸಾಧ್ಯತೆ ಹೆಚ್ಚು. ಆದ್ದರಿಂದ ದೀರ್ಘಕಾಲಿಕ ಔಷಧಗಳನ್ನು ತೆಗೆದುಕೊಳ್ಳುವವರು ಆಯಾ ಔಷಧಗಳ ಜೊತೆಯಲ್ಲಿ ಅಪಾಯಕಾರಿಯಾಗಿ ವರ್ತಿಸಬಲ್ಲ ಇತರ ಔಷಧಗಳ ಬಗ್ಗೆ ತಿಳಿದುಕೊಂಡಿರುವುದು ಒಳಿತು. ಯಾವುದೇ ಅನುಮಾನವಿರುವಾಗ ತಮ್ಮ ವೈದ್ಯರ ಜೊತೆಗೆ ಈ ಸಾಧ್ಯತೆಗಳನ್ನು ಚರ್ಚಿಸುವುದು ಸೂಕ್ತ.

6. ಪ್ರತಿಯೊಂದು ಕಾಯಿಲೆಯಂತೆ ಪ್ರತಿಯೊಬ್ಬ ರೋಗಿಯೂ ವಿಭಿನ್ನ. ಯಾವುದೇ ಔಷಧಕ್ಕೆ ಓರ್ವ ವ್ಯಕ್ತಿ ಸ್ಪಂದಿಸುವಂತೆ ಮತ್ತೊಬ್ಬರು ಸ್ಪಂದಿಸಲಾರರು. ಕೆಲವು ಔಷಧಗಳು ಕೆಲವರಲ್ಲಿ ತೀವ್ರವಾದ ಅಡ್ಡಪರಿಣಾಮಗಳನ್ನು ಬೀರಬಲ್ಲವು. ಅಪರೂಪವಾದರೂ, ಪೆನಿಸಿಲಿನ್ ಚುಚ್ಚುಮದ್ದಿನಿಂದ ಮರಣ ಹೊಂದಿದವರಿದ್ದಾರೆ. ಹೀಗಾಗಿ, ಯಾರಿಗೋ, ಯಾವುದೋ ಕಾಯಿಲೆಗೆ ಕೊಟ್ಟ ಚಿಕಿತ್ಸೆಯನ್ನು ಮತ್ತೊಬ್ಬರು ಕಣ್ಣು ಮುಚ್ಚಿ ತೆಗೆದುಕೊಳ್ಳಬಾರದು. ಇದೇ ರೀತಿ, ಹಿಂದೆಂದೋ ಯಾವುದೋ ಜಾಡ್ಯಕ್ಕೆ ಕೊಟ್ಟ ಔಷಧವನ್ನು ಇಂದಿನ ಜಡ್ಡಿಗೆ ಪುನರಾವರ್ತಿಸಬಾರದು. ಇವೆಲ್ಲವೂ ಬಹಳ ಅಪಾಯಕಾರಿ ನಡೆಗಳು. ಯಾವುದೇ ಕಾಯಿಲೆಗೂ ವೈದ್ಯರ ಸಲಹೆ ಪಡೆದು, ಸೂಕ್ತವಾದ ಚಿಕಿತ್ಸೆ ಪಡೆಯುವುದು ಅತ್ಯಂತ ಮುಖ್ಯ. ಔಷಧಗಳು ಅಪಾಯಕಾರಿ ರಾಸಾಯನಿಕಗಳು. ಅವುಗಳನ್ನು ಬಹಳ ಮುತುವರ್ಜಿಯಿಂದ ಬಳಸಬೇಕು. ಮದ್ದಿನ ಜೊತೆಗೆ ಬೇಕಾಬಿಟ್ಟಿ ವರ್ತಿಸಿದರೆ, ಅದು ಜೀವಕ್ಕೇ ಎರವಾಗಬಹುದು.

ಇಪ್ಪತ್ತನೆಯ ಶತಮಾನದಲ್ಲಿ ಮನುಷ್ಯನ ಸರಾಸರಿ ಆಯುಸ್ಸು ಗಣನೀಯವಾಗಿ ಬೆಳೆದಿದ್ದರಲ್ಲಿ ಔಷಧಗಳ ಪಾತ್ರ ಮಹತ್ವದ್ದು. ಔಷಧಗಳು ಅತ್ಯಂತ ಹೆಚ್ಚು ಶಿಸ್ತನ್ನು ಬೇಡುವ ಮಿತ್ರರು. ಅವುಗಳನ್ನು ಸುಲಭವಾಗಿ ಪರಿಗಣಿಸಲಾಗದು; ಅವುಗಳ ಜೊತೆಗೆ ಇಷ್ಟ ಬಂದಂತೆ ವ್ಯವಹರಿಸಲಾಗದು. ಪ್ರತಿಯೊಂದು ಮದ್ದಿನ ಗುಣಾವಗುಣಗಳ ಜೊತೆಗೆ ಎಷ್ಟು ಸೂಕ್ತವಾಗಿ ವರ್ತಿಸುತ್ತೇವೋ, ಅದು ನಮ್ಮನ್ನು ಅಷ್ಟೇ ಪರಿಣಾಮಕಾರಿಯಾಗಿ ಕಾಯುತ್ತದೆ; ಹದ ತಪ್ಪಿದರೆ ಅಪಾಯಕಾರಿಯಾಗುತ್ತದೆ. ❖



ಮನೆಯಲ್ಲಿರುವ ಔಷಧಗಳನ್ನು ಸಂರಕ್ಷಿಸುವುದು ಮುಖ್ಯ

ಕೆಲವು ಔಷಧಗಳನ್ನು ಕಡಿಮೆ ತಾಪಮಾನದಲ್ಲಿ ರಕ್ಷಿಸಬೇಕು. ಕೆಲವನ್ನು ಬೆಳಕು ತಾಕದಂತಹ ಬಣ್ಣದ ಗಾಜಿನ ಶೀಷೆಯಲ್ಲಿ ಇಡಬೇಕು. ಅತ್ಯಂತ ಮುಖ್ಯವಾಗಿ, ಮನೆಯಲ್ಲಿನ ಯಾವುದೇ ಔಷಧಗಳನ್ನೂ ಮಕ್ಕಳ ಕೈಗೆ ಸಿಗುವಂತೆ ಇಡಬಾರದು. ಮಕ್ಕಳ ದೇಹ ಚಿಕ್ಕದು. ದೊಡ್ಡವರು ಸಾಮಾನ್ಯವಾಗಿ ಸೇವಿಸುವ ಔಷಧದ ಪ್ರಮಾಣ ಮಕ್ಕಳ ಪಾಲಿಗೆ ಅಪಾಯಕಾರಿಯಾಗುವ ಸಾಧ್ಯತೆಗಳಿವೆ. ಹೀಗೆ ಆಕಸ್ಮಿಕವಾಗಿ ಔಷಧ ಸೇವನೆ ಮಾಡಿದ ಮಕ್ಕಳು ಗಂಭೀರ ಆರೋಗ್ಯ ಸಮಸ್ಯೆಗಳನ್ನು ಎದುರಿಸುವುದು ಕಂಡುಬಂದಿದೆ. ಈ ವಿಷಯದಲ್ಲಿ ಕಟ್ಟೆಚ್ಚರ ಇರಬೇಕು.

ತರಕಾರಿಯ ತಕರಾರುಗಳು!

ತರಕಾರಿಗಳು ಆರೋಗ್ಯಕ್ಕೆ ಅನಿವಾರ್ಯ ಎಂದು ಹಲವರು ತಿಳಿದಿದ್ದಾರೆ. ಆದರೆ, ವಾಸ್ತವ ಇದಲ್ಲ...



ಡಾ. ಪಲ್ಲವಿ ಹೆಗಡೆ

ಸಂತುಲಿತ ಆಹಾರದ ವಿವರಣೆಯನ್ನು ಬೇರೆ ಬೇರೆ ರೀತಿಯಲ್ಲಿ ನೀಡಬಹುದು. ಆರು ರುಚಿಗಳನ್ನು ವಿಭಾಗಿಸಿ, ಆಹಾರದ ಗುಣಕರ್ಮಗಳನ್ನು ಅನುಸರಿಸಿ, ದ್ರವ-ಘನವೆಂಬ ಸ್ವರೂಪವನ್ನು ಅರ್ಥೈಸಿ, ಪ್ರಮಾಣವನ್ನು ಆಧರಿಸಿ, ಹಾಗೆಯೇ ಆಹಾರದ ವಿಭಾಗವನ್ನು ಗುರುತಿಸಿ, ಸಂಪೂರ್ಣಾಹಾರವನ್ನು ವಿವರಿಸಬಹುದು. ಪ್ರಪಂಚದ ಯಾವುದೇ ಪ್ರದೇಶದ ಆಹಾರವು ಏಕದಳವರ್ಗ, ದ್ವಿದಳವರ್ಗ, ಮಾಂಸವರ್ಗ, ಶಾಕವರ್ಗ, ಫಲವರ್ಗ, ಗೋರಸವರ್ಗ (ಹಾಲು ಮತ್ತು ಹಾಲಿನ ಉತ್ಪನ್ನಗಳು), ಇಕ್ಷುವರ್ಗ(ಸಕ್ಕರೆಯಂತಹ ಸಿಹಿಗಳು), ಪಾನೀಯವರ್ಗ, ಮದ್ಯವರ್ಗ - ಇವುಗಳನ್ನು ಹೊಂದಿರುತ್ತದೆ. ಈ ವಿಭಾಗದಲ್ಲಿ, ಸಾಮಾನ್ಯವಾಗಿ ರುಚಿಸದೆ, ಇಷ್ಟವಾಗದೆ ತ್ಯಜಿಸಲ್ಪಡುವುದು ಶಾಕವರ್ಗವೇ. ತರಕಾರಿಗಳ ವಿಭಾಗವು ಯಾವುದೇ ಇದ್ದರೂ ಮಕ್ಕಳಿಗೂ ವಯಸ್ಕರಿಗೂ ಅಂತಹ ಒಪ್ಪಿತವಾಗುವ ಆಹಾರವಲ್ಲ.

ಆರು ಬಗೆಯಲ್ಲಿ ತರಕಾರಿಗಳನ್ನು ವಿಭಜಿಸಿರುವುದು ಕಂಡುಬರುತ್ತದೆ.

1. ಪತ್ರ: ಸೊಪ್ಪುಗಳು; ಉದಾಹರಣೆಗೆ - ಹರಿವೆ, ಮೆಂತೆ, ಕೊತ್ತಂಬರಿ, ಸಬ್ಬಸಿಗೆ, ಅಮೃತಬಳ್ಳಿಚಿಗುರು, ಒಂದೆಲಗ, ಪಾಲಕ್, ಇತ್ಯಾದಿ ಎಲೆಗಳು.

2. ಪುಷ್ಪ: ಹೂವುಗಳು, ಉದಾಹರಣೆಗೆ - ಬಾಳೆಹೂವು (ಕುಂಡಿಗೆ), ನುಗ್ಗೆಹೂ, ಕಮಲದ ಹೂ, ಅಗಸೆಹೂ, ಇತ್ಯಾದಿ.

3. ಫಲ: ಹಣ್ಣುಗಳು, ಉದಾಹರಣೆಗೆ - ಕುಂಬಳ, ಸೌತೆ, ಹೀರೆ, ಬದನೆ, ಹಾಲುಗುಂಬಳ, ತೊಂಡೆ, ಹಾಗಲ, ಬಾಳೆಕಾಯಿ, ಇತ್ಯಾದಿ.

4. ನಾಲ: ದಂಟುಗಳು, ಉದಾಹರಣೆಗೆ - ಕಮಲದ ದಂಟು, ಹರಿವೆದಂಟು, ಬಸಳೆದಂಟು, ಕೆಸುವಿನ ದಂಟು, ಬಾಳೆದಿಂಡು, ಇತ್ಯಾದಿ.

5. ಕಂದ: ಗಡ್ಡೆಗಳು, ಉದಾಹರಣೆಗೆ - ಸುವರ್ಣಗಡ್ಡೆ, ಕೆಸದಗಡ್ಡೆ, ಗೆಣಸು, ಆಲೂಗಡ್ಡೆ, ಬಾಳೆಗಡ್ಡೆ, ಈರುಳ್ಳಿ, ಬೆಳ್ಳುಳ್ಳಿ, ಇತ್ಯಾದಿ.

6. ಸಂಸ್ವೇದಜ: ಭೂಮಿಯನ್ನು ಸೀಳಿಕೊಂಡು ಬೆಳೆಯುವ, ಅಜೈವಿಕ ವಸ್ತುಗಳಿಂದ ಪೋಷಣೆಯಾಗುವ ಸಸ್ಯಗಳು, ಶಿಲೀಂಧ್ರಗಳು, ಪರಾವಲಂಬಿಸಸ್ಯಗಳು, ಕೊಳೆತ, ಗಬ್ಬುತುಂಬಿದ, ಆರ್ದ್ರ, ಕಟ್ಟಿಗೆ, ಒದ್ದೆಯಾದ ಒಣಹುಲ್ಲುಗಳ ಮೇಲೆ ಬೆಳೆಯುವ, ಸಮುದ್ರದಾಳದಲ್ಲಿ ಬೆಳೆಯುವ ಪಾಚಿ, ಸಸ್ಯಗಳು. ಉದಾಹರಣೆಗೆ - ನಿರ್ವಿಷ, ಸೇವನೆಗೆ ಯೋಗ್ಯವಾದ ಅಣಬೆಗಳು (ನಾಯಿಕೊಡೆ). ಈ ಆರು ಬಗೆಯ ತರಕಾರಿಗಳನ್ನು ಕ್ರಮವಾಗಿ, ಸೇವಿಸಿದಾಗ ಜೀರ್ಣಕ್ಕೆ ಕಷ್ಟವಾಗುತ್ತವೆ. ಇವುಗಳನ್ನು ತುಲನೆ ಮಾಡಿದಾಗ ಸೊಪ್ಪು/ ಎಲೆಗಳು ಅತ್ಯಂತ ಹಗುರವಾಗಿ, ಬೇಗ ಜೀರ್ಣವಾಗುತ್ತದೆ; ಅಣಬೆಯು ಜೀರ್ಣವಾಗಲು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ಪೋಷಣೆಯ ದೃಷ್ಟಿಯಿಂದ ಎಲೆ/ಸೊಪ್ಪುಗಳಿಂದ ನೀರು, ನಾರಿನಂಶ, ಕೆಲವು ಸೂಕ್ಷ್ಮ ಪೋಷಕಾಂಶಗಳನ್ನು ಪಡೆಯಬಹುದು. ಅಣಬೆಗಳಲ್ಲಿ ಪೋಷಕಾಂಶಗಳು ಜಾಸ್ತಿಯಿರುವುದರಿಂದ ಜೀರ್ಣಕ್ಕೆ ಹೆಚ್ಚು ಸಮಯವೇ ಬೇಕು. ಎಲ್ಲ ಬಗೆಯ ತರಕಾರಿಯಿಲ್ಲಿ ನೀರಿನಾಂಶ ಇರುತ್ತದೆ; ಉಳಿದ ಘನಭಾಗದಲ್ಲಿ ನಾರು ಮತ್ತು ಕೆಲವು ಸೂಕ್ಷ್ಮಪೋಷಕಗಳು ಇರುತ್ತವೆ.

ತರಕಾರಿಗಳು ಅತ್ಯುತ್ತಮ ಆಹಾರ, ಬದುಕಿಗೆ ಇರಲೇಬೇಕು, ಆರೋಗ್ಯಕ್ಕೆ ಅನಿವಾರ್ಯ ಎಂದು ಹಲವರು ತಿಳಿದಿದ್ದಾರೆ. ಆದರೆ, ವಾಸ್ತವ ಇದಲ್ಲ. ತರಕಾರಿಗಳನ್ನು ಸೇವಿಸದೆಯೂ ಅಥವಾ ಕಡಿಮೆ ತಿಂದರೂ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬಹುದು. ನಮ್ಮ ಆಹಾರದಲ್ಲಿ ಇರಲೇಬೇಕಾದ ಆಹಾರವರ್ಗವೆಂದರೆ ಏಕದಳ, ದ್ವಿದಳ, ಮಾಂಸವರ್ಗ (ಮಾಂಸಾಹಾರಿಗಳಿಗೆ), ಗೋರಸವರ್ಗ, ಪಾನೀಯವರ್ಗಗಳು ಮಾತ್ರ. ತರಕಾರಿಗಳಿಗೆ ಅವಗುಣಗಳೇ ಜಾಸ್ತಿ. ಸಂಸ್ಕರಿಸದೇ ಹಾಗೆಯೇ ತಿಂದರೆ ಇನ್ನೂ ತೊಂದರೆ.


ಇಷ್ಟೆಲ್ಲಾ ಅವಗುಣಗಳಿದ್ದರೂ ತರಕಾರಿಗಳು ಆಹಾರದಲ್ಲಿ ಬಗೆಬಗೆಯ ಅಡುಗೆಯನ್ನು ತಯಾರಿಸಲು ಬೇಕು. ಬಹುಬಗೆಯ ಅಡುಗೆಗಳಿಂದ ಏಕದಳ-ದ್ವಿದಳ-ಮಾಂಸಗಳ ಸೇವನೆಯನ್ನು ತೃಪ್ತಿಯಾಗಿ ಸೇವಿಸಲು ಸಾಧ್ಯ. ಅನ್ನ/ ರೊಟ್ಟಿ/ ಮುದ್ದೆಯನ್ನು ಮಾತ್ರ ಎಷ್ಟು ತಿನ್ನಲು ಸಾಧ್ಯ? ಇವುಗಳ ಜೊತೆಗೆ ಸಾರು-ಬಸ್ಸಾರು-ಮಸ್ಸಾರು-ಸಾಂಬಾರು-ರಸಂ-ಗೊಜ್ಜು-ಪಲ್ಯಗಳೆಲ್ಲಾ ಇದ್ದರೆ ಆಹಾರವು ಸೇವಿಸಲು ಹೇಗಿರುತ್ತದೆ? ಆದ್ದರಿಂದ ತರಕಾರಿಗಳ ಸೇವನೆಯನ್ನು ವಿವೇಚನೆಯಿಂದ ಮಾಡುವುದರಿಂದ ಕೆಲವು ಲಾಭಗಳೂ ಇವೆ. ❖

ತರಕಾರಿಗಳ ಬಳಕೆ ಹೇಗಿರಬಹುದು?

- ಭಾರತೀಯರ ಪರಂಪರಾಗತವಾದ ಅಡುಗೆಗಳು ಆಯಾ ಪ್ರಾಂತ್ಯಗಳ ಜನರ ಆರೋಗ್ಯಕ್ಕೆ ಪೂರಕವಾದ ವಿಧಾನಗಳು. ಅದನ್ನೇ ಅನುಸರಿಸುವುದು. ಬಗೆಬಗೆಯ ತರಕಾರಿಗಳ ವಿವಿಧ ಅಡುಗೆಗಳನ್ನು ಆಯಾ ಪ್ರದೇಶದಲ್ಲಿ ತಲೆಮಾರುಗಳಿಂದ ಬಳಸುವುದನ್ನು ಕಾಣುತ್ತೇವೆ. ಅವುಗಳನ್ನು ಹಾಗೆಯೇ ಬಳಸುವುದು ಉತ್ತಮ.
- ದೇಶಾಂತರ, ಖಂಡಾಂತರ ತರಕಾರಿಗಳ ನಿತ್ಯೋಪಯೋಗ ಬೇಡ. ಉದಾಹರಣೆಗೆ: ಭಾರತದಲ್ಲಿ ಬ್ರೊಕೊಲಿ, ಹೂಕೋಸು, ಎಲೆಕೋಸು, ಟೊಮ್ಯಾಟೊ ಇತ್ಯಾದಿ ಬಳಕೆ ನಿತ್ಯವೂ ಮಾಡಿದರೆ ಖಂಡಿತ ಹಾನಿದಾಯಕ.
- ಅಡುಗೆಯಲ್ಲಿ ಆಯಾ ಪ್ರಾಂತ್ಯಗಳ ಪಾರಂಪರಿಕ ಎಣ್ಣೆಕಾಳುಗಳಿಂದ ಸೋಸಿದ (ಫಿಲ್ಟರ್ಡ್) ಎಣ್ಣೆಗಳ ಬಳಕೆಯೇ ಇರಲಿ. ಸಂಸ್ಕರಿತ (ರಿಫೈನ್ಡ್) ಎಣ್ಣೆಗಳ ಬಳಕೆ, ಹೊರಪ್ರಾಂತ್ಯಗಳ ಹೊಸಬಗೆಯ ಎಣ್ಣೆಗಳ ಬಳಕೆ ಬೇಡ.

ಉದಾಹರಣೆಗೆ, ಭಾರತದಲ್ಲಿ ಆಲಿವ್, ಪಾಮ್ ಎಣ್ಣೆಗಳ ಬಳಕೆ ಬೇಡ. ಆಯಾ ಪ್ರಾದೇಶಿಕ ಎಣ್ಣೆಗಳನ್ನು ಬಳಸಿಯೇ ತರಕಾರಿಗಳಿಂದ ಅಡುಗೆಯನ್ನು ತಯಾರಿಸುವುದು ಕ್ಷೇಮಕರ.

- ತರಕಾರಿಗಳನ್ನು ಬೇಯಿಸಿ, ನೀರು ಬಸಿದು - ಎಣ್ಣೆ, ಉಪ್ಪುಗಳೊಂದಿಗೆ ಸಂಸ್ಕರಿಸಿ, ಒಗ್ಗರಣೆಯೊಂದಿಗೆ ಬಳಸಬೇಕು. ಉದಾಹರಣೆಗೆ: ಪಲ್ಯ, ಸಾರು, ಕೂಟು, ಅವಿಯಲ್, ಸಬ್ಜಿ, ಪಚಡಿ, ರಾಯತ ಇತ್ಯಾದಿ.
- ಹಸಿ ತರಕಾರಿಯನ್ನು ಹಾಗೆಯೇ ತಿನ್ನುವುದು, ರಸಹಿಂಡಿಕೊಂಡು ಕುಡಿಯುವುದು ಒಳಿತಲ್ಲ. ರಾಮನವಮಿಗೊಮ್ಮೆ ತಿಂದ ಕೋಸಂಬರಿ ಅನಾರೋಗ್ಯವನ್ನು ತಾರದು. ಆದರೆ, ನಿತ್ಯವೂ ತರಕಾರಿಗಳ ಸಲಾಡ್ ಸೇವನೆ ತೊಂದರೆದಾಯಕ.
- ಅನ್ನ/ ಮುದ್ದೆ/ ರೊಟ್ಟಿ ಮೊದಲಾದ ಏಕದಳಗಳೇ ಜಾಸ್ತಿ ಇರಬೇಕು. ನಂತರ ದ್ವಿದಳ-ಮಾಂಸಗಳ ಪ್ರಮಾಣ. ನೆಂಚಿಕೊಳ್ಳಲು ಕಾಯಿ-ಪಲ್ಲೆಗಳೂ ಇರಲಿ. ಮೇಲಿಂದ ತುಪ್ಪ, ಬೆಣ್ಣೆಗಳು ಸೇರಿರಲಿ. ಸಾಮಾನ್ಯವಾಗಿ ಆರೋಗ್ಯವಂತರ ಸ್ವಾಸ್ಥ್ಯ ಕಾಪಾಡಲು ಇವು ಸಾಕು.
- ಕೆಲವು ತರಕಾರಿಗಳು ಒಣಗಿಸಿ, ಶೀತಲಿಕರಣದಿಂದಲೂ ಅನಾರೋಗ್ಯಕಾರಕವಾಗುತ್ತವೆ.
- ಋತುಗಳನ್ನು ಹೊರತು ಪಡಿಸಿ, ಇಡೀ ವರ್ಷ ಎಲ್ಲ ತರಕಾರಿ-ಸೊಪ್ಪುಗಳ ಬಳಕೆಯೂ ಉತ್ತಮವಲ್ಲ. ಕಾಲಕ್ಕೆ ತಕ್ಕ ಆಹಾರವೇ ಇರಲಿ. ಅವರೆಕಾಯಿ ಬಳಕೆ, ಬಟಾಣಿ ಬಳಕೆಯನ್ನು ಇಡೀ ವರ್ಷವೂ ಮಾಡಿದರೆ ಗಂಭೀರ ವಾತರೋಗಕ್ಕೆ ನಾಂದಿ. ಇದು ಉದಾಹರಣೆಗೆ ಮಾತ್ರ ಹೇಳಿದ್ದು.
- ಕೆಲವು ತರಕಾರಿಗಳ ಬಳಕೆಯನ್ನು ಎಲ್ಲರೂ, ಯಾವಾಗಲೂ ಮಾಡಬಹುದು. ಹೀರೆಕಾಯಿ, ಸೋರೆಕಾಯಿ, ಪಡವಲಕಾಯಿ, ಅಮೃತಬಳ್ಳಿಯ ಎಳೆಯ ಚಿಗುರು, ಹರಿವೆ/ ದಂಟಿನ ಸೊಪ್ಪು, ಪಾಲಕ್, ನೆಲ್ಲಿಕಾಯಿ ಮುಖ್ಯವಾಗಿ ಒಳಿತೇ ಮಾಡುವ ತರಕಾರಿಗಳು.



ತರಕಾರಿಗಳ ಸಾಮಾನ್ಯ ಅವಗುಣಗಳು

- ನಾರಿನಂಶದಿಂದಾಗಿ ಕರುಳಿನ ಕ್ರಿಯೆಗಳನ್ನು ತಡೆಯುತ್ತವೆ.
- ಪಚನದ ವೇಗವು ಕಡಿಮೆಯಾಗುತ್ತದೆ.
- ಕರುಳಿನ ಒಳಮೈ, ಮೂಳೆ, ಸಂಧಿಗಳ ಜಿಡ್ಡಿನ ರಕ್ಷಾಪದರಗಳನ್ನು ಒಣಗಿಸುವುವು.
- ಮಲವನ್ನೇ ಹೆಚ್ಚು ಉತ್ಪತ್ತಿಮಾಡುವುದರಿಂದ ಹೂಸು, ಮಲ-ಮೂತ್ರಗಳ ವೇಗಭರಿತ ವಿಸರ್ಜನೆಗೆ ಕಾರಣ. ಮಲದಂಶದ ಹೆಚ್ಚಾಗುವಿಕೆಯು, ರಸ-ರಕ್ತ-ಮಾಂಸ-ಮೇದಸ್ಸು-ಅಸ್ಥಿ-ಮಜ್ಜೆ-ಶುಕ್ರಧಾತುಗಳ ಪ್ರಮಾಣವನ್ನು ಕುಗ್ಗಿಸುತ್ತದೆ. ಆದ್ದರಿಂದ, ತರಕಾರಿಗಳನ್ನೇ ಸೇವಿಸಿ ದೀರ್ಘಕಾಲ ಜೀವಿಸಲು ಕಷ್ಟವಾಗುತ್ತದೆ.
- ಮೂಳೆಗಳ ಪೊಳ್ಳುತನಕ್ಕೆ ಕಾರಣ.
- ದೃಷ್ಟಿ, ಚರ್ಮ, ಕೂದಲುಗಳ ನೈಜಕಾಂತಿ-ವರ್ಣ-ಪಸೆ-ಹೊಳಪು-ನುಣುಪು-ಜಿಡ್ಡನ್ನು ಕ್ರಮೇಣವಾಗಿ ಕುಂದಿಸುತ್ತದೆ.
- ರಕ್ತ, ಶುಕ್ರಧಾತುಗಳ ಗುಣವತ್ತರವಾದ ಬದಲಾವಣೆಗೆ ಕಾರಣ.
- ಸ್ಮರಣಶಕ್ತಿಯನ್ನು ಕ್ರಮೇಣವಾಗಿ ಕುಂದುವಂತೆ ಮಾಡುತ್ತವೆ.
- ಅಕಾಲವೃದ್ಧಾಪ್ಯ, ಅಂದರೆ ಕೂದಲುದುರುವುದು, ನೆರೆಯುವುದು, ಕಾಂತಿಹೀನವಾಗಿಸುವುದು, ಸೀಳುವುದು, ಚರ್ಮವನ್ನು ಸುಕ್ಕುಗಟ್ಟಿಸುವುದು.
- ಒಟ್ಟಾರೆ, ದೇಹಧಾತುಗಳ ಧಾರಣೆಯನ್ನು ಮಾಡದು, ಧಾತುಪೋಷಕ-ವರ್ಧಕಗಳಲ್ಲ ತರಕಾರಿಗಳು. ಶರೀರದಲ್ಲಿ ಮಲದ ಪ್ರಮಾಣವನ್ನು ಮಾತ್ರ ಹೆಚ್ಚಿಸುತ್ತದೆ; ದೇಹವನ್ನು ಕ್ರಮೇಣ ರೋಗಗಳ ಗೂಡಾಗಿಸುತ್ತವೆ.
- ಇಡಿಯ ದೇಹವನ್ನು ಪೊಳ್ಳಾಗಿಸುತ್ತದೆ. ಹೀಗೆ ಬಲಹಾನಿಯಾದರೆ ರೋಗಕ್ಕೆ ಆಹ್ವಾನವಿತ್ತಂತೆಯೇ!

(ಆಧಾರ: ‘ಭಾವಪ್ರಕಾಶ’ ನಿಘಂಟುವಿನ ಶಾಕವರ್ಗ)

ಚಿತ್ರದುರ್ಗ ಜಿಲ್ಲೆ ಪ್ರವೇಶಿಸಿದ 'ಭಾರತ್ ಜೋಡೊ' ಯಾತ್ರೆ

ಬಿಜೆಪಿ ಪರಿಶಿಷ್ಟರ ವಿರೋಧಿ: ರಾಹುಲ್

• ಜಿ.ಬಿ. ನಾಗರಾಜ್

ಹಿರಿಯೂರು (ಚಿತ್ರದುರ್ಗ): ಪರಿಶಿಷ್ಟ ಜಾತಿ ಹಾಗೂ ಪಂಗಡದ ಮೀಸಲಾತಿ ಪ್ರಮಾಣ ಹೆಚ್ಚಿಸದೇ ಎರಡೂವರೆ ವರ್ಷ ಕಾಲಹರಣ ಮಾಡಿದ ರಾಜ್ಯ ಬಿಜೆಪಿ ಸರ್ಕಾರ, ಪರಿಶಿಷ್ಟರ ವಿರೋಧಿ ಎಂಬುದನ್ನು ನಿರೂಪಿಸಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗದ ವರದಿಯ ತ್ವರಿತ ಅನುಷ್ಠಾನವಾಗಲಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಗ್ರಹಿಸಿದರು.

ಹಿರಿಯೂರು ತಾಲ್ಲೂಕಿನ ಬಾಲೇನ ಹಳ್ಳಿ ಸಮೀಪ ಸೋಮವಾರ ಭಾರತ್ ಜೋಡೊ ಯಾತ್ರೆಯಲ್ಲಿ ಅವರು ಮಾತನಾಡಿದರು.

'ನಾಗಮೋಹನ್ ದಾಸ್ ಆಯೋಗ ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ರಚನೆಯಾಗಿತ್ತು. ಪರಿಶಿಷ್ಟ ಜಾತಿ ಮೀಸಲಾತಿಯನ್ನು ಶೇ 15ರಿಂದ 17ಕ್ಕೆ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಶೇ 3ರಿಂದ 7ಕ್ಕೆ ಹೆಚ್ಚಿಸಬೇಕು ಎಂಬುದು ಕಾಂಗ್ರೆಸ್ ನಿಲುವಾಗಿತ್ತು. ಇದನ್ನು ಈ ಹಿಂದೆಯೇ ಬಹಿರಂಗವಾಗಿ ವ್ಯಕ್ತಪಡಿಸಿದ್ದೆವು. ವರದಿಯನ್ನು ಅನುಷ್ಠಾನಗೊಳಿಸದೇ ಕಾಲಹರಣ ಮಾಡಿದ್ದು ಬಿಜೆಪಿ' ಎಂದು ಅವರು ವಾಗ್ದಾಳಿ ನಡೆಸಿದರು.

ಕಡು ಭ್ರಷ್ಟ ಸರ್ಕಾರ: 'ದೇಶದಲ್ಲಿಯೇ ಅತ್ಯಂತ ಭ್ರಷ್ಟ ಸರ್ಕಾರ ಕರ್ನಾಟಕದಲ್ಲಿದೆ. ಪ್ರತಿಯೊಂದಕ್ಕೂ ಶೇ 40ರಷ್ಟು ಕಮಿಷನ್ ಪಡೆಯಲಾಗುತ್ತಿದೆ. ಖಾಸಗಿ ಶಾಲೆಗಳಿಗೆ ಮಾನ್ಯತೆ ನೀಡುವುದಕ್ಕೂ ಲಂಚ ನೀಡಬೇಕಾದ ಸ್ಥಿತಿ ರಾಜ್ಯದಲ್ಲಿದೆ. ಪಿಎಸ್ಐ ಹುದ್ದೆಗೆ ₹ 80 ಲಕ್ಷಕ್ಕೆ ಹರಾಜಾಗಿದೆ. ಸಹಾಯಕ ಪ್ರಾಧ್ಯಾಪಕ, ಎಂಜಿನಿಯರ್ ಹುದ್ದೆಗಳನ್ನು ಕೂಡ ಮಾರಾಟಕ್ಕೆ ಇಡಲಾಗಿದೆ. ಮುಖ್ಯಮಂತ್ರಿ ಹುದ್ದೆಗೆ ₹ 2,500 ಕೋಟಿ ಲಂಚ ನೀಡಬೇಕಾದ ಸ್ಥಿತಿ ಬಿಜೆಪಿಯಲ್ಲಿದೆ. ಇದನ್ನು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರೇ ಬಹಿರಂಗಪಡಿಸಿದ್ದಾರೆ' ಎಂದು ದೂರಿದರು.

'ಯುಪಿಎ ಅವಧಿಯಲ್ಲಿ ₹400ಕ್ಕೆ ಸಿಗುತ್ತಿದ್ದ ಅಡುಗೆ ಅನಿಲದ ಪ್ರತಿ ಸಿಲಿಂಡರ್ ಬೆಲೆ ಈಗ ₹ 1,000ಕ್ಕೆ ಏರಿಕೆಯಾಗಿದ್ದು ಏಕೆ' ಎಂದರು.



ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕೆಂಕೆರೆ ಗ್ರಾಮದ ಪುರದಮಠದ ಬಳಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕಾಂಗ್ರೆಸ್ ಧ್ವಜ ಹಿಡಿದು ಓಡಿದರು

ಕಾಂಗ್ರೆಸ್ ಧ್ವಜ ಹಿಡಿದು ಓಡಿದ ರಾಹುಲ್, ಡಿಕೆಶಿ

ತುಮಕೂರು: ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕೆಂಕೆರೆ ಗ್ರಾಮದ ಪುರದಮಠದ ಬಳಿ ಭಾರತ್ ಜೋಡೊ ಯಾತ್ರೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಧ್ವಜ ಹಿಡಿದು ಓಡಿದರು.

ಸೋಮವಾರ ಬೆಳಿಗ್ಗೆ 6 ಗಂಟೆಗೆ ಪೂಜೆಕಟ್ಟೆ ಗ್ರಾಮದಿಂದ ಪಾದಯಾತ್ರೆ ಆರಂಭಿಸಿ, ಹುಳಿಯಾರು ಪಟ್ಟಣದ ಮೂಲಕ ಕೆಂಕೆರೆವರೆಗೆ ಹೆಜ್ಜೆ ಹಾಕಿದರು. ಅಲ್ಲಿಯೇ ಬೆಳಗಿನ ಉಪಾಹಾರ ಸೇವಿಸಿ, ಗ್ರಾಮಸ್ಥರ ಕುಶಲೋಪರಿ ವಿಚಾರಿಸಿದರು. ತಿಂಡಿ ತಿಂದ ನಂತರ ಮತ್ತೆ ಯಾತ್ರೆ ಆರಂಭವಾಯಿತು.

'ಇದೇ ವೇಳೆ ಡಿ.ಕೆ.ಶಿವಕುಮಾರ್ ಜತೆ ಕಾಂಗ್ರೆಸ್ ಧ್ವಜ ಹಿಡಿದು ಒಂದಿಷ್ಟು ದೂರ ಓಡಿದರು. ಭದ್ರತಾ ಸಿಬ್ಬಂದಿ ಮತ್ತು ಪೊಲೀಸರು ಕೂಡ ಏದುಸಿರು ಬಿಡುತ್ತ ಅವರಿಬ್ಬರ ಜೊತೆ ಓಡಿದರು. ಇದು ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿತು.

ಮಳೆಯಲ್ಲೇ ಮುಂದುವರಿದ ಪಾದಯಾತ್ರೆ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಮಳೆಯಲ್ಲಿಯೇ ಪಾದಯಾತ್ರೆ ನಡೆಸಿದರು. ಅಪಾರ ಪ್ರಮಾಣದ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಮಳೆಯಲ್ಲೇ ಅವರೊಂದಿಗೆ ಹೆಜ್ಜೆ ಹಾಕಿದರು.

ಹಿರಿಯೂರು ನಗರದ ಹುಳಿಯಾರು ರಸ್ತೆಯಲ್ಲಿ ಪಾದಯಾತ್ರೆ ಸಾಗುತ್ತಿದ್ದಾಗ ಆಗಸದಲ್ಲಿ ದಟ್ಟ ಮೋಡಗಳು ಆವರಿಸಿದವು. ಹುಳಿಯಾರು ವೃತ್ತ ದಾಟಿದ ಬಳಿಕ ತುಂತುರು ಮಳೆ ಆರಂಭವಾಯಿತು. ವೇದಾವತಿ ನದಿಯ ಸೇತುವೆ ಮೇಲೆ ಸಾಗುವಾಗ ಮಳೆ ಬಿರುಸಾಯಿತು. ಸುರಿಯುವ ಮಳೆಗೂ ರಾಹುಲ್ ಯಾತ್ರೆ ನಿಲ್ಲಲಿಲ್ಲ.

ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಜನರೂ ರಾಹುಲ್ ಜೊತೆ ಹೆಜ್ಜೆ ಹಾಕಿದರು. ರಸ್ತೆ ಎರಡೂ ಬದಿಯಲ್ಲಿ ನಿಂತಿದ್ದ ಜನರು ಕೈಬೀಸಿ, 'ಜೋಡೊ ಜೋಡೊ ಭಾರತ್ ಜೋಡೊ' ಘೋಷಣೆ ಮೊಳಗಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ, ಮಾಜಿ ಸಂಸದ ಕೆ.ಎಚ್. ಮುನಿಯಪ್ಪ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಇದ್ದರು.

'ವಾಲ್ಮೀಕಿಗೆ ಅವಮಾನ ಮಾಡಿದ ರಾಹುಲ್'

ಮಡಿಕೇರಿ: 'ತಿಪಟೂರು ಕ್ಷೇತ್ರದಲ್ಲಿ ಜನ ಮಹರ್ಷಿ ವಾಲ್ಮೀಕಿ ಭಾವಚಿತ್ರದೊಂದಿಗೆ ಕಾಯುತ್ತಿದ್ದರೂ ರಾಹುಲ್ ಗಾಂಧಿ ಅತ್ತ ತಿರುಗಿಯೂ ನೋಡಲಿಲ್ಲ. ರಾಜ್ಯದ ಕಾಂಗ್ರೆಸ್ ನಾಯಕರೂ ಬರಲಿಲ್ಲ. ಆ ಮೂಲಕ ವಾಲ್ಮೀಕಿ ಹಾಗೂ ಜನರಿಗೆ ಅವಮಾನ ಮಾಡಿದರು' ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಸುದ್ದಿಗಾರರಿಗೆ ತಿಳಿಸಿದರು.

'ಮಹಾರಾಷ್ಟ್ರದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ₹ 3 ಕೋಟಿ ನೆರವು'

ಪ್ರಜಾವಾಣಿ ವಾರ್ತೆ

ಕನ್ನೇರಿ (ಕೊಲ್ಹಾಪುರ ಜಿಲ್ಲೆ): 'ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಕನ್ನೇರಿಯ ಸಿದ್ಧಗಿರಿ ಮಠದ ಆವರಣದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ₹ 3 ಕೋಟಿ ನೆರವು ನೀಡುವುದಾಗಿ' ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಮಠದ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ಸಂತ ಸಮಾವೇಶ ಉದ್ಘಾಟಿಸಿ, ಕನ್ನಡ ಭವನಕ್ಕೆ ಶಂಕುಸ್ಥಾಪನ ನೆರವೇರಿಸಿ ಮಾತನಾಡಿದ ಅವರು, 'ಈಗಾಗಲೇ ₹ 1 ಕೋಟಿ ನೀಡಿದ್ದು, ದೀಪಾವಳಿ ಹಬ್ಬಕ್ಕೆ ಮತ್ತೆ ₹ 2 ಕೋಟಿ ನೀಡಲಾಗುವುದು' ಎಂದು ಭರವಸೆ ನೀಡಿದರು.

'ಕನ್ನೇರಿ ಮಠವು ದೇಶದ ಆದರ್ಶ ಮಠವಾಗಿದೆ. ಅದೃಶ್ಯ ಕಾಡಸಿದ್ಧೇಶ್ವರ ಶ್ರೀಗಳು ಕರ್ನಾಟಕದಲ್ಲಿಯೂ ದೊಡ್ಡ ಮಠ ತೆರೆಯಬೇಕು. ಅವರ ಆದರ್ಶ ಕೆಲಸಗಳು ನಮಗೂ ಬೇಕು. ಮಠಕ್ಕೆ ಬೇಕಾಗುವ ಜಾಗ ಹಾಗೂ ಅಗತ್ಯ ನೆರವನ್ನು ನೀಡಲಾಗುವುದು' ಎಂದೂ ವಾಗ್ದಾನ ಮಾಡಿದರು.

ಮತಾಂತರ ತಡೆಯಬೇಕು: 'ಸ್ವಾಮೀಜಿಗಳು ಮತಾಂತರ ತಡೆಯಲು ಮುಂದಾಗಬೇಕು. ಇಲ್ಲವಾದರೆ ಮತಾಂತರ ರೀತಿಯಲ್ಲೇ ನಮ್ಮನ್ನು ದೇಶಾಂತರ ಮಾಡುತ್ತಾರೆ' ಎಂದು ಕನ್ನೇರಿ ಸಿದ್ಧಗಿರಿ ಮಠಾಧೀಶ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಕೃಷಿ ವಿಜ್ಞಾನ ಕೇಂದ್ರವನ್ನು ಉದ್ಘಾಟಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	123.80	8,015	2,349
ಹಾರಂಗಿ	2,859	2853.13	852	1,250
ಕಬಿನಿ	2284	2,282.10	3,500	1,350
ಹೇಮಾವತಿ	2,922	2,921.20	2,590	3,092
ಲಿಂಗನಮಕ್ಕಿ	1,819	1,814	1,500	7,206
ಸೂಪಾ (ಮೀ)	564	553.58	1,750	3,432
ವಾಣಿ	595	589	39	379
ತುಂಗಭದ್ರಾ	1,633	1633	12,692	14,878
ಮಲಪ್ರಭಾ	2079.5	2,079.50	294	294
ಘಟಪ್ರಭಾ	2175	2,174.46	934	1,408
ಭದ್ರಾ	186	185	2,808	2,808
ಆಲಮಟ್ಟಿ (ಮೀ)	519.6	519.60	35,451	35,000
ನಾರಾಯಣಪುರ (ಮೀ)	492.25	492.12	50,000	52,800

* ನೆಲಮಟ್ಟದಿಂದ

ವಿವಿಧೆಡೆ ಮಳೆ ಬೆಳೆ ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರ ರಾತ್ರಿ ಮತ್ತು ಸೋಮವಾರ ಧಾರಾಕಾರ ಮಳೆಯಾಗಿದೆ.

ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನದಲ್ಲಿ ಬೆಳೆಗಳು ಜಲಾವೃತವಾಗಿವೆ. ಕೆರೆಗಳು ಕೋಡಿ ಬಿದ್ದಿವೆ. ಕೆಲವೆಡೆ ರಸ್ತೆ ಸಂಪರ್ಕ ಕಡಿತಗೊಂಡಿತ್ತು.

ಅರಕಲಗೂಡು ತಾಲ್ಲೂಕಿನ ದೊಡ್ಡಮಗ್ಗೆ ಹೋಬಳಿಯ ಮುದ್ದನಹಳ್ಳಿಯಲ್ಲಿ ಕೆರೆ ಕೋಡಿ ಬಿದ್ದು, ಮುಸುಕಿನ ಜೋಳ, ಭತ್ತ, ತೆಂಗು ಮತ್ತು ಅಡಿಕೆ ಬೆಳೆಗಳಿಗೆ ಹಾನಿಯಾಗಿದೆ. ತಾಲ್ಲೂಕಿನ ದುಮ್ಮಿ ಗ್ರಾಮದಲ್ಲಿ ಹಳಗಟ್ಟೆ ಕೆರೆ ಕೋಡಿ ಬಿದ್ದು, ಭತ್ತದ ಬೆಳೆ ಜಲಾವೃತವಾಗಿದೆ.

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಯರಿಯೂರಿನಲ್ಲಿ ಮನೆ ಗೋಡೆ ಕುಸಿದಿದೆ.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ಸಾರಿಗೆ ಬಸ್ ನಿಲ್ದಾಣದಲ್ಲಿ ಹೋಟೆಲ್, ಅಂಗಡಿ, ಬೈಕ್ ಸ್ಟ್ಯಾಂಡ್, ಬೇಕರಿಗೆ ನೀರು ನುಗ್ಗಿದ ಪರಿಣಾಮ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ. ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಮೂಡಲಕೊಪ್ಪಲು-ಕಂಠೇನಹಳ್ಳಿ ಬಳಿ ಚಾಮರಾಜ ಬಲ ದಂಡೆ ನಾಲೆಯ ಗೋಡೆ ಭಾನುವಾರ ರಾತ್ರಿ ಕುಸಿದಿದ್ದು, ಅಪಾರ ನೀರು ಪೋಲಾಗಿದೆ. ಹುಣಸೂರಿನ ಮಂಜುನಾಥ ಬಡಾವಣೆಯ ತಗ್ಗು ಪ್ರದೇಶಗಳಲ್ಲಿ ನೀರು ನಿಂತು ಜನ ಜೀವನ ಅಸ್ತವ್ಯಸ್ತಗೊಂಡಿತ್ತು. ಹುಣಸೂರಿನಲ್ಲಿ 21 ಸೆಂ.ಮೀ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ. ಧಾರವಾಡ, ಬೆಳಗಾವಿ , ಉತ್ತರ ಕನ್ನಡ ಹಾಗೂ ಹಾವೇರಿ ಜಿಲ್ಲೆಯ ಕೆಲವೆಡೆ ಉತ್ತಮ ಮಳೆಯಾಗಿದೆ.

ಬೆಳಗಾವಿಯಲ್ಲಿ ಧಾರಾಕಾರ ಮಳೆಯಿಂದಾಗಿ ಮಾರುಕಟ್ಟೆಯಲ್ಲಿ ವ್ಯಾಪಾರ-ವಹಿವಾಟಿಗೆ ತೊಡಕಾಯಿತು. ಹಾವೇರಿಯ ತಡಸದಲ್ಲಿ ಭಾನುವಾರ ರಾತ್ರಿ ಮತ್ತು ಸೋಮವಾರ ಬೆಳಿಗ್ಗೆ ಭಾರಿ ಮಳೆಯಾಗಿದೆ.

ಸಚಿವ ಸೋಮಶೇಖರ್ ಅರ್ಜಿ ವಿಚಾರಣೆಗೆ 'ಸುಪ್ರೀಂ' ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಸತಿ ಯೋಜನೆಯೊಂದರ ಕಾಮಗಾರಿಯ ಗುತ್ತಿಗೆ ನೀಡಲು ಗುತ್ತಿಗೆದಾರರಿಂದ ಲಂಚ ಪಡೆದ ಪ್ರಕರಣದಲ್ಲಿ ದಾಖಲಾಗಿರುವ ಎಫ್ಐಆರ್ ರದ್ದು ಕೋರಿ ಕರ್ನಾಟಕದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಐಎಎಸ್ ಅಧಿಕಾರಿ ಜಿ.ಸಿ.ಪ್ರಕಾಶ್ ಹಾಗೂ 37 ಕ್ರೆಸೆಂಟ್ ಹೋಟೆಲ್ ಮಾಲೀಕ ಕೆ.ರವಿ ಸಲ್ಲಿಸಿರುವ ಪ್ರತ್ಯೇಕ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಈ ಪ್ರಕರಣದಲ್ಲಿ ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ವಿರುದ್ಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಎಫ್ಐಆರ್‌ನ ತನಿಖೆಗೆ ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 23ರಂದು ತಡೆಯಾಜ್ಞೆ ನೀಡಿತ್ತು.

ಮೂವರು ಅರ್ಜಿದಾರರ ಪರವಾಗಿ ಹಿರಿಯ ವಕೀಲರಾದ ಮುಕುಲ್ ರೋಹಟಗಿ, ದೇವದತ್ತ ಕಾಮತ್ ಹಾಗೂ ಸಿದ್ಧಾರ್ಥ ದವೆ ವಾದ ಮಂಡಿಸಿ, ಹೈಕೋರ್ಟ್ ಆದೇಶದ ಸಿಂಧುತ್ವವನ್ನು ಪ್ರಶ್ನಿಸಿದರು.

ಪ್ರಕರಣದ ಒಬ್ಬ ಆರೋಪಿ ವಿರುದ್ಧ ತನಿಖೆಗೆ ತಡೆಯಾಜ್ಞೆ ನೀಡಿರುವುದರಿಂದ ಲೋಕಾಯುಕ್ತ ಪೊಲೀಸರು ಇತರರ ವಿರುದ್ಧ ವಿಚಾರಣೆ ನಡೆಸುವುದು ಸರಿಯಲ್ಲ ಎಂದರು.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಹಿಮಾ ಕೊಹ್ಲಿ ಅವರಿದ್ದ ನ್ಯಾಯಪೀಠ, ಈ ಮನವಿಯನ್ನು ತಿರಸ್ಕರಿಸಿತು.

ಈ ನಡುವೆ, ದೂರುದಾರ ಟಿ.ಜೆ.ಅಬ್ರಹಾಂ ಪರ ವಕೀಲರು, 'ಯಡಿಯೂರಪ್ಪ ಪ್ರಕರಣ ವಿಭಿನ್ನವಾಗಿತ್ತು. ಯಡಿಯೂರಪ್ಪ ಪ್ರಕರಣದಲ್ಲಿ ರಾಜ್ಯಪಾಲರಿಂದ ಪೂರ್ವಾನುಮತಿ ಕೋರಲಾಗಿತ್ತು. ಅದು ತಿರಸ್ಕೃತವಾಗಿತ್ತು. ಆದರೆ, ಬೇರೆ ಆರೋಪಿಗಳ ವಿಚಾರದಲ್ಲಿ ಇದು ಅನ್ವಯವಾಗುವುದಿಲ್ಲ' ಎಂದರು.

ವಿಚಾರಣೆ ವೇಳೆ, ಅರ್ಜಿದಾರರ ಪರ ವಕೀಲರು ತಮ್ಮ ಅರ್ಜಿಗಳನ್ನು ಹಿಂಪಡೆಯುವುದಾಗಿ ತಿಳಿಸಿದರು.

ಬೆಂಗಳೂರು ಪೂರ್ವ ತಾಲ್ಲೂಕಿನ ಕೋನದಾಸನಪುರದಲ್ಲಿ ಬಿಡಿಎ ನಿರ್ಮಿಸುತ್ತಿರುವ ಬಹುಮಹಡಿ ವಸತಿ ಸಮುಚ್ಚಯದ ಕಾಮಗಾರಿಯ ಗುತ್ತಿಗೆ ಸಂಬಂಧ ಚಂದ್ರಕಾಂತ್ ರಾಮಲಿಂಗಂ ಅವರಿಂದ ಇತರ ಆರೋಪಿಗಳು ಒಟ್ಟು ₹ 29.5 ಕೋಟಿ ಲಂಚ ಪಡೆದಿದ್ದಾರೆ ಎಂದು ಆರೋಪಿಸಿ ಟಿ.ಜೆ. ಅಬ್ರಹಾಂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು.

ಆರೋಪಿಗಳ ವಿರುದ್ಧ ಎಫ್ಐಆರ್ ದಾಖಲಿಸಿ ತನಿಖೆ ನಡೆಸುವಂತೆ ವಿಶೇಷ ನ್ಯಾಯಾಲಯವು ಆದೇಶ ಹೊರಡಿಸಿತ್ತು.

ಪಿಎಸ್ಐ: ಪರೀಕ್ಷೆ ತಡೆ ಆದೇಶ ಮುಂದುವರಿಕೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಅಕ್ರಮ ಹಿನ್ನೆಲೆಯಲ್ಲಿ 545 ಹುದ್ದೆಗಳಿಗೆ ಹೊಸದಾಗಿ ಲಿಖಿತ ಪರೀಕ್ಷೆಗೆ ನೀಡಿದ್ದ ತಡೆ ಆದೇಶವನ್ನು ಹೈಕೋರ್ಟ್ ಇದೇ 19ರವರೆಗೆ ವಿಸ್ತರಿಸಿದೆ. ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ಅರ್ಜಿಗಳ ವಿಚಾರಣೆ ನಡೆಸಿತು.

ಅರ್ಜಿದಾರ ಅಭ್ಯರ್ಥಿಗಳ ಪರ ಹಿರಿಯ ವಕೀಲರು ಅನಾರೋಗ್ಯದ ಕಾರಣ ಗೈರುಹಾಜರಾಗಿದ್ದ ಹಿನ್ನೆಲೆಯಲ್ಲಿ ಪೀಠ ವಿಚಾರಣೆ ಮುಂದೂಡಿತಲ್ಲದೆ, ಆದ್ಯತೆಯ ಮೇರೆಗೆ ವಿಚಾರಣೆ ಕೈಗೆತ್ತಿಕೊಳ್ಳುವುದಾಗಿ ತಿಳಿಸಿತು.

'ಮುಂದಿನ ಆದೇಶದವರೆಗೆ ಪಿಎಸ್ಐ ನೇಮಕಾತಿಗಾಗಿ ಮರುಪರೀಕ್ಷೆ ನಡೆಸಲು ದಿನಾಂಕ ಪ್ರಕಟಿಸಬಾರದು' ಎಂದು 2022ರ ಸೆ. 28ರಂದು ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಇದೇ 19ರವರೆಗೆ ವಿಸ್ತರಿಸಿ ಆದೇಶಿಸಿತು.

ಮುರುಘಾಶ್ರೀ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ಚಿತ್ರದುರ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಹಾಗೂ ಹಾಸ್ಟೆಲ್‌ನ ಮಹಿಳಾ ವಾರ್ಡನ್ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಅ. 21ರವರೆಗೆ ವಿಸ್ತರಿಸಲಾಗಿದೆ. ಶರಣರನ್ನು ಸೆ.1ರಂದು ಬಂಧಿಸಲಾಗಿತ್ತು.

ಬಂಧನದ ಅವಧಿ ಅಂತ್ಯವಾಗಿದ್ದರಿಂದ ಸೋಮವಾರ ಮುರುಘಾ ಶರಣರನ್ನು ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಧೀಶೆ ಬಿ.ಕೆ. ಕೋಮಲಾ ಇಬ್ಬರ ನ್ಯಾಯಾಂಗ ಬಂಧನದ ಅವಧಿಯನ್ನು ವಿಸ್ತರಿಸಿ ಆದೇಶಿಸಿದರು. ಭದ್ರತೆ ಕಾರಣದಿಂದಾಗಿ ಶಿವಮೊಗ್ಗದ ಜೈಲಿನಲ್ಲಿರುವ ಮಹಿಳಾ ವಾರ್ಡನ್‌ರನ್ನು ಹಾಜರುಪಡಿಸಲಿಲ್ಲ. ಪ್ರಕರಣದ 4ನೇ ಆರೋಪಿ ಪರಮಶಿವಯ್ಯ ಹಾಗೂ 5ನೇ ಆರೋಪಿ ಗಂಗಾಧರಯ್ಯ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಾಲಯ ತಿರಸ್ಕರಿಸಿದೆ.

ಹೊರ ಜಿಲ್ಲೆಗಳಿಂದ ಬರುವ ಉದ್ಯೋಗಾಕಾಂಕ್ಷಿಗಳಿಗೆ ಉಚಿತ ವಸತಿ ಸೌಲಭ್ಯ

ಮೂಡುಬಿದಿರೆಯಲ್ಲಿ 'ಆಳ್ವಾಸ್ ಪ್ರಗತಿ' 14ರಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಆಳ್ವಾಸ್ ಶಿಕ್ಷಣ ಪತಿಷ್ಠಾನದ ವತಿಯಿಂದ ಬೃಹತ್ ಉದ್ಯೋಗ ಮೇಳ 'ಆಳ್ವಾಸ್ ಪ್ರಗತಿ' ಅ.14 ಮತ್ತು 15ರಂದು ಮೂಡುಬಿದಿರೆಯ ವಿದ್ಯಾಗಿರಿ ಆವರಣದಲ್ಲಿ ನಡೆಯಲಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ಉದ್ಯೋಗ ಮೇಳದಲ್ಲಿ 200ಕ್ಕೂ ಹೆಚ್ಚು ಕಂಪನಿಗಳು ನೋಂದಾಯಿಸಿಕೊಂಡಿದ್ದು, 12,518ಕ್ಕೂ ಅಧಿಕ ಉದ್ಯೋಗಾವಕಾಶಗಳು ಲಭ್ಯವಾಗಲಿವೆ. ಗಲ್ಫ್ ಮೂಲದ ಎಕ್ಸ್‌ಪರ್ಟೈಸ್, ಬ್ರೈನ್‌ಒಬ್ರೈನ್ ಕಂಪನಿಗಳು ಕೂಡ ಭಾಗವಹಿಸಲಿವೆ. ಏಸ್ ಡಿಸೈನರ್, ಏಸ್ ಮ್ಯಾನುಫ್ಯಾಕ್ಚರಿಂಗ್ ಸಿಸ್ಟಮ್ಸ್, ವೋಲ್ವೊ ಸಿಇ ಇಂಡಿಯಾ, ವಿಪ್ರೊ ಇನ್ಫ್ರಾಸ್ಟ್ರಕ್ಚರ್ ಎಂಜಿನಿಯರಿಂಗ್, ಏರೊಸ್ಪೇಸ್ ಅಂಡ್ ಡಿಫೆನ್ಸ್, ಟೊಯೊಟಾ ಇಂಡಸ್ಟ್ರೀಸ್ ಇಂಡಿಯಾ, ಸ್ವಿಚ್‌ಗೇರ್ ಮೊದಲಾದ 35ಕ್ಕೂ ಹೆಚ್ಚು ಕಂಪನಿಗಳು 200ಕ್ಕೂ ಹೆಚ್ಚು ಉದ್ಯೋಗಾವಕಾಶ ನೀಡಲಿವೆ. ಮ್ಯಾನುಫ್ಯಾಕ್ಚರಿಂಗ್ ವಲಯದಲ್ಲಿ 2,500ಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಇವೆ' ಎಂದರು.

'12ನೇ ಆವೃತ್ತಿಯ ಉದ್ಯೋಗ ಮೇಳವನ್ನು ಅ.14ರಂದು ಬೆಳಿಗ್ಗೆ 9.30ಕ್ಕೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಉದ್ಘಾಟಿಸುವರು. ಶಾಸಕ ಉಮಾನಾಥ್ ಕೋಟ್ಯಾನ್ ಅಧ್ಯಕ್ಷತೆ ವಹಿಸುವರು. ಜಿಲ್ಲೆಯ ಶಾಸಕರು ಭಾಗವಹಿಸುವರು' ಎಂದು ಹೇಳಿದರು.

ಆನ್‌ಲೈನ್ ನೋಂದಣಿ ಕಡ್ಡಾಯ. ನೋಂದಾಯಿಸಿದ ಅಭ್ಯರ್ಥಿಗಳಿಗೆ ಮೇಳದ ಸಿದ್ಧತೆಯ ಎಲ್ಲ ಮಾಹಿತಿ ಒದಗಿಸಲಾಗುವುದು. ಹೊರ ಜಿಲ್ಲೆಗಳಿಂದ ಬರುವ ಉದ್ಯೋಗಾಕಾಂಕ್ಷಿಗಳಿಗೆ ಅ.13ರಿಂದ ವಸತಿ ಉಚಿತ ವ್ಯವಸ್ಥೆ ಕಲ್ಪಿಸಲಾಗುವುದು. ಹೆಚ್ಚಿನ ಮಾಹಿತಿಗೆ 9008907716, 9663190590, 7975223865, 9741440490 ಸಂಪರ್ಕಿಸಬಹುದು ಎಂದು ತಿಳಿಸಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಮ್ಯಾನೇಜ್‌ಮೆಂಟ್ ಟ್ರಸ್ಟಿ ವಿವೇಕ್ ಆಳ್ವ, ತರಬೇತಿ ಅಂಡ್ ಪ್ಲೇಸ್‌ಮೆಂಟ್‌ನ ಮುಖ್ಯಸ್ಥ ಸುಶಾಂತ್ ಅನಿಲ್ ಲೋಬೊ, ಮಾಧ್ಯಮ ಸಂಯೋಜಕ ಪ್ರಸಾದ್ ಶೆಟ್ಟಿ ಇದ್ದರು.

ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಡಿ.21ರಿಂದ

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಮೂಡಬಿದಿರೆಯ ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ ವಿಶ್ವದಲ್ಲೇ ಪ್ರಥಮ ಬಾರಿಗೆ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯನ್ನು ಡಿಸೆಂಬರ್ 21ರಿಂದ 27ರವರೆಗೆ ಮೂಡಬಿದಿರೆಯ ಆಳ್ವಾಸ್ ವಿದ್ಯಾಗಿರಿ ಆವರಣದಲ್ಲಿ ಆಯೋಜಿಸಿದೆ ಎಂದು ಭಾರತ್ ಸ್ಕೌಟ್ಸ್-ಗೈಡ್ಸ್‌ನ ಜಿಲ್ಲಾ ಘಟಕದ ಮುಖ್ಯ ಆಯುಕ್ತ ಡಾ. ಎಂ. ಮೋಹನ್ ಆಳ್ವ ತಿಳಿಸಿದರು.



ಸುಭಾಷಿತ

ಮೌನ ಎಂದರೆ ಮಾತನಾಡದಿರುವುದು ಮತ್ತು ಕೆಲಸ ಮಾಡದಿರುವುದು ಎಂದರ್ಥವಲ್ಲ. ನಿಮ್ಮ ಮನಸ್ಸು ಕ್ಷೋಭೆಗೆ ಒಳಗಾಗಿಲ್ಲ ಎಂದರ್ಥ.

—ನಾಟ್ ಹಾನ್

ಆರ್ಥಿಕತೆಯ ಮೇಲೆ ಕರಿಮೋಡ ಪರಿಣಾಮ ಬೀರಲಿದೆ ಹಿಂಜರಿತ

ಈ ವರ್ಷದ ಆರಂಭದಲ್ಲಿ ಕಾಣಿಸಿಕೊಂಡ ಮೂರನೆಯ ಅಲೆಯ ನಂತರದಲ್ಲಿ ಕೋವಿಡ್ ಸಾಂಕ್ರಾಮಿಕದ ತೀವ್ರತೆ ಕಡಿಮೆ ಆಗುತ್ತ ಬಂದಿದೆ. ಇದಾದ ನಂತರದಲ್ಲಿ ದೇಶದ ಅರ್ಥ ವ್ಯವಸ್ಥೆಯಲ್ಲಿ ಚೇತರಿಕೆಯ ಲಕ್ಷಣಗಳು ಕಾಣಿಸಿಕೊಂಡವು. ಆದರೆ ಈಗ ಅರ್ಥ ವ್ಯವಸ್ಥೆಯ ಮುನ್ನೋಟವು ತೀರಾ ಆಶಾದಾಯಕವಾಗಿ ಇಲ್ಲ. ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರದ ಅಂದಾಜನ್ನು ವಿಶ್ವ ಬ್ಯಾಂಕ್ ಕಳೆದ ವಾರ ತಗ್ಗಿಸಿದೆ. ಜಿಡಿಪಿ ಬೆಳವಣಿಗೆ ದರ ಶೇಕಡ 7.5ರಷ್ಟು ಇರಲಿದೆ ಎಂದು ಈ ಮೊದಲು ಹೇಳಿದ್ದ ವಿಶ್ವ ಬ್ಯಾಂಕ್ ಈಗ ಅದನ್ನು ಶೇ 6.5ಕ್ಕೆ ಇಳಿಕೆ ಮಾಡಿದೆ. ವಿಶ್ವ ಬ್ಯಾಂಕ್ ಮಾತ್ರವೇ ಅಲ್ಲದೆ, ಇತರ ಹಲವು ಹಣಕಾಸು ಸಂಸ್ಥೆಗಳು ಕೂಡ ಜಿಡಿಪಿ ಬೆಳವಣಿಗೆ ದರದ ಅಂದಾಜನ್ನು ಕಡಿಮೆ ಮಾಡಿವೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಏಷ್ಯಾ ಅಭಿವೃದ್ಧಿ ಬ್ಯಾಂಕ್ ಮತ್ತು ಫಿಚ್ ರೇಟಿಂಗ್ಸ್ ಕೂಡ ಅಂದಾಜನ್ನು ಶೇ 7ಕ್ಕೆ ತಗ್ಗಿಸಿವೆ. ಬೆಳವಣಿಗೆ ದರ ಹೆಚ್ಚಿನ ಪ್ರಮಾಣದಲ್ಲಿ ಇರಲಿದೆ ಎಂದು ಹೇಳಿದ್ದವರೂ, ಈಗ ಬೆಳವಣಿಗೆಯ ವೇಗ ತಗ್ಗಿದೆ ಎಂದು ಹೇಳುತ್ತಿದ್ದಾರೆ. ವೇಗ ಕಡಿಮೆ ಆಗುತ್ತಿರುವುದು ಸಹಜ ಪ್ರಮಾಣದಲ್ಲಿ ಇಲ್ಲ. ಅರ್ಥ ವ್ಯವಸ್ಥೆಯಲ್ಲಿ ಪುನಶ್ಚೇತನವು ಈಗಲೂ ಕಾಣುತ್ತಿದೆ. ಆದರೆ ಮುಂದಿನ ದಿನಗಳಲ್ಲಿ ಪರಿಸ್ಥಿತಿ ವಿಷಮಗೊಳ್ಳುವ ಸಾಧ್ಯತೆಯನ್ನು ಹಣಕಾಸು ಸಂಸ್ಥೆಗಳು ಅಲ್ಲಗಳೆದಿಲ್ಲ. ಮುಂದಿನ ವರ್ಷದಲ್ಲಿ ಬೆಳವಣಿಗೆ ದರವು ಶೇ 5.8ರಿಂದ ಶೇ 6ರ ಮಟ್ಟಕ್ಕೆ ಬರುವ ಸಾಧ್ಯತೆಯೂ ಇದೆ.



ಜಾಗತಿಕ ಮಟ್ಟದಲ್ಲಿ ಆರ್ಥಿಕತೆಯು ಮಂದಗತಿಗೆ ತಿರುಗಿರುವುದು ದೇಶದ ರಫ್ತುಗಳ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಲಿದೆ

ಜಿಡಿಪಿ ಬೆಳವಣಿಗೆ ಅಂದಾಜನ್ನು ತಗ್ಗಿಸಿರುವುದಕ್ಕೆ ಜಾಗತಿಕ ಹಾಗೂ ದೇಶದೊಳಗಿನ ಕಾರಣಗಳು ಇವೆ. ಆದರೆ, ಇದರಲ್ಲಿ ಹೆಚ್ಚಿನ ಪಾಲು ಇರುವುದು ಜಾಗತಿಕ ಪರಿಸ್ಥಿತಿಯದ್ದು. ಜಗತ್ತಿನ ಎಲ್ಲೆಡೆ ಕೇಂದ್ರೀಯ ಬ್ಯಾಂಕ್‌ಗಳು ಬಿಗಿ ಹಣಕಾಸು ನೀತಿಯನ್ನು ಅಪ್ಪಿಕೊಳ್ಳುತ್ತಿರುವುದು ಹಾಗೂ ಉಕ್ರೇನ್–ರಷ್ಯಾ ಯುದ್ಧದ ಪರಿಣಾಮಗಳು 'ಭಾರತದ ಆರ್ಥಿಕ ಮುನ್ನೋಟದ ಮೇಲೆ ಪ್ರಭಾವ ಬೀರಲಿವೆ' ಎಂದು ವಿಶ್ವ ಬ್ಯಾಂಕ್ ಹೇಳಿದೆ. ಸರಕು ರಫ್ತು 2021ರ ಫೆಬ್ರುವರಿ ನಂತರದಲ್ಲಿ ಸೆಪ್ಟೆಂಬರ್‌ನಲ್ಲಿ ಇದೇ ಮೊದಲ ಬಾರಿಗೆ ಕಡಿಮೆ ಆಗಿದೆ. ಆಮದು ಬೆಳವಣಿಗೆ ಪ್ರಮಾಣ ಕೂಡ ಕಡಿಮೆ ಆಗಿದೆ. ಇದು ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ತಗ್ಗುತ್ತಿರುವುದರ ಸೂಚನೆ ಎಂದು ವ್ಯಾಖ್ಯಾನಿಸಲಾಗಿದೆ. ಕಚ್ಚಾ ತೈಲ ಬೆಲೆ ಮತ್ತೆ ಹೆಚ್ಚಳ ಆಗುತ್ತಿದೆ. ಈಗಾಗಲೇ ಮಿತಿಯನ್ನು ಮೀರಿ ಬೆಳೆದಿರುವ ಚಿಲ್ಲರೆ ಹಣದುಬ್ಬರ ದರವು ಮುಂದಿನ ದಿನಗಳಲ್ಲಿಯೂ ಹೆಚ್ಚಿನ ಮಟ್ಟದಲ್ಲಿಯೇ ಉಳಿಯಬಹುದು. ಬ್ಯಾಂಕ್ ಬಡ್ಡಿ ದರ ಹೆಚ್ಚಾಗುತ್ತಿರುವುದು ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆಯ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಬಹುದು. ಜಾಗತಿಕ ಮಟ್ಟದಲ್ಲಿ ಆರ್ಥಿಕತೆಯು ಮಂದಗತಿಗೆ ತಿರುಗಿರುವುದು ಹಾಗೂ ಅಮೆರಿಕ ಮತ್ತು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಆರ್ಥಿಕ ಹಿಂಜರಿತ ಎದುರಾಗುವ ಸಾಧ್ಯತೆಯು ದೇಶದ ರಫ್ತುಗಳ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಲಿವೆ. ಜಾಗತಿಕ ಮಟ್ಟದಲ್ಲಿ ವಾಣಿಜ್ಯ ವಹಿವಾಟಿನ ಬೆಳವಣಿಗೆ ಅಂದಾಜನ್ನು ವಿಶ್ವ ವ್ಯಾಪಾರ ಸಂಘಟನೆಯು (ಡಬ್ಲ್ಯುಟಿಒ) ಶೇ 1ಕ್ಕೆ ತಗ್ಗಿಸಿದೆ. ಈ ಮೊದಲು ಈ ಅಂದಾಜು ಶೇ 3.4ರಷ್ಟು ಇತ್ತು. ಎಲ್ಲ ಕೆಟ್ಟ ಅಂಶಗಳ ಪ್ರಭಾವವು ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ಅರಿವಿಗೆ ಬರಲಿದ್ದು, ಆರ್ಥಿಕ ಹಿಂಜರಿತ ಶುರುವಾಗಬಹುದು ಎಂದು ವಿಶ್ವ ಬ್ಯಾಂಕ್ ಅಂದಾಜು ಮಾಡಿದೆ.

ದೇಶದ ಅರ್ಥ ವ್ಯವಸ್ಥೆಯು ಕೋವಿಡ್ ಪೂರ್ವದ ಸ್ಥಿತಿಯನ್ನು ತಲುಪಿರಬಹುದಾದರೂ, ಅರ್ಥ ವ್ಯವಸ್ಥೆಯ ಬಹುದೊಡ್ಡ ಭಾಗಗಳು ಈಗಲೂ ಸಂಕಷ್ಟದಲ್ಲಿ ಇವೆ. ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು (ಎಂಎಸ್‌ಎಂಇ) ಇಂದಿಗೂ ಹೆಣಗಾಡುತ್ತಿವೆ. ವಾಸ್ತವದಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಜನರಿಗೆ ಉದ್ಯೋಗ ಕಲ್ಪಿಸಿರುವುದು ಈ ವಲಯದ ಉದ್ಯಮಗಳೇ. ನಗರ ಪ್ರದೇಶಗಳಲ್ಲಿ ಕಾರ್ಮಿಕ ವರ್ಗದ ಭಾಗವಹಿಸುವಿಕೆಯ ಪ್ರಮಾಣವು ಕೋವಿಡ್ ಪೂರ್ವದ ಮಟ್ಟಕ್ಕಿಂತ ಕಡಿಮೆ ಇದೆ ಎಂದು ಸಮೀಕ್ಷೆಯೊಂದು ಈಚೆಗೆ ಹೇಳಿದೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಕಾರ್ಮಿಕ ಮಾರುಕಟ್ಟೆಯು ದುರ್ಬಲವಾಗಿದೆ. ಅರ್ಥ ವ್ಯವಸ್ಥೆಯಲ್ಲಿ ಖಾಸಗಿ ಹೂಡಿಕೆಯು ಚೇತರಿಕೆ ಕಾಣುತ್ತಿರುವ ಸೂಚನೆಗಳು ಇಲ್ಲ. ಬೇಡಿಕೆಯ ಮೇಲೆ ನಕಾರಾತ್ಮಕ ಪರಿಣಾಮಗಳು ಮುಂದುವರಿಯಲಿವೆ. ಸರ್ಕಾರಗಳ ಹಣಕಾಸು ವೆಚ್ಚ ಸಾಮರ್ಥ್ಯದ ಮೇಲಿನ ಹೊರೆ ಈಗಾಗಲೇ ಅಪಾರವಾಗಿದೆ. ಸಾರ್ವಜನಿಕ ವೆಚ್ಚಗಳನ್ನು ಹೆಚ್ಚಿಸಿ, ಆ ಮೂಲಕ ಬೆಳವಣಿಗೆಗೆ ಪುಷ್ಟಿ ನೀಡುವ ಸ್ಥಿತಿಯಲ್ಲಿ ಸರ್ಕಾರಗಳು ಇಲ್ಲ. ಭಾರತದ ಅರ್ಥ ವ್ಯವಸ್ಥೆಯು ಈಗಲೂ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಅರ್ಥ ವ್ಯವಸ್ಥೆಗಳ ಪೈಕಿ ಒಂದಾಗಿರಬಹುದು. ಆದರೂ ಆರ್ಥಿಕ ಹಿಂಜರಿತದ ಕೆಟ್ಟ ಪರಿಣಾಮಗಳು ದೇಶದ ಮೇಲೆ ಆಗಲಿವೆ.

ಕೆಲವರ ಇಂಗದ ದಾಹಕ್ಕಾಗಿ ಜನಸಮೂಹದ ಸ್ನೇಹಭಾವಗಳನ್ನು ಆಪೋಶನ ತೆಗೆದುಕೊಳ್ಳಲಾಗುತ್ತಿದೆ

ನಮ್ಮ ವಿರುದ್ಧ ನಮ್ಮದೇ ಚಿತ್ತ



ವಿಶ್ಲೇಷಣೆ

ಸಬಿತಾ ಬನ್ನಾಡಿ

'ಹಸಿದ ನಾಯಿಗಳು ಹಸಿವು ನೀಗದಿದ್ದರೂ ಮೂಳೆಯ ಚೂರನ್ನು ಕಡಿಯುವಂತೆ ಮನುಷ್ಯನು ಈ ಲೌಕಿಕ ಭೋಗಗಳಿಂದ ತೃಪ್ತಿ ದೊರೆಯದಿದ್ದರೂ ಅವುಗಳನ್ನು ಅನುಭವಿಸ ಬಯಸುತ್ತಾನೆ' ಎನ್ನುತ್ತಾನೆ ಬುದ್ಧ. 'ಎಂದೂ ದಾನ ಮಾಡದೆ ಸದಾ ಸಂಪತ್ತಿನ ಸಂಗ್ರಹಣೆ ಮತ್ತು ಹೊಸ ಸುಖಗಳಿಗೆ ಹಾತೊರೆಯುವ ಶ್ರೀಮಂತರನ್ನು ಹಾಗೂ ರಾಜ್ಯದ ಜನತೆ ಸಾಯುತ್ತಿದ್ದರೂ ದಿಗ್ವಿಜಯಗಳಿಗೆ ಹಾತೊರೆಯುತ್ತಾ, ಸಮುದ್ರದಾಚೆಗಿನ ಸಾಮ್ರಾಜ್ಯಗಳ ಮೇಲಿನ ಅಧಿಕಾರಕ್ಕಾಗಿ ಆಸೆಪಡುವ ರಾಜರುಗಳನ್ನು ಮತ್ತು ಏನೆಲ್ಲಾ ಇದ್ದರೂ ಕೊರತೆಯಿಂದ ಬಳಲುವವರನ್ನು ನಾನು ನೋಡಿದ್ದೇನೆ. ಈ ಲೋಕದಲ್ಲಿ ಸುಖದ ಪಾತ್ರೆ ಎಂದೂ ತುಂಬುವುದಿಲ್ಲ' ಎಂದು ಬುದ್ಧನ ಶಿಷ್ಯ ಭಿಕ್ಕು ರಥಪಾಲನು ಹೇಳುತ್ತಾನೆ (ಬುದ್ಧ ಮತ್ತು ಆತನ ಧಮ್ಮ; ಡಾ. ಬಿ.ಆರ್.ಅಂಬೇಡ್ಕರ್; ಅನು: ಡಾ. ಎನ್.ಜಗದೀಶ ಕೊಪ್ಪ).

ಸಂದರ್ಭ ಮತ್ತು ಆಸೆಗಳ ಸ್ವರೂಪ ಬದಲಾಗಿದ್ದರೂ ಮನುಷ್ಯರಲ್ಲಿ ಯಾವ ಬದಲಾವಣೆಯೂ ಆಗದೆ ವಸ್ತು ಪ್ರಪಂಚವೇ ಆರ್ಥಿಕ ನೀತಿಯ ಕೇಂದ್ರವಾಗಿರುವ ಇಂದಿನ ಕಾಲದಲ್ಲಿ, ಯಾವುದೇ ರೂಪದಲ್ಲಿ ಅತಿ ಶ್ರೀಮಂತರಾಗುವುದು, ಸಮುದ್ರದಾಚೆಗೆ ಮಾತ್ರವಲ್ಲ ದೇಶದೊಳಗೇ ಶತ್ರುಗಳನ್ನು ಸೃಷ್ಟಿಸಿ ದಿಗ್ವಿಜಯ ಸಾಧಿಸುವುದು- ಒಟ್ಟಿನಲ್ಲಿ ಹಸಿದ ನಾಯಿಗಳಾಗುವುದೇ ಪರಮ ಮೌಲ್ಯವೆಂದು ಹಸಿದ ನಾಯಿಗಳೇ ಸಾರುವುದು ಎಲ್ಲೆಡೆ ನಡೆಯುತ್ತಿದೆ. ಹೀಗೆ ಮಾಡಲು ಬೇಕಾದ ಎಲ್ಲಾ ಸುಳ್ಳುಗಳನ್ನು ಸೃಷ್ಟಿಸಿ ಆಕ್ರಮಣ ಮಾಡಲು, ನಮ್ಮ ಅತ್ಯಾಧುನಿಕ ತಂತ್ರಜ್ಞಾನವು ರಸಗೊಬ್ಬರವಾಗಿದೆ. ಇದು ಸಂಪತ್ತು ಮತ್ತು ಅಧಿಕಾರ ಇರುವವರ ಆಡುಂಬೊಲವಾಗಿದೆ.

ಕೆಲವು ದೈತ್ಯ ತಂತ್ರಜ್ಞಾನ ಕಂಪನಿಗಳ ಬಳಿ ನಮ್ಮ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಅಪಾರ ಮಾಹಿತಿ ಇದೆ. ಅದನ್ನು ಅವುಗಳು ನಮ್ಮ ಕೈಯಲ್ಲಿನ ಮೊಬೈಲ್ ಫೋನ್ ಮೂಲಕವೇ ಪಡೆದಿವೆ. ನಮ್ಮನ್ನು ಗಮನಿಸುತ್ತಾ, ಹಿಂಬಾಲಿಸುತ್ತಾ, ಅಳೆಯುತ್ತಾ, ಗೂಢಚಾರಿಕೆ ಮಾಡುತ್ತಾ, ಅದನ್ನೆಲ್ಲಾ ದಾಖಲಿಸುತ್ತಾ ನಮ್ಮೆಲ್ಲರದೂ ಒಂದೊಂದು ಮಾದರಿ ಶಿಲ್ಪವನ್ನು ಮಾಡಿಟ್ಟುಕೊಂಡಿವೆ. ನಾವು ಎಷ್ಟು ಹೊತ್ತು ಯಾವುದನ್ನು ನೋಡುತ್ತೇವೆ, ಕೇಳುತ್ತೇವೆ ಎಂಬುದನ್ನೆಲ್ಲಾ ತಿಳಿದು ಅದಕ್ಕೆ ಸಂಬಂಧಿಸಿದಂತೆ ನೋಟಿಫಿಕೇಷನ್ ಕಳಿಸುತ್ತವೆ. ಹೀಗೆ ಮಾಡುವುದಕ್ಕೆ ಅಲ್ಗಾರಿದಂನ ಒಂದಿಷ್ಟು ನೆರವನ್ನು ಅವು ಪಡೆದುಕೊಳ್ಳುತ್ತವೆ. ತಮ್ಮ ವ್ಯಾಪಾರವನ್ನು ಹೇಗಾದರೂ ವೃದ್ಧಿಸಿಕೊಳ್ಳುವುದಷ್ಟೇ ಇಂತಹ ಕಂಪನಿಗಳ ಉದ್ದೇಶವಿರಬಹುದು. ಇದರ ಪರಿಣಾಮಗಳನ್ನು ಹೇಳುವ ಅತ್ಯುತ್ತಮ ವಾದ ಡಾಕ್ಯುಮೆಂಟರಿ 'ದಿ ಸೋಷಲ್ ಡೈಲೆಮಾ' (ನೆಟ್‌ಫ್ಲಿಕ್ಸ್‌ನಲ್ಲಿ ಇದು ಲಭ್ಯ).

ಇದರಲ್ಲಿ ಭಾಗವಹಿಸಿದವರೆಲ್ಲರೂ ಗೂಗಲ್, ಟ್ವಿಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯುಟ್ಯೂಬ್‌ನಂತಹ ಸಂಸ್ಥೆಗಳಲ್ಲಿ ಕೆಲಸ ಮಾಡಿದ ದೊಡ್ಡ ತಂತ್ರಜ್ಞಾನಿಗಳು. ತಾವು ಮಾಡುತ್ತಿರುವ ಕೆಲಸ ಅನೈತಿಕವಾದುದು ಎಂಬ ಪ್ರಜ್ಞೆಯಿಂದ ಅದನ್ನು ಜನರಿಗೆ ಅರುಹಲು ಮತ್ತು ಏನಾದರೂ ಮಾಡಿ ಇವುಗಳೆಲ್ಲವನ್ನೂ ಮನುಕುಲದ ಒಳಿತಿನೆಡೆಗೆ ಒಯ್ಯಬೇಕು ಎಂಬ ತಹತಹದಿಂದ ಆ ಕೆಲಸಗಳನ್ನು ಬಿಟ್ಟು ಹೊರಬಂದು ಪರ್ಯಾಯವನ್ನು ಹುಡುಕಲು ಹೊರಟಿರುವವರು. ಯಾಕೆಂದರೆ, ಮೊದಲನೆಯದಾಗಿ, ಭಾರತವೂ ಸೇರಿ ಜಗತ್ತಿನಾದ್ಯಂತ ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯ ಚಟದಿಂದಾಗಿ ಹದಿಹರೆಯದವರು ಖಿನ್ನತೆಗೆ ಒಳಗಾಗುವುದು, ಆತ್ಮಹತ್ಯೆ ಮಾಡಿಕೊಳ್ಳುವುದು ಹೆಚ್ಚಾಗಿದೆ. ತಜ್ಞರ ಪ್ರಕಾರ, ಹೈಸ್ಕೂಲು ಹಂತದಲ್ಲಿ ಮೊಬೈಲ್ ಬಳಕೆಗೆ ಅವಕಾಶ ದೊರಕಿದ ತಲೆಮಾರು ಅತಿ ಹೆಚ್ಚು ಖಿನ್ನತೆಗೆ ಒಳಗಾಗಿದೆ. ಚಿಕ್ಕವರು ದೊಡ್ಡವರು ಎಂಬ ಭೇದವಿಲ್ಲದೆ ಎಲ್ಲಾ ವಯಸ್ಸಿನವರೂ ಸತ್ಯೋತ್ತರ ಯುಗದ ಸಾಮಾಜಿಕ ಜಾಲತಾಣಗಳ ಮೂಲಕ ಸಿಗುವ ಸುಳ್ಳು ಮಾಹಿತಿಗಳನ್ನೇ ಆತ್ಯಂತಿಕ ಸತ್ಯವೆಂದು ಭಾವಿಸಿ, ತಮ್ಮ ಸುತ್ತಲಿನವರನ್ನು ಒಂದೋ ಆರಾಧಿಸುವ ಇಲ್ಲವೇ ಅನುಮಾನಿಸುವ, ದ್ವೇಷಿಸುವ ಕುದಿಬಿಂದುಗಳಾಗಿ ಪರಿವರ್ತನೆಯಾಗುತ್ತಿದ್ದಾರೆ.


ಇನ್ನೊಂದೆಡೆ, ರಾಜಕೀಯವಾಗಿ ಇದರ ದುರ್ಬಳಕೆ ಅಂಕೆ ಮೀರಿದೆ. ಸುಳ್ಳು ಸುದ್ದಿಗಳನ್ನು ಅಪ್‌ಲೋಡ್ ಮಾಡಲಾಗುತ್ತದೆ. ಅಧ್ಯಯನವೊಂದರ ಪ್ರಕಾರ, ನಿಜಸುದ್ದಿಗಳಿಗಿಂತ ಸುಳ್ಳುಸುದ್ದಿಗಳು ಆರು ಪಟ್ಟು ವೇಗವಾಗಿ ಹಬ್ಬುತ್ತವೆ. ನಿಜ, ಸುಳ್ಳುಗಳ ಭೇದ ಅರಿಯದ ಕೃತಕ ಬುದ್ಧಿಮತ್ತೆಯು ಅದನ್ನು ನೋಡುವವರಿಗೆ ಅಂಥದೇ ಸುದ್ದಿಗಳನ್ನು ಬೆಂಬಿಡದೆ ಕಳಿಸತೊಡಗುತ್ತದೆ. ಇದರಿಂದಾಗಿ ಜನರ ನಡುವೆ ಧ್ರುವೀಕರಣವನ್ನು ಹುಟ್ಟುಹಾಕುವ, ನಿರ್ದಿಷ್ಟ ಗುರಿ ಇಟ್ಟು ಪ್ರಚಾರ (ಅಪಪ್ರಚಾರ!) ಮಾಡುವ ಕೆಲಸಗಳಿಗೆ ಇದು ಪೂರಕವಾಗಿ ಒದಗಿ ಬರುತ್ತದೆ. ತಮ್ಮ ಅಧಿಕಾರವನ್ನು ಅನಿರ್ಬಂಧಿತವಾಗಿ ಉಳಿಸಿಕೊಳ್ಳುವುದೊಂದೇ ಧ್ಯೇಯವಾಗಿರುವ ಕೂಟಗಳು ಮತ್ತು ವ್ಯಕ್ತಿಗಳು ಎಲ್ಲವನ್ನೂ ತಮ್ಮ ಅನುಕೂಲಕ್ಕೆ ಬಗ್ಗಿಸಲು ಒಂದೆಡೆ ಹೊಗಳುಭಟರ ಪಡೆಯನ್ನೂ ಇನ್ನೊಂದೆಡೆ ವಿರೋಧಿಗಳನ್ನು ಹಣಿಯುವ ಪಡೆಯನ್ನೂ ನಿರ್ಮಿಸಿಕೊಂಡು ಸುಳ್ಳು ಕತೆ ಹರಡುವ ಸೈನ್ಯವನ್ನು ತೊಡಗಿಸಿ ಹುಸಿ ಯುದ್ಧವನ್ನು ತಮ್ಮದೇ ಪ್ರಜೆಗಳ ನಡುವೆ ಯೋಜಿಸುತ್ತಾರೆ. ಇದಕ್ಕಾಗಿ ಹೆಚ್ಚು ಹೆಚ್ಚು ದುಡ್ಡು ಮಾಡಬೇಕು ಅಥವಾ ದುಡ್ಡಿರುವವರನ್ನು ಸಾಕಬೇಕು. ಇವೆಲ್ಲವೂ ಒಂದು ವಿಷವರ್ತುಲ. ನಾವೆಲ್ಲರೂ ಇದರಲ್ಲಿ ಬಂದಿಗಳು.



ಹಾಗಾದರೆ ನಮಗೆ ಇದರಿಂದ ಬಿಡುಗಡೆಯೇ ಇಲ್ಲವೆ? 'ನಿನ್ನ ಮಾನಸಿಕತೆಯನ್ನು ನಿನ್ನ ವಿರುದ್ಧವೇ ಬಳಸುವ' ಗುರಿ ಮತ್ತು ದಾರಿಯನ್ನು ಇಂಟರ್ನೆಟ್ ಮೂಲಕ ಸಾಧಿಸಲಾಗುತ್ತಿದ್ದು, ಮೊದಲು ಇದರಿಂದ ಬಿಡಿಸಿಕೊಂಡರೆ ಮಾತ್ರ ಯಾವುದೇ ಬಿಡುಗಡೆ ಸಾಧ್ಯ. ಆಳುವ ಸರ್ಕಾರಗಳು, ಪ್ರಜೆಗಳು ಯಾವ ಕಾರಣಕ್ಕೂ ಸ್ಮಾರ್ಟ್‌ಫೋನ್ ಬಿಟ್ಟಿರದಂತೆ ಮಾಡಲು ಡಿಜಿಟಲ್ ಯೋಜನೆಗಳನ್ನು ರೂಪಿಸಿ ಅನಿವಾರ್ಯವಾಗಿಸುತ್ತವೆ. ತಮ್ಮ ಪರವಾದ ಡಿಬೇಟ್‌ಗಳು ನಿರಂತರ ಪ್ರಸಾರವಾಗುವಂತೆ ಟಿ.ವಿ. ಮಾಧ್ಯಮಗಳನ್ನು 'ತನ್ನವರ' ಒಡೆತನದಲ್ಲಿರಿಸುತ್ತವೆ. ಅಲ್ಗಾರಿದಂ ನೆರವಿನಿಂದ ಇವುಗಳನ್ನೇ ಜನ ನೋಡುವಂತೆ ಪ್ರಚೋದಿಸುವ 'ಕುತಂತ್ರ' ಹಗಲು–ರಾತ್ರಿ ಕೆಲಸ ಮಾಡುತ್ತದೆ. ಇದೆಲ್ಲಾ ಬಿಟ್ಟು ಜನ ಮಾನವ ಒಳಿತಿನ ಸಮಗ್ರತೆಯೆಡೆಗೆ ಮನಸ್ಸು ಹೊರಳಿಸುವ ಕೆಲಸ ಮಾಡುವುದೊಂದೇ ಸದ್ಯಕ್ಕೆ ಇರುವ ಬಿಡುಗಡೆಯ ದಾರಿ. ಪ್ರಾಜ್ಞರ ಚಿಂತನೆಗಳನ್ನು ಅದರ ಮೂಲರೂಪದಲ್ಲಿ ಅರಿತುಕೊಳ್ಳುವಂತೆ ಪ್ರೋತ್ಸಾಹಿಸುವ ಕಠಿಣ ದಾರಿ ಮಾತ್ರ ನಮ್ಮ ಮಕ್ಕಳ ಭವಿಷ್ಯವನ್ನು ಉಳಿಸುವುದಕ್ಕೆ ಸಾಧ್ಯ ಎಂದು ಈ ಡಾಕ್ಯುಮೆಂಟರಿಯ ತಜ್ಞರು ಹೇಳುತ್ತಾರೆ.

ಬಹುಶಃ ಎಪ್ಪತ್ತರ ದಶಕದ ನಂತರ ವಿಕೇಂದ್ರೀಕರಣ ತತ್ವಗಳು ಮುನ್ನೆಲೆಗೆ ಬಂದವು ಮತ್ತು ಸಾಧಿಸಬೇಕಾದ ಆದರ್ಶಗಳೆನಿಸಿದವು. ಸಂವಿಧಾನವು ಆಸರೆಯಾಗಿ ಸಮುದಾಯಗಳು ಅಸ್ಮಿತೆಗಳಾಗಿ, ಸ್ವಾವಲಂಬನೆ, ಸ್ವಾತಂತ್ರ್ಯ, ಸ್ವಾಭಿಮಾನದ ನೆಲೆಯಲ್ಲಿ ಪ್ರಜ್ಞಾವಂತ ಪ್ರಜೆಗಳು ದೇಶ ಕಟ್ಟುವವರಾಗಿ, ಬಹುತ್ವದ ನೇಯ್ಗೆಯೊಳಗೆ ಸದೃಢ ಭಾರತ ನಿರ್ಮಾಣವಾಗಬೇಕಿತ್ತು. ಆದರೆ ಅವು ಇದ್ದಕ್ಕಿದ್ದಂತೆ ವಿಭಜನೆಯ ವೋಟ್‌ಬ್ಯಾಂಕ್ ರಾಜಕಾರಣವಾಗಿ ತಮ್ಮ ಕೊನೆಯಿಲ್ಲದ ಓಟದಲ್ಲಿ ತೊಡಗಿಸಿಕೊಂಡಿವೆ. ಹಿಂದೆಲ್ಲಾ, ಕೊನೆಯಪಕ್ಷ ಅಧಿಕಾರ ಕೇಂದ್ರದ ಹೊರಗಿರುವ ಅಸಂಖ್ಯ ಪ್ರಜೆಗಳು ಶ್ರೇಣೀಕರಣದ ಎಲ್ಲ ಮಿತಿಗಳ ನಡುವೆಯೇ ಸ್ನೇಹದ ಒಡಲ ನೂಲು ನೇಯ್ದುಕೊಂಡು ಬದುಕುತ್ತಿದ್ದರು. ಆದರೆ ಈಗ ಅಧಿಕಾರಹೀನರೂ ಕಲ್ಪಿತ ಕತೆಗಳಿಂದ ಪ್ರಭಾವಿತರಾಗಿ ಪರಸ್ಪರ ಹಲ್ಲುಮಸೆಯುವ ಹಂತಕ್ಕೆ ತಲುಪಿದ್ದಾರೆ. ಇದರಿಂದಾಗಿ ತಾವೆಲ್ಲರೂ ತಮ್ಮ ಹಕ್ಕಿನ ಅಧಿಕಾರವನ್ನೂ ಕಳೆದುಕೊಳ್ಳುತ್ತೇವೆ ಎಂಬ ಪ್ರಜ್ಞೆಯನ್ನೂ ಕಳೆದುಕೊಂಡಿದ್ದಾರೆ. 'ಈ ಜಗತ್ತಿನ ಮನುಷ್ಯನಿಗೆ ಪ್ರೀತಿಯೊಂದೇ ಸಾಲದು. ನಿಜವಾಗಿ ಅವಶ್ಯಕತೆ ಇರುವುದು ಮೈತ್ರಿ. ಅದು ಪ್ರೀತಿಗಿಂತಲೂ ಹೆಚ್ಚು ವಿಶಾಲವಾದುದು. ಇದರರ್ಥ, ಮನುಷ್ಯರೊಂದಿಗೆ ಮಾತ್ರವಲ್ಲ, ಎಲ್ಲ ಜೀವಿಗಳೊಂದಿಗೂ ಸಹಬಾಳ್ವೆ ಎಂಬುದಾಗಿದೆ. ಎಲ್ಲ ಜೀವಿಗಳಿಗೂ ಸುಖ ಕೊಡಬಲ್ಲಂತಹ, ನಮ್ಮ ಮನಸ್ಸುಗಳನ್ನು ನಿಷ್ಪಕ್ಷಪಾತವಾಗಿ ಇಡಬಲ್ಲಂತಹ, ಎಲ್ಲರಿಗೂ ಮುಕ್ತವಾಗಿರುವ, ಎಲ್ಲರನ್ನೂ ಪ್ರೀತಿಯಿಂದ ಕಾಣುವಂತೆ ಮಾಡುವ, ಯಾರನ್ನೂ ದ್ವೇಷಿಸದಂತೆ ಮಾಡುವ ಶಕ್ತಿಯು ಮೈತ್ರಿಯಲ್ಲಿ ಇದೆ' ಎನ್ನುವ ಬುದ್ಧನ ಮಾತು ಅರಿಯುವ ಪ್ರಬುದ್ಧರು ಹೆಚ್ಚಲಿ.

ಚುರುಮುರಿ



ರೋಲಿಂಗ್ ಟೋಪಿ

• ಲಿಂಗರಾಜು ಡಿ.ಎಸ್.

ನಮ್ಮ ಕಾಲೊನಿ ಸಂಘದ ಅಧ್ಯಕ್ಷರು, ಮೆಂಬ್ರುಗಳಾಗಕೆ ಇರೋ ಮೂರು ಗುಂಪುಗಳಲ್ಲಿ ಸದಾ ಜಗಳ. ನಮ್ಮ ಮುಂದೆ ಯಕ್ಕ-ಮಕ್ಕ ಬೋದಾಡಿಕ್ಯಂಡ್ರೂ ನಮ್ಮ ಹಿಂದೆ ಒಳ್ಳೆ ಗೆಣೆಕಾರರಂಗೆ ಹೆಗಲ ಮ್ಯಾಲೆ ಕೈ ಹಾಕ್ಯಂದು ಓಡಾಡ್ತಿದ್ರು. ಇವರಲ್ಲೇ ಮಹಾ ಸುಳ್ಳರ ಗುಂಪಿಗೆ ರೋಲಿಂಗ್ ಟೋಪಿ ಪ್ರಶಸ್ತಿ ಕೊಡಬೇಕು ಅಂತ ಅಮೂಲ್ಯ ಮತದಾರರಾದ ನಾವು ತೀರ್ಮಾನ ಮಾಡಿದ್ದೋ!

ಇವರು ಪುಳ್ಳೆ ಹಾಕೋ ಕೆಲಸ ಹ್ಯಂಗೆ ಮಾಡ್ತರೆ ನೋಡ್ರಿ!

'ನಮ್ಮ ನಡಿಗೆ ಯಾತ್ರೆಗೆ ಜನಬೆಂಬಲ ನೋಡಿ ನಿಮಗೆ ಸಹಿಸಕಾಯ್ತಿಲ್ಲ, ನೆಕ್ಸ್ಟ್ ಕಮಿಟಿ ನಮ್ಮದೇ'.

'ಬುಡ್ರೀ ನಾವೂ ಸಂಪನ್ನ ಯಾತ್ರೆ ಮಾಡಿ ಜನ ಸೇರುಸ್ತೀವಿ?'

'ಅಲ್ಲ ಕನ್ರೀ, ಕಾಲೊನಿ ರೋಡು ಗುಂಡಿಗಳ ರಿಪೇರಿ ಮಾಡಕ್ಕಾಯ್ತಿಲ್ಲ ನಿಮಗೆ. ನಲವತ್ತು ಪರ್ಸೆಂಟ್ ಕಮಿಷನ್ ಹ್ಯಂಗ್ರಿ ತಗಂತೀರಾ?'

'ಹೌದೇಳಿ, ನೇಮಕಾತೀಲಿ ಕಾಸು ಮಾಡದು, ಪರ್ಸೆಂಟೇಜ್ ಇಸುಗಳದು ಶುರು ಮಾಡಿದ್ದೇ ನೀವು'.

'ಹ್ಞೂಂ ಕನೇಳಪ್ಪಾ, ಒತ್ತುವರಿ ತೆರವು ಅಂತ ಬಡವರ ಮನೆ ಮಾತ್ರ ಕೆಡವ್ತಿರ. ಬದಲಿ ಸೈಟು ಹಗರಣ ಯಾರದ್ದೋ?'

'ಹೌದೇಳಿ, ಕೆರೆ ಎಲ್ಲಾ ಮುಚ್ಚಿ ಮಾರಿಕ್ಯಂಡಿರದು ನಾವೇನಾ? ರೀ-ಡು ತನಿಖೆ ಮಾಡಿದ್ರೆ ಗೊತ್ತಾಯ್ತದೆ'.

'ಚುನಾವಣೇಲಿ ಮಣ್ಣಿನ ಮಕ್ಕಳಾದ ನಾವೇ ಗೆಲ್ಲದು. ಆಗ ಎಲ್ಲಾರಿಗೂ ಕರೆಂಟು ಫ್ರೀ, ಸಾಲ ಮನ್ನಾ ಮಾಡ್ತೀವಿ'.

'ನಾವು ಎಲ್ಲಾರ ಮನೇಗೂ ಸಂಘದ ದುಡ್ಡಲ್ಲಿ ಫ್ರೀ ಊಟ ಕೊಡ್ತೀವಿ'.

'ನಾವುನಾವೇ ಹಿಂಗೆ ಜಗಳ ಆಡಿಕ್ಯತಿದ್ರೆ ಹ್ಯಂಗ್ರಪ್ಪಾ? ಎಲೆಕ್ಷನ್ನಲ್ಲಿ ಸ್ಯಾನೆ ಖರ್ಚು ಇರತವೆ ಅನ್ನದು ಮರಿಬ್ಯಾಡಿ. ಬುದ್ಧಿವಂತಿಕೇಲಿ ಮಂಕುಬೂದಿ ಎರಚಿ ಕಾಸು ಮಾಡಿಕ್ಯಬಕು! ಏನಂತೀರಾ?'

ನುಂಗಸಿ ಐಡಿಯಕ್ಕೆ ಒಪ್ಪಿಕ್ಯಂಡ ರೋಜಕಾರಣಿಗಳು ಅಭಿವೃದ್ಧಿ ಹೆಸರಲ್ಲಿ ಕಾಲೊನಿ ಜನಕ್ಕೆ ಮಕಮಲ್ ಟೋಪಿ ಮಡಗಕ್ಕೆ ಒಂದಾಯ್ತಾವ್ರೆ ಅನ್ನೋದು ಗೊತ್ತಾಯ್ತು. ಹಂಗಾಗಿ ರೋಲಿಂಗ್ ಟೋಪಿಗೆ ಇವರೆಲ್ಲರೂ ಯೋಗ್ಯರು ಅಲ್ಲುವರಾ?

ದಿನದ ಟ್ವೀಟ್

ಸಂವಿಧಾನದ ದುರುಪಯೋಗ



ಒಬ್ಬ ವ್ಯಕ್ತಿಯು ತನಗೆ ಇಷ್ಟ ಬಂದ ಧರ್ಮಕ್ಕೆ ಮತಾಂತರಗೊಳ್ಳುವುದು ಸಂವಿಧಾನ ನೀಡಿರುವ ಸ್ವಾತಂತ್ರ್ಯ ಮತ್ತು ಅದನ್ನು ರಕ್ಷಿಸಬೇಕು. ಆದರೆ ಸಾರ್ವಜನಿಕ ಸಮಾರಂಭದಲ್ಲಿ ಹಿಂದೂ ಧರ್ಮದಿಂದ ಸಾಮೂಹಿಕವಾಗಿ ಮತಾಂತರಿಸುವುದು, ಅದರಲ್ಲಿ ಹಿಂದೂ ದೇವತೆಗಳನ್ನು ನಿಂದಿಸುವುದು ವಂಚನೆ ಹಾಗೂ ಸಂವಿಧಾನದ ದುರುಪಯೋಗ. ಇಂಥದ್ದನ್ನು ಬಹಿರಂಗಪಡಿಸಬೇಕು ಮತ್ತು ವಿರೋಧಿಸಬೇಕು.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ

ಕಿಡಿನುಡಿ



ಬೇರೆ ಭಾಷೆಗಳನ್ನು ಆಪೋಶನ ತೆಗೆದುಕೊಂಡು ಹಿಂದಿಯನ್ನು ಸರ್ವವ್ಯಾಪಿಯಾಗಿಸುವ ಸಂಸದೀಯ ಸಮಿತಿಯ ಶಿಫಾರಸು ಕೇಂದ್ರ ಸರ್ಕಾರದ ಹಿಂದಿ- ಹಿಂದೂ- ಹಿಂದೂಸ್ತಾನ ನೀತಿಗೆ ಅನುಗುಣವಾಗಿಯೇ ಇದೆ. ಹಿಂದಿಯೇತರರಿಗೆ ಶಿಕ್ಷಣ ಮತ್ತು ಉದ್ಯೋಗಗಳನ್ನು ನಿರಾಕರಿಸುವುದು ಅಪಾಯಕಾರಿ. ನಮ್ಮ ಸಂವಿಧಾನಕ್ಕೆ ವಿರುದ್ಧವಾಗಿರುವ ಇದನ್ನು ಹಿಮ್ಮೆಟ್ಟಿಸಲೇಬೇಕಾಗಿದೆ.

ಜಾನ್ ಬ್ರಿಟ್ಟಾಸ್, ರಾಜ್ಯಸಭಾ ಸದಸ್ಯ

50 ವರ್ಷಗಳ ಹಿಂದೆ

ಬುಧವಾರ, 11-10-1972

• **ಡಿ.ಎಂ.ಕೆ ಪಕ್ಷದಿಂದ ಎಂಜಿಆರ್ ಸಸ್ಪೆಂಡ್**

ಮದರಾಸು, ಅ. 10 – ಪ್ರಖ್ಯಾತ ತಮಿಳು ಚಿತ್ರನಟ ಎಂ.ಜಿ.ರಾಮಚಂದ್ರನ್ ಅವರನ್ನು ಡಿ.ಎಂ.ಕೆ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಸಸ್ಪೆಂಡ್ ಮಾಡಲಾಗಿದೆಯೆಂದು ಪಕ್ಷದ ಪ್ರಧಾನ ಕಾರ್ಯದರ್ಶಿ ವಿ.ಆರ್. ನೆಡುಂಚಳಿಯನ್ ಅವರು ಇಂದು ಇಲ್ಲಿ ಪ್ರಕಟಿಸಿದರು.

ಪಕ್ಷದ ಖಜಾಂಚಿ ಮತ್ತಿತರ ಸ್ಥಾನಗಳಿಂದ ಎಂ.ಜಿ.ಆರ್ ಅವರನ್ನು ತತ್‌ಕ್ಷಣದಿಂದ ಸಸ್ಪೆಂಡ್ ಮಾಡಲಾಗಿದೆ ಎಂದು ತಿಳಿಸಲಾಗಿದೆ. ಅವರು ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದರೆಂದು ಆಪಾದಿಸಲಾಗಿದೆ.

ಎಂಟು ಮಂದಿ ಸಚಿವರೂ ಒಳಗೊಂಡಂತೆ ಪಕ್ಷದ ಕೇಂದ್ರ ಕಾರ್ಯ ಸಮಿತಿಯ 26 ಮಂದಿ ಸದಸ್ಯರು, ಪಕ್ಷದ ಅಧ್ಯಕ್ಷ ಹಾಗೂ ಮುಖ್ಯಮಂತ್ರಿ ಎಂ.ಕರುಣಾನಿಧಿ ಮತ್ತು ಪ್ರಧಾನ ಕಾರ್ಯದರ್ಶಿ ನೆಡುಂಚಳಿಯನ್ ಅವರಿಗೆ ಇಂದು ಮನವಿಪತ್ರ ಅರ್ಪಿಸಿ, ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವವರೆಂದು ಆಪಾದಿಸಿ ಎಂ.ಜಿ.ಆರ್ ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಪ್ರಾರ್ಥಿಸಿದರು.

• **ಭದ್ರಾವತಿ ಕಾರ್ಖಾನೆ ವ್ಯವಹಾರದ ಸಮಗ್ರ ತನಿಖೆಗೆ ಆರ್.ಸಿ.ದತ್ ನೇಮಕ**

ಬೆಂಗಳೂರು, ಅ. 10 – ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಕಾರ್ಯಾಚರಣೆ ಬಗ್ಗೆ ರಾಜ್ಯ ಸರ್ಕಾರ ಸಮಗ್ರ ವಿಚಾರಣೆಯನ್ನು ಏರ್ಪಡಿಸಿದೆ. ಕೇಂದ್ರದ ಉಕ್ಕು ಖಾತೆಯ ಮಾಜಿ ಕಾರ್ಯದರ್ಶಿ ಹಾಗೂ ಸದನದಲ್ಲಿ ವಾರ್ತಾ ಖಾತೆಯ ಕಾರ್ಯದರ್ಶಿಯಾಗಿರುವ ಶ್ರೀ ಆರ್.ಸಿ.ದತ್ ಅವರು ಈ ವಿಚಾರಣೆಯನ್ನು ನಡೆಸಲಿದ್ದಾರೆ.

ಸರ್ಕಾರದ ಈ ನಿರ್ಧಾರವನ್ನು ಕೈಗಾರಿಕೆ ಹಾಗೂ ವಾಣಿಜ್ಯ ಸಚಿವ ಶ್ರೀ ಎಸ್.ಎಂ.ಕೃಷ್ಣ ಅವರು ಇಂದು ವರದಿಗಾರರಿಗೆ ತಿಳಿಸಿದರು.

• **ನೆಹರೂ ಕೈಗಾರಿಕೆ ನೀತಿ ಬದಲಾಯಿಸುವ ಪ್ರಶ್ನೆ ಇಲ್ಲ: ಧರ್ ಸ್ಪಷ್ಟನೆ**

ಇಂದೂಚಾಚಾನಗರ, ಅ. 10 –'ಪಂಡಿತ ಜವಾಹರಲಾಲ್ ನೆಹರೂ ಅವರು 1956ರಲ್ಲಿ ರೂಪಿಸಿದ ಕೈಗಾರಿಕಾ ನೀತಿನಿರ್ಣಯವನ್ನು ದುರ್ಬಲಗೊಳಿಸುವ ಪ್ರಶ್ನೆಯೇ ಇಲ್ಲ, ಐದನೇ ಪಂಚವಾರ್ಷಿಕ ಯೋಜನೆಯಲ್ಲೂ ಅದು ಸರ್ಕಾರದ ಮಾರ್ಗದರ್ಶಿ ತಾರೆಯಾಗಿ ಮುಂದುವರಿಯುವುದೆಂದು ಯೋಜನಾ ಸಚಿವ ಡಿ.ಪಿ.ಧರ್ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಇಂದು ಎಐಸಿಸಿ ಅಧಿವೇಶನದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಪರವಾಗಿ ಆರ್ಥಿಕ ನೀತಿನಿರ್ಣಯ ಮಂಡಿಸಿದ ಸಚಿವ ಧರ್ ಅವರು, ಕೈಗಾರಿಕೆ ನೀತಿಯಲ್ಲಿ ಬದಲಾವಣೆಯಾಗಲಿದೆ ಎಂಬ ಭಾವನೆ ಕೆಲವು ವಲಯಗಳಲ್ಲಿ ಮೂಡಿರುವ ಕಾರಣ ಇದಕ್ಕೆ ಸಂಬಂಧಿಸಿದ ಎಲ್ಲ ಅನುಮಾನಗಳನ್ನೂ ಅಂತ್ಯಗೊಳಿಸಲಿಚ್ಛಿಸುವುದಾಗಿ ನುಡಿದರು.

• **ಅಸ್ಪೃಶ್ಯತೆ ವಿರುದ್ಧ ಉಗ್ರ ಕ್ರಮಕ್ಕೆ ಕರೆ**

ಇಂದೂಚಾಚಾನಗರ, ಅ. 10 – ರಾಷ್ಟ್ರದಲ್ಲಿ ಅಸ್ಪೃಶ್ಯತೆಯನ್ನು ಆಚರಿಸುತ್ತಿರುವವರ ವಿರುದ್ಧ ಉಗ್ರ ಕ್ರಮ ಕೈಗೊಳ್ಳಬೇಕೆಂದು ಇಂದಿರಾ ಗಾಂಧಿ ಅವರು ಇಂದು ಕರೆ ಇತ್ತರು.

ಎಐಸಿಸಿ ಹರಿಜನ ವಿಭಾಗದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಪ್ರಧಾನಿ ಅವರು, 'ಕೆಲವು ಕಚೇರಿಗಳಲ್ಲಿ ಅಸ್ಪೃಶ್ಯತೆ ಪದ್ಧತಿ ಇರುವ ಕೆಲವು ಪ್ರಸಂಗಗಳನ್ನು ಕೇಳಿದ್ದೇನೆ. ಅಲ್ಲಿ ಹರಿಜನರು ಬಳಸುವ ಪಾತ್ರೆಗಳಲ್ಲಿ ನೌಕರರು ನೀರು ಕುಡಿಯುವುದಿಲ್ಲವಂತೆ' ಎಂದರು.

ಸಂಗತ

ದತ್ತು: ಆದ್ಯತೆಯಾಗಿಸುವ ಹೊತ್ತು

ಜಾನುವಾರುಗಳ ಸಂರಕ್ಷಣೆ ಎಲ್ಲರ ಹೊಣೆಯೂ ಹೌದು

• ಡಾ. ಮುರಳೀಧರ ಕಿರಣಕೆರೆ

'ತಬ್ಬಲಿಯು ನೀನಾದೆ ಮಗನೆ...' ಗೋವು, ಗೋಪಾಲಕರ ಅಳಲಿನ ಕುರಿತಾದ ವರದಿ (ಒಳನೋಟ, ಪ್ರ.ವಾ., ಅ. 9) ಪ್ರಸಕ್ತ ಪರಿಸ್ಥಿತಿಯ ಚಿತ್ರಣ ಕಟ್ಟಿಕೊಟ್ಟಿದೆ. ಗಂಡು ಕರುಗಳು, ಹಾಲು ಕರೆಯದ ವಯಸ್ಸಾದ ಜಾನುವಾರುಗಳು, ಅಶಕ್ತ ಎತ್ತುಗಳನ್ನು ಸಾಕುವುದು ದೊಡ್ಡ ಹೊರೆಯಾಗಿ ಪರಿಣಮಿಸಿದೆ. ಹತ್ತಾರು ಸಮಸ್ಯೆಗಳ ಕಾರಣ ಕೃಷಿ ಹಿಡುವಳಿ ಕಮ್ಮಿಯಾಗುತ್ತಿರುವುದರಿಂದ ಹುಲ್ಲು, ಪಶುಆಹಾರದ ಧಾರಣೆ ದುಬಾರಿಯಾಗುತ್ತಲೇ ಸಾಗಿದೆ. ಇತ್ತ ಮೇಯಲು ಹುಲ್ಲುಗಾವಲೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಅನುತ್ಪಾದಕ ಜಾನುವಾರುಗಳ ನಿರ್ವಹಣೆ ಕಷ್ಟವಾಗಿದೆ. ಅದರಲ್ಲೂ ಗೋಹತ್ಯೆ ನಿಷೇಧ ಕಾನೂನು ಜಾರಿಯಾದ ನಂತರ ಸಮಸ್ಯೆಯೂ ದೊಡ್ಡದಾಗಿದೆ.

ಇದಕ್ಕೆ ಪರಿಹಾರ ಮಾರ್ಗವೆಂದರೆ, ರಾಜ್ಯದ ಎಲ್ಲಾ ಗೋಶಾಲೆಗಳನ್ನು ಸಶಕ್ತಗೊಳಿಸುವುದು. ಪ್ರತೀ ಜಿಲ್ಲೆಯಲ್ಲಿಯೂ ಗೋಶಾಲೆಗಳನ್ನು ತೆರೆಯಲು ಸರ್ಕಾರ ಕಾರ್ಯೋನ್ಮುಖವಾಗಿದೆ. ಗೋಧಾಮವೆಂದರೆ ಕೊಟ್ಟಿಗೆ, ಹುಲ್ಲುಗಾವಲು, ಮೇವು ಬೆಳೆಯಲು ನೂರಾರು ಎಕರೆ ಜಾಗ ಬೇಕು. ಇಷ್ಟೊಂದು ವಿಸ್ತೀರ್ಣದ ಕಂದಾಯ ಭೂಮಿ ಒಂದೆಡೆ ಸಿಗುವುದು ತುಂಬಾ ಕಷ್ಟ. ಸವಾಲಿನ ನಡುವೆಯೂ ಪ್ರಯತ್ನಗಳು ವೇಗವಾಗಿ ಸಾಗುತ್ತಿದ್ದು, ಕೆಲವೆಡೆ ಸರ್ಕಾರಿ ಗೋಶಾಲೆಗಳು ಆರಂಭಗೊಂಡಿವೆ.

ರಾಜ್ಯದಲ್ಲಿ ಸರ್ಕಾರಿ, ಖಾಸಗಿ ಸೇರಿದಂತೆ ಸುಮಾರು 220 ಗೋ ಆಶ್ರಮಗಳಿವೆ. ರೈತರಿಗೆ ಹೊರೆಯಾಗಿರುವ ಜಾನುವಾರುಗಳಿಗೆ ಸೂಕ್ತ ಆಶ್ರಯ ಕಲ್ಪಿಸುವುದು ಸರ್ಕಾರವೊಂದರಿಂದಲೇ ಸಾಧ್ಯವಾಗದ ಕೆಲಸ. ಸಾರ್ವಜನಿಕ ಸಹಭಾಗಿತ್ವದೊಂದಿಗೆ ಜಾನುವಾರುಗಳ ಸಂರಕ್ಷಣೆ, ಪಾಲನೆ, ಪೋಷಣೆ ಸುಗಮಗೊಳಿಸಲು ರಾಜ್ಯ ಸರ್ಕಾರ 'ಪುಣ್ಯಕೋಟಿ ದತ್ತು ಯೋಜನೆ' ಜಾರಿಗೊಳಿಸಿದೆ.

ಮೃಗಾಲಯಗಳು, ಹುಲಿ-ಸಿಂಹಧಾಮಗಳು, ಆನೆ ಬಿಡಾರಗಳು, ಪ್ರಾಣಿ ಉದ್ಯಾನಗಳಲ್ಲಿರುವ ವನ್ಯಮೃಗಗಳು, ಪಶುಪಕ್ಷಿಗಳನ್ನು ಸಾರ್ವಜನಿಕರು ದತ್ತು ತೆಗೆದುಕೊಳ್ಳುವ ಯೋಜನೆ ಎರಡು ದಶಕಗಳಿಂದಲೂ ಜಾರಿಯಲ್ಲಿದೆ. ತುಂಬಾ ಜನಪ್ರಿಯವಾಗಿರುವ ಈ ಕಾರ್ಯಕ್ರಮದಿಂದ ದೊಡ್ಡ ಮೊತ್ತದ ದೇಣಿಗೆಯೂ ಹರಿದುಬರುತ್ತಿದ್ದು, ವನ್ಯಧಾಮಗಳ ನಿರ್ವಹಣೆಯನ್ನು ಸುಗಮಗೊಳಿಸಿದೆ. ಇದೇ ಮಾದರಿಯಲ್ಲಿ ಜುಲೈ 28ರಿಂದ ಆರಂಭವಾದ ಪುಣ್ಯಕೋಟಿ ದತ್ತು ಯೋಜನೆಯ ಉದ್ದೇಶವೂ ಸರ್ಕಾರಿ ಮತ್ತು ಖಾಸಗಿ ಗೋಶಾಲೆಗಳಿಗೆ ಶಕ್ತಿ ತುಂಬುವುದೇ ಆಗಿದೆ.

ಗೋಧಾಮಗಳಲ್ಲಿರುವ ದನಕರುಗಳ ತೃಪ್ತಿಕರ ನಿರ್ವಹಣೆಗೆ ದೊಡ್ಡ ಪ್ರಮಾಣದಲ್ಲಿ ಹಣದ ಅಗತ್ಯವಿದೆ. ಜಾನುವಾರುಗಳ ಮೇವು, ಹಿಂಡಿ, ವೈದ್ಯಕೀಯ ವೆಚ್ಚವೆಂದೆಲ್ಲಾ ಖರ್ಚು ಹೆಚ್ಚು. ರಾಜ್ಯದಲ್ಲಿನ ಸರ್ಕಾರಿ, ಖಾಸಗಿ ಗೋಶಾಲೆಗಳ ಮಾಹಿತಿ ಡಿಜಿಟಲೀಕರಣಗೊಂಡಿದೆ. ಪ್ರತೀ ಗೋಶಾಲೆಯಲ್ಲಿನ ದನಕರುಗಳ ಸಂಪೂರ್ಣ ವಿವರ ಚಿತ್ರಗಳ ಸಮೇತ ಲಭ್ಯವಿದೆ. ದಾನಿಗಳು ಯಾವುದೇ ಗೋಶಾಲೆ ಆಯ್ದುಕೊಂಡು ತಾವು ಬಯಸುವ ಗೋವನ್ನು ದತ್ತು ತೆಗೆದುಕೊಳ್ಳಬಹುದು. ಇದಕ್ಕಾಗಿ ಗೋಶಾಲೆಗಳಿಗೆ ಭೇಟಿ ಕೊಡಬೇಕೆಂದಿಲ್ಲ. https://punyakoti.karahvs.in ಪೋರ್ಟಲ್‌ನಲ್ಲಿ ಲಾಗಿನ್ ಆಗಿ, ಇಚ್ಛಿಸಿದ ಗೋವನ್ನು ದತ್ತು ಪಡೆಯಬಹುದು ಇಲ್ಲವೆ ಆ ಗೋಶಾಲೆಗೆ ದೇಣಿಗೆ ನೀಡಬಹುದು. ಆನ್‌ಲೈನ್ ಪಾವತಿ ನೇರವಾಗಿ ಸಂಬಂಧಿಸಿದ ಟ್ರಸ್ಟ್ ಖಾತೆಗೆ ಜಮಾ ಆಗುತ್ತದೆ.

ವಾರ್ಷಿಕವಾಗಿ ₹ 11,000 ನೀಡಿ ಒಂದು ಹಸುವನ್ನು ದತ್ತು ಪಡೆಯಬಹುದು. ಒಮ್ಮೆಲೆ ಐದು ವರ್ಷಗಳವರೆಗೂ ಹೀಗೆ ದತ್ತು ಪಡೆಯುವ ಅವಕಾಶವುಂಟು. ಆಹಾರ ವೆಚ್ಚಕ್ಕೆಂದು ದಿನಕ್ಕೆ ₹ 70ರ ಲೆಕ್ಕದಲ್ಲೂ ಹಣ ಸಂದಾಯ ಮಾಡಬಹುದು. ಗೋಶಾಲೆಯ ನಿರ್ವಹಣಾ ವೆಚ್ಚವಾಗಿ ಕನಿಷ್ಠ ₹ 10ರಿಂದ ಆರಂಭಿಸಿ ಎಷ್ಟೇ ಮೊತ್ತದ ನೆರವು ನೀಡಲು ಅವಕಾಶವುಂಟು. ನಿಯಮಗಳನ್ನು ಪೂರೈಸಿದ ಗೋಶಾಲೆಗಳಿಗೆ ನೀಡುವ ದೇಣಿಗೆ ವರಮಾನ ತೆರಿಗೆ ಕಾಯ್ದೆಯ 80 ಜಿ ಅಡಿಯಲ್ಲಿ ರಿಯಾಯಿತಿಗೂ ಅರ್ಹ.



ಕೊಡುಗೆ ನೀಡಿದವರು ಆ ಗೋಶಾಲೆಗೆ ಭೇಟಿ ನೀಡಬಹುದು. ದತ್ತು ಪಡೆದ ಹಸುವಿಗೆ ತಮ್ಮಿಷ್ಟದ ಹೆಸರಿಡಬಹುದು. ಬಯಸಿದಾಗಲೆಲ್ಲಾ ಆ ಗೋವಿನ ಜೊತೆಗೆ ಭಾವನಾತ್ಮಕವಾಗಿ ಕಾಲ ಕಳೆಯಬಹುದು. ಜನ್ಮದಿನ, ವಾರ್ಷಿಕೋತ್ಸವ, ಸಂಭ್ರಮಾಚರಣೆಯ ಸಂದರ್ಭಗಳಲ್ಲಿ ಗೋಶಾಲೆಗಳಿಗೆ ದೇಣಿಗೆ ನೀಡುವುದರ ಮೂಲಕ ಧನ್ಯತೆಯ ಭಾವ ಅನುಭವಿಸಬಹುದು. ಬಯಕೆಯಿದ್ದರೂ ಸೌಕರ್ಯವಿಲ್ಲದೆ ಹಸುಗಳನ್ನು ಸಾಕಲಾಗದಿದ್ದವರೂ ಹೀಗೆ ದತ್ತು ತೆಗೆದುಕೊಳ್ಳುವ ಮೂಲಕ ತಮ್ಮಾಸೆ ಪೂರೈಸಿಕೊಳ್ಳಬಹುದು.

ಮಣ್ಣಲ್ಲಿ ಬೆಳೆದ ಬೆಳೆ ಮನುಜನಿಗೆ, ಬೆಳೆಯ ತ್ಯಾಜ್ಯ ಜಾನುವಾರುವಿಗೆ, ಜಾನುವಾರು ತ್ಯಾಜ್ಯ ಮರಳಿ ಮಣ್ಣಿಗೆ ಎಂಬುದು ಪ್ರಕೃತಿಯ ಸಾವಯವ ನಿಯಮ. ನಿಸರ್ಗ ಸಮತೋಲನದ ಕೊಂಡಿಯೂ ಇದೇ. ಮಾನವ ಸ್ವಾಸ್ಥ್ಯಕ್ಕೆ ಅಗತ್ಯವಾದ ಹೈನು, ಹೈನೋತ್ಪನ್ನಗಳ ಜೊತೆಗೆ ಮಣ್ಣಿನ ಫಲವತ್ತತೆ ಕಾಪಾಡಲು, ಬೆಳೆಗಳ ರೋಗ ನಿರೋಧಕ ಗುಣ ಹೆಚ್ಚಿಸಲು, ರಾಸಾಯನಿಕಮುಕ್ತ ಶುದ್ಧ ಆಹಾರದ ಉತ್ಪಾದನೆಯಲ್ಲಿ ಸಗಣಿ ಗೊಬ್ಬರದ ಪ್ರಾಮುಖ್ಯವೂ ಹೆಚ್ಚು. ಹಾಗಾಗಿ ಜಾನುವಾರುಗಳ ಸಂರಕ್ಷಣೆ ಎಲ್ಲರ ಹೊಣೆಯೂ ಹೌದು.

ಅನಾಥ, ಅಂಗವಿಕಲ, ಅಪಘಾತಕ್ಕೆ ತುತ್ತಾದ, ಪರಿತ್ಯಕ್ತ, ಅನುತ್ಪಾದಕ, ವೃದ್ಧ ಜಾನುವಾರುಗಳ ಜೊತೆಗೆ ಗಂಡು ಕರುಗಳು, ಬೀಡಾಡಿ ದನಗಳು, ಅಕ್ರಮವಾಗಿ ಸಾಗಾಣಿಕೆಯಾಗುತ್ತಿರುವಾಗ ವಶಪಡಿಸಿಕೊಂಡಂತಹ ಜಾನುವಾರುಗಳಿಗೆ ಆಶ್ರಯ ನೀಡಲು ಎಲ್ಲೆಡೆ ಗೋಶಾಲೆಗಳ ಅಗತ್ಯ ಖಂಡಿತಾ ಇದೆ.

ಸರ್ಕಾರದ ಜೊತೆಯಲ್ಲಿ ಸಾರ್ವಜನಿಕರು, ಸಂಘ ಸಂಸ್ಥೆಗಳು ಕೈಜೋಡಿಸಿದಾಗ ಮಾತ್ರ ಗೋಶಾಲೆಗಳ ವಿಸ್ತರಣೆ, ನಿರ್ವಹಣೆ ಸಾಧ್ಯ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಇಂಗ್ಲಿಷ್ ಮಹತ್ವ ಕಡೆಗಣಿಸುವುದು ತರವಲ್ಲ

ಭಾರತದ ಸಂವಿಧಾನವು ಇಂಗ್ಲಿಷ್ ಮತ್ತು ಹಿಂದಿ ಈ ಎರಡನ್ನೂ ಆಡಳಿತದ ವ್ಯಾವಹಾರಿಕ ಭಾಷೆಗಳೆಂದು ಹೇಳಿದೆ. ಕಲಿಕೆಯ ಭಾಷಾ ಮಾಧ್ಯಮವನ್ನು ನಿರ್ಣಯಿಸುವ ಹಕ್ಕು ವಿದ್ಯಾರ್ಥಿಗಳು, ಅವರ ಪೋಷಕರಿಗೆ ಮಾತ್ರ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಹೀಗಿದ್ದರೂ ಐಐಟಿಯಂತಹ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಮತ್ತು ತಾಂತ್ರಿಕೇತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದಿ ಅಥವಾ ಪ್ರಾದೇಶಿಕ ಭಾಷೆಗಳನ್ನು ಬೋಧನಾ ಮಾಧ್ಯಮವಾಗಿ ಬಳಸಬೇಕು ಎಂದು ಅಮಿತ್ ಶಾ ನೇತೃತ್ವದ ಅಧಿಕೃತ ಭಾಷೆಗಳ ಬಗೆಗಿನ ಸಂಸದೀಯ ಸಮಿತಿ ಶಿಫಾರಸು ಮಾಡಿರುವುದು (ಪ್ರ.ವಾ., ಅ.10) ವಿವೇಚನೆಯುತ ನಡೆಯಲ್ಲ.

ಹೆಚ್ಚಿನ ಹಿಂದಿ ಭಾಷಿಕ ರಾಜ್ಯಗಳು ಅಭಿವೃದ್ಧಿಯಲ್ಲಿ ಹಿಂದುಳಿದಿವೆ. ಅಲ್ಲಿನ ಯುವಪೀಳಿಗೆಗೆ ಹಿಂದಿ ಚೆನ್ನಾಗಿ ಗೊತ್ತಿದ್ದರೂ ಇಂಗ್ಲಿಷ್ ಭಾಷೆಯು ಕಬ್ಬಿಣದ ಕಡಲೆಯಾಗಿದೆ ಎಂಬ ಮಾತಿದೆ. ಇದೇನೇ ಇರಲಿ, ವಿದ್ಯಾವಂತ ಯುವಕರು ಉದ್ಯೋಗಕ್ಕಾಗಿ ಹಿಂದಿಯೇತರ ರಾಜ್ಯಗಳಿಗೆ ವಲಸೆ ಬರುತ್ತಿದ್ದಾರೆ. ಇದರ ನಡುವೆ ಹಿಂದಿಯೇತರರ ಮೇಲೆ ಹಿಂದಿ ಹೇರಿಕೆಯ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇವೆ. ಹೇರಿಕೆಯ ಪ್ರಯತ್ನಗಳನ್ನು ನಾವು ವಿರೋಧಿಸಲೇಬೇಕು. ಇಂಗ್ಲಿಷ್ ಭಾಷೆಯನ್ನು ಪರಕೀಯ ಎಂದು ಮೂದಲಿಸಿ, ಅದರ ಅವಶ್ಯಕತೆಯನ್ನು ಪೂರ್ವಗ್ರಹಪೀಡಿತರಾಗಿ ನಿರ್ಲಕ್ಷಿಸುವುದು ಇಂದಿನ ಮತ್ತು ಭವಿಷ್ಯದ ಪೀಳಿಗೆಯ ಏಳಿಗೆಗೆ ಮಾಡುವ ದ್ರೋಹ.

ಕೆ.ಎನ್.ಭಗವಾನ್, ಬೆಂಗಳೂರು

ಈ ನಾಡಗೀತೆಯನ್ನು ಮರೆತದ್ದು ಏಕೆ?

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇದೇ 28ರಂದು ಏಕಕಾಲದಲ್ಲಿ ರಾಜ್ಯದಾದ್ಯಂತ ಕನ್ನಡದ ಕವಿಗಳ ಜನಪ್ರಿಯ ಐದು ಕನ್ನಡಗೀತೆಗಳನ್ನು ಕೋಟಿ ಕಂಠದಲ್ಲಿ ಮೊಳಗಿಸುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಕನ್ನಡಿಗರಿಗೆ ಅಭಿಮಾನ ತಂದಿದೆ. ಇವುಗಳಲ್ಲಿ ಕುವೆಂಪು ಅವರ ಎರಡು, ಡಿ.ಎಸ್.ಕರ್ಕಿ, ಚನ್ನವೀರ ಕಣವಿ ಹಾಗೂ ಹಂಸಲೇಖ ಅವರ ಒಂದೊಂದು ಗೀತೆಗಳು ಸೇರಿವೆ. ಆದರೆ ಇಂದಿಗೆ ಒಂಬತ್ತು ದಶಕಗಳ ಹಿಂದೆ ಕನ್ನಡ ನಾಡು– ನುಡಿ, ಸಂಸ್ಕೃತಿಯ ಇತಿಹಾಸವನ್ನು ಮೊಳಗಿಸಿದ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಗೀತೆಯನ್ನು ಹಾಗೂ ಅದನ್ನು ರಚಿಸಿದ ಕವಿ ಹುಯಿಲಗೋಳ ನಾರಾಯಣರಾವ್ ಅವರನ್ನು ಈ ಸಂದರ್ಭದಲ್ಲಿ ಮರೆತಿರುವುದು ಕನ್ನಡಿಗರಿಗೆ ನೋವನ್ನುಂಟು ಮಾಡಿದೆ.

ಕನ್ನಡಿಗರ ಮೊದಲನೆಯ ನಾಡಗೀತೆ ಎಂಬ ಅಸ್ಮಿತೆ ಇದಕ್ಕಿದೆ. ಈ ಗೀತೆಯನ್ನು 1924ರಲ್ಲಿ ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಾರ್ಥನಾ ಗೀತೆಯಾಗಿ ಸ್ವತಃ ಹುಯಿಲಗೋಳ ನಾರಾಯಣರಾವ್ ಅವರು ಮೋಹನ ರಾಗದಲ್ಲಿ ಸುಶ್ರಾವ್ಯವಾಗಿ ಹಾಡಿ ಸಭೆಯನ್ನು ಮಂತ್ರಮುಗ್ಧಗೊಳಿಸಿದ್ದರು. ಅಂತೆಯೇ ಐತಿಹಾಸಿಕ ಪರಂಪರೆ ಇರುವ ಈ ಗೀತೆಯನ್ನು ಮರೆಯದೆ ಕಾರ್ಯಕ್ರಮ ದಲ್ಲಿ ಸೇರಿಸಿದರೆ ಕಾರ್ಯಕ್ರಮದ ಘನತೆ ಹೆಚ್ಚುತ್ತದೆ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಒಡಕಿನ ಮಾತು ಈಗೇಕೆ?

'ಗಾಂಧೀಜಿ ಒಬ್ಬರಿಂದಲೇ ಸ್ವಾತಂತ್ರ್ಯ ಬಂದಿಲ್ಲ'. ಇದರಲ್ಲಿ ಹೊಸ ಸಂಗತಿಯೇನೂ ಇಲ್ಲವಲ್ಲ! ಸಂಘಟನಾತ್ಮಕ ಹೋರಾಟದಿಂದ ದೊರೆತ ಸ್ವಾತಂತ್ರ್ಯಕ್ಕೆ ಒಡಕಿನ ಮಾತು ಉಚಿತವಲ್ಲ.

ಆನಂದ ರಾಮತೀರ್ಥ
ಜಮಖಂಡಿ

ಭತ್ತ ಖರೀದಿ ಕೇಂದ್ರ ಆರಂಭವಾಗಲಿ

ತುಂಗಭದ್ರಾ, ಕೃಷ್ಣಾ ನೀರಾವರಿ ಪ್ರದೇಶದಲ್ಲಿ ಭತ್ತ ಕಟಾವಿಗೆ ಬಂದಿದೆ. ಸರ್ಕಾರ ತಕ್ಷಣ ಖರೀದಿ ಕೇಂದ್ರಗಳನ್ನು ಆರಂಭಿಸಬೇಕು. ಹಿಂದಿನ ವರ್ಷ ಖರೀದಿ ಕೇಂದ್ರಗಳನ್ನು ಜನವರಿ ತಿಂಗಳಲ್ಲಿ ಆರಂಭಿಸಿದ್ದರಿಂದ ರೈತರು ತಾವು ಬೆಳೆದ ಭತ್ತವನ್ನು ಮುಕ್ತ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡುವ ಅನಿವಾರ್ಯ ಸ್ಥಿತಿ ಬಂದು ತುಂಬಾ ನಷ್ಟ ಅನುಭವಿಸುವಂತಾಯಿತು. ಈ ಸಲ ಅಂತಹ ಸ್ಥಿತಿ ಮರುಕಳಿಸದಂತೆ ನೋಡಿಕೊಳ್ಳಬೇಕು.

ಚಂದ್ರಶೇಖರ ಪಾಟೀಲ, ಹುಳ್ಕಿಹಾಳ, ಕೊಪ್ಪಳ

ಉತ್ಪಾದನೆ ತಗ್ಗಿಸುವುದು ಪರಿಹಾರವಲ್ಲ

ಲಿಂಗ ನಿರ್ಧರಿತ ವೀರ್ಯ ನಳಿಕೆ ಬಳಸಿ, ಬಯಸಿದ ಕರು ಪಡೆಯುವ ಯೋಜನೆಯ ಬಗ್ಗೆ ಸುನಿಲ್ ಟಿ.ಪಿ. ಅವರು ವ್ಯತಿರಿಕ್ತ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ (ವಾ.ವಾ., ಅ. 10). ಇದರಿಂದ ಮುಂದೆ ಹಸುಗಳ ಸಂತತಿ ಹೆಚ್ಚಾಗಿ, ಹಾಲಿನ ಉತ್ಪಾದನೆ ಮಿತಿಮೀರಿದರೆ ಅದನ್ನು ಮೌಲ್ಯವರ್ಧನೆ ಮಾಡುವುದು, ರಫ್ತು ಮಾಡುವುದು... ಹೀಗೆ ನಾನಾ ವಿಧಗಳಲ್ಲಿ ಸದ್ಬಳಕೆ ಮಾಡಿಕೊಳ್ಳಬಹುದು. ಅದುಬಿಟ್ಟು ಉತ್ಪಾದನೆ ಹೆಚ್ಚು ಮಾಡದೇ ಇರುವುದು ಪರಿಹಾರವಲ್ಲ.

ಪ್ರದೀಪ್, ಹೊನ್ನಾಳಿ

ಜಗತ್ತಿನಲ್ಲಿ ಹೊಳೆದ ನಕ್ಷತ್ರ

'ಗಾಂಧೀಜಿ ಒಬ್ಬರಿಂದಲೇ ಸ್ವಾತಂತ್ರ್ಯ ಬಂದಿಲ್ಲ' ಎಂದಿದ್ದಾರೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ (ಪ್ರ.ವಾ., ಅ. 10). ನಿಜ, ಗಾಂಧೀಜಿ ಒಬ್ಬರಿಂದಲೇ ಸ್ವಾತಂತ್ರ್ಯ ದೊರೆತಿದೆ ಎಂದು ಯಾರೂ ಭಾವಿಸಿಯೂ ಇಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಲಕ್ಷಾಂತರ ಮಂದಿ ಭಾಗವಹಿಸಿದ್ದಾರೆ. ಸಾವಿರಾರು ಜನರ ತ್ಯಾಗ, ಬಲಿದಾನದಿಂದ ಅದು ದೊರೆತಿದೆ. ಜನಸಾಮಾನ್ಯರ ಪಾತ್ರವನ್ನು ಸಹ ಯಾರೂ ಅಲಕ್ಷಿಸುವಂತಿಲ್ಲ.

ಆದರೆ ಇಂತಹ ಸಾವಿರಾರು ಸ್ವಾತಂತ್ರ್ಯ ಹೋರಾಟಗಾರರ ನಡುವೆ ಮಹಾತ್ಮ ಗಾಂಧಿ ಮಾತ್ರ ನಕ್ಷತ್ರದಂತೆ ಇಡೀ ಜಗತ್ತಿನಲ್ಲಿ ಹೊಳೆಯುತ್ತಿದ್ದಾರೆ. ಅವರು ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ಜೊತೆಗೆ ಶೋಷಿತರ ಅಭಿವೃದ್ಧಿಗಾಗಿ, ಪಾನ ನಿಷೇಧಕ್ಕಾಗಿ ಪ್ರಾಮಾಣಿಕವಾಗಿ ಅವಿರತವಾಗಿ ಹೋರಾಡಿದರು. ಅದರಲ್ಲೂ ಅವರ ಅಹಿಂಸಾತ್ಮಕ ಹೋರಾಟವು ಇಡೀ ಜಗತ್ತಿಗೆ ಮಾದರಿಯಾಗಿದೆ. ಹೀಗಾಗಿ ಗಾಂಧಿಯವರು ವಿಶ್ವಮಾನ್ಯರಾಗಿದ್ದಾರೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗುಜರಾತ್ ವಿಧಾನಸಭಾ ಚುನಾವಣೆ

ಉಚಿತ ಕೊಡುಗೆಗಳ ಮೇಲಾಟ



ಪ್ರಜಾವಾಣಿ ವಾರ್ತೆ

ಗುಜರಾತ್‌ನಲ್ಲಿ ಚುನಾವಣಾ ಕಣ ರಂಗು ಪಡೆದುಕೊಂಡಿದೆ. ಒಂದೆಡೆ, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಗುಜರಾತ್ ಬಿಜೆಪಿ ದೊಡ್ಡ ಮಟ್ಟದ ಪ್ರಚಾರ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಅಕ್ಟೋಬರ್ ಮೊದಲ ವಾರದಲ್ಲೇ ಮೋದಿ ಅವರು ಗುಜರಾತ್‌ನಲ್ಲಿ ಹತ್ತಕ್ಕೂ ಹೆಚ್ಚು ಭಾರಿ ಯೋಜನೆಗಳನ್ನು ಉದ್ಘಾಟಿಸಿದ್ದಾರೆ. ಮತ್ತೊಂದೆಡೆ ಎಎಪಿ ಭಾರಿ ಸಿದ್ಧತೆಯೊಂದಿಗೆ ಕಣಕ್ಕೆ ಇಳಿದಿದೆ. ಎಎಪಿ ಸಂಚಾಲಕ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸ್ವತಃ ಪ್ರಚಾರಕ್ಕೆ ಧುಮಕಿದ್ದಾರೆ. ಮೇಲ್ನೋಟಕ್ಕೆ ಬಿಜೆಪಿ ಮತ್ತು ಎಎಪಿ ಮಧ್ಯೆ ಮಾತ್ರ ಸ್ಪರ್ಧೆ ಇದೆ ಎಂದು ಭಾಸವಾಗುತ್ತದೆ. ಆದರೆ, ಕಾಂಗ್ರೆಸ್ ಇವೆರಡೂ ಪಕ್ಷಗಳಿಗಿಂತ ವ್ಯವಸ್ಥಿತವಾಗಿ ಪ್ರಚಾರ ನಡೆಸುತ್ತಿದೆ. ಹೀಗಾಗಿ ಈ ಬಾರಿಯದ್ದು ತ್ರಿಕೋನ ಸ್ಪರ್ಧೆಯೇ ಆಗಲಿದೆ.

ಪ್ರಧಾನಿ ಮೋದಿ ಅವರು ತಮ್ಮ ತವರು ರಾಜ್ಯದಲ್ಲಿ ಪ್ರಚಾರ ಆರಂಭಿಸುವ ಮುನ್ನವೇ, ಅರವಿಂದ ಕೇಜ್ರಿವಾಲ್ ಅವರು ಅಹಮದಾಬಾದ್‌ನ ಬೀದಿಗಳಲ್ಲಿ ಎಎಪಿ ಪರವಾಗಿ ಪ್ರಚಾರ ಆರಂಭಿಸಿದ್ದರು. ಸೆಪ್ಟೆಂಬರ್‌ನಲ್ಲಿ ಕೇಜ್ರಿವಾಲ್ ಅವರು ಅಹಮದಾಬಾದ್‌ನ ಆಟೊ ಚಾಲಕರೊಬ್ಬರ ಮನೆಗೆ ಭೇಟಿ ನೀಡಿ, ಊಟ ಮಾಡಿ ಬಂದರು. ಕೇಜ್ರಿವಾಲ್ ಅವರು ಉಳಿದಿದ್ದ ಪಂಚತಾರಾ ಹೋಟೆಲ್‌ನಿಂದ ಆ ಆಟೊ ಚಾಲಕ, ಅವರನ್ನು ತಮ್ಮ ಮನೆಗೆ ಆಟೊದಲ್ಲೇ ಕರೆದೊಯ್ದಿದ್ದರು. ಇದು ದೊಡ್ಡ ಸುದ್ದಿಯಾಗಿತ್ತು. ಬಿಜೆಪಿ ಎಚ್ಚೆತ್ತುಕೊಂಡಿದ್ದು ಆಗಲೇ. ಕೇಜ್ರಿವಾಲ್ ಅವರು ಅಹಮದಾಬಾದ್‌ನಲ್ಲಿ ಆಟೊದಲ್ಲಿ ಸಂಚರಿಸಿದ್ದಕ್ಕೆ, ಬಿಜೆಪಿ ಕಾರ್ಯಕರ್ತರು ದೆಹಲಿಯಲ್ಲಿ ಪ್ರತಿಭಟಿಸಿದರು. ಕೇಜ್ರಿವಾಲ್ ಮತ್ತೆ ಮತ್ತೆ ಗುಜರಾತ್‌ಗೆ ಭೇಟಿ ನೀಡಿದರು. ಬಿಜೆಪಿ ತನ್ನ ಪ್ರಚಾರ ತಂತ್ರವನ್ನೇ ಬದಲಿಸಿತು.

ಹಾಗೆ ನೋಡಿದರೆ ಈ ಚುನಾವಣೆ ನಡೆಸಲು ಬಿಜೆಪಿ ಹಲವು ತಿಂಗಳ ಹಿಂದಿನಿಂದಲೇ ಕಾರ್ಯಪ್ರವೃತ್ತವಾಗಿತ್ತು. ಎಂದಿನಂತೆ, ಎದುರಾಳಿ ಪಕ್ಷಗಳ ನಾಯಕರನ್ನು ತನ್ನತ್ತ ಸೆಳೆಯಲು ಆರಂಭಿಸಿತ್ತು. ಪಾಟೀದಾರ್ ಮೀಸಲಾತಿ ಹೋರಾಟದ ಮುಂದಾಳುವಾಗಿದ್ದ ಹಾರ್ದಿಕ್ ಪಟೇಲ್ ಅವರನ್ನು ಬಿಜೆಪಿ ತನ್ನತ್ತ ಸೆಳೆದುಕೊಂಡಿತು.

ಆದರೆ, ಬಿಜೆಪಿಯ ಈ ತಂತ್ರಗಾರಿಕೆಗೆ ಬಹಿರಂಗವಾಗಿ ಸವಾಲೊಡ್ಡಿದ್ದು ಎಎಪಿ. ಎಎಪಿಯ ಭಾರಿ ಪ್ರಚಾರದ ನಂತರ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಪ್ರಚಾರ ಆರಂಭಿಸಿದರು. ಬಿಜೆಪಿ ದೊಡ್ಡ ಮಟ್ಟದ ಪ್ರಚಾರ ರ‍್ಯಾಲಿಗಳನ್ನು ಆಯೋಜಿಸಿತು. ಪ್ರಧಾನಿ ಮೋದಿ ಹತ್ತಾರು ಕಾರ್ಯಕ್ರಮಗಳನ್ನು ಉದ್ಘಾಟಿಸಿದರು. ವಂದೇ ಭಾರತ್ ರೈಲಿಗೂ ಚಾಲನೆ ನೀಡಿ, ಪ್ರಯಾಣಿಕರ ಜತೆಗೆ ಸಂವಾದ ನಡೆಸಿದರು. ಪ್ರಧಾನಿ ಮೋದಿ ಅವರು ಭಾಗವಹಿಸಿದ್ದ ರ‍್ಯಾಲಿಗಳಲ್ಲಿ ಹೆಚ್ಚಿನ ಕುರ್ಚಿಗಳು ಖಾಲಿ ಇದ್ದ ವಿಡಿಯೊಗಳನ್ನು ಎಎಪಿ ಟ್ವೀಟ್ ಮಾಡಿತು.

ಈ ಎರಡೂ ಪಕ್ಷಗಳು ಪರಸ್ಪರರ ವಿರುದ್ಧ ಮಾತ್ರ ಹೋರಾಡುತ್ತಿವೆ. ಬಿಜೆಪಿ ನಾಯಕರು ತಮ್ಮ ಭಾಷಣಗಳಲ್ಲಿ ಈಗ ಎಎಪಿ ವಿರುದ್ಧ ಮಾತ್ರ ಹರಿಹಾಯುತ್ತಿದ್ದಾರೆ. ಕಾಂಗ್ರೆಸ್ ವಿರುದ್ಧ ಅವರು ಮಾತನಾಡಿದ್ದು ಇಲ್ಲವೇ ಇಲ್ಲ ಎನ್ನಬಹುದು. ಸೋಮವಾರದ ತಮ್ಮ ಭಾಷಣದಲ್ಲಿ ಮಾತ್ರ ಮೋದಿ ಅವರು ನೆಹರೂ ಅವರನ್ನು ಟೀಕಿಸಿದ್ದಾರೆ. ಎಎಪಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದೆ. ಕೇಜ್ರಿವಾಲ್ ಅವರು, 'ಕಾಂಗ್ರೆಸ್ ಕತೆ ಮುಗಿದಿದೆ. ಅದನ್ನು ಲೆಕ್ಕಕ್ಕೆ ಇಟ್ಟುಕೊಳ್ಳಬೇಡಿ' ಎಂದೇ ಘೋಷಿಸಿಬಿಟ್ಟಿದ್ದಾರೆ. ಆದರೆ, ವಾಸ್ತವ ಸ್ಥಿತಿ ಹಾಗಿಲ್ಲ. ಕಾಂಗ್ರೆಸ್ ಸಹ ವ್ಯವಸ್ಥಿತವಾಗಿ ಪ್ರಚಾರ ನಡೆಸುತ್ತಿದೆ.

ಕಾಂಗ್ರೆಸ್ ತಂತ್ರದ ಬಗ್ಗೆ ಮೋದಿ ಎಚ್ಚರಿಕೆ

ಗುಜರಾತ್ ಚುನಾವಣಾ ಪ್ರಚಾರದಲ್ಲಿ ಕಾಂಗ್ರೆಸ್‌ನ ಬಗ್ಗೆ ಬಿಜೆಪಿ ಈವರೆಗೆ ಗಮನ ನೀಡಿರಲೇ ಇಲ್ಲ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರವಷ್ಟೇ ತಮ್ಮ ಪಕ್ಷದ ಕಾರ್ಯಕರ್ತರಿಗೆ, 'ಕಾಂಗ್ರೆಸ್ ಬಗ್ಗೆ ಎಚ್ಚರದಿಂದ ಇರಿ' ಎಂದು ಕಿವಿಮಾತು ಹೇಳಿದ್ದಾರೆ.

ಪಕ್ಷದ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಜಿಗ್ನೇಶ್ ಮೇವಾನಿ ನೇತೃತ್ವದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಪ್ರಚಾರ ಕಾರ್ಯ ನಡೆಸಲಾಗುತ್ತಿದೆ. ಕಾಂಗ್ರೆಸ್ ಶಾಸಕರು ಇರುವ ಕ್ಷೇತ್ರಗಳಲ್ಲಿ ರ‍್ಯಾಲಿ ಮತ್ತು ಸಂವಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಬಿಜೆಪಿ ಶಾಸಕರ ಕ್ಷೇತ್ರಗಳಲ್ಲಿ ಮನೆ ಮನೆ ಭೇಟಿ ಕಾರ್ಯಕ್ರಮಕ್ಕೆ ಆದ್ಯತೆ ನೀಡಲಾಗಿದೆ. ಈ ಯಾವ ಕಾರ್ಯಕ್ರಮವೂ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗದಂತೆ ನೋಡಿಕೊಳ್ಳಲಾಗುತ್ತಿದೆ. 'ಬಿಜೆಪಿ ಮತ್ತು ಎಎಪಿ ಪರಸ್ಪರ ಕಿತ್ತಾಡಿಕೊಳ್ಳಲಿ, ನಾವು ಜನರ ಬಳಿ ಮಾತನಾಡುತ್ತೇವೆ' ಎಂದು ಗುಜರಾತ್ ಕಾಂಗ್ರೆಸ್‌ನ ನಾಯಕರೊಬ್ಬರು ಹೇಳಿದ್ದಾರೆ. ಈ ತಂತ್ರ ಕೆಲಸ ಮಾಡುತ್ತಿದೆ. ಈ ಕಾರಣದಿಂದಲೇ ಮೋದಿ ಅವರು ತಮ್ಮ ಪಕ್ಷದ ಕಾರ್ಯಕರ್ತರಿಗೆ ಎಚ್ಚರಿಕೆ ನೀಡಿದ್ದು.

'ಪ್ರತಿ ಚುನಾವಣೆಯಲ್ಲಿ ಕಾಂಗ್ರೆಸ್ ಬೀದಿಗೆ ಇಳಿದು, ನಮ್ಮ ವಿರುದ್ಧ ಟೀಕೆ ಮಾಡುತ್ತಿತ್ತು. ಈಗ ಕಾಂಗ್ರೆಸ್ ಮೌನಕ್ಕೆ ಜಾರಿದಂತೆ ಕಾಣುತ್ತಿದೆ. ಆದರೆ, ಕಾಂಗ್ರೆಸ್ ಗುಪ್ತಗಾಮಿನಿಯಾಗಿ ಪ್ರಚಾರ ನಡೆಸುತ್ತಿದೆ ಎಂದು ನನಗೆ ಅನಿಸುತ್ತಿದೆ. ಅದನ್ನು ಪರಿಶೀಲಿಸಬೇಕು. ಕಾಂಗ್ರೆಸ್ ಪತ್ರಿಕಾಗೋಷ್ಠಿಗಳನ್ನು ನಡೆಸುತ್ತಿಲ್ಲ, ಪ್ರಚಾರ ನಡೆಸುತ್ತಿಲ್ಲ ಎಂದು ಅದನ್ನು ಕಡೆಗಣಿಸುವುದು ಅಪಾಯ. ಈಗ ಅವರು ರಾಜ್ಯದ ಪ್ರತಿ ಹಳ್ಳಿ-ಹಳ್ಳಿಗೂ ಹೋಗಿ ಜನರೊಂದಿಗೆ ಮಾತನಾಡುತ್ತಿದ್ದಾರೆ. ಜನರನ್ನು ತಮ್ಮತ್ತ ಸೆಳೆಯುತ್ತಿದ್ದಾರೆ. ಈ ಬಗ್ಗೆ ನಾವು ಎಚ್ಚರದಿಂದ ಇರಬೇಕು' ಎಂದು ಮೋದಿ ಹೇಳಿದ್ದಾರೆ. ಮೋದಿ ಅವರ ಎಚ್ಚರಿಕೆಯಲ್ಲಿ ಹುರುಳಿದೆ. ಗುಜರಾತ್‌ನಲ್ಲಿ ಬಿಜೆಪಿಯ ಗಟ್ಟಿ ನೆಲೆ ಇರುವುದು ನಗರ ಪ್ರದೇಶದಲ್ಲಿ. ಎಎಪಿ ಸಹ ನಗರ ಪ್ರದೇಶದ ಮತದಾರರನ್ನು ಗುರಿ ಮಾಡಿಕೊಂಡಿದೆ. ಆದರೆ, ಕಾಂಗ್ರೆಸ್ ಗ್ರಾಮೀಣ ಪ್ರದೇಶದಲ್ಲಿನ ತನ್ನ ನೆಲೆಯನ್ನು ಗಟ್ಟಿ ಮಾಡಿಕೊಳ್ಳುತ್ತಿದೆ ಎಂದು ವಿಶ್ಲೇಷಿಸಲಾಗಿದೆ.

ಕೇಜ್ರಿವಾಲ್ ಭರಪೂರ ವಾಗ್ದಾನ



ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಈ ಬಾರಿ ಗುಜರಾತ್‌ನಲ್ಲಿ ಶತಾಯಗತಾಯ ಅಧಿಕಾರ ಹಿಡಿಯುವ ಹಟ ತೊಟ್ಟಿದ್ದಾರೆ. ದೆಹಲಿಯಲ್ಲಿ ಜಾರಿಯಲ್ಲಿರುವ ಹಲವು ಯೋಜನೆಗಳನ್ನು ಗುಜರಾತ್‌ನಲ್ಲಿಯೂ ಜಾರಿಗೆ ತರುವುದಾಗಿ ಕೇಜ್ರಿವಾಲ್ ಘೋಷಿಸಿದ್ದಾರೆ. ವಿದ್ಯುತ್, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಭರಪೂರ ಕೊಡುಗೆಗಳನ್ನು ಪ್ರಕಟಿಸಿದ್ದಾರೆ. ನಿರುದ್ಯೋಗಿ ಯುವಕ, ಯುವತಿಯರಿಗೆ ತಿಂಗಳಿಗೆ ₹3,000 ಭತ್ಯೆ ನೀಡುವುದಾಗಿ ಅವರು ಪ್ರಕಟಿಸಿದ್ದಾರೆ. ರಾಜ್ಯದ ಎಲ್ಲ ಮಹಿಳೆಯರಿಗೆ ₹1,000 ಸಹಾಯಧನ ನೀಡುವ ಘೋಷಣೆ ಮಾಡಿದ್ದಾರೆ. ರಾಜ್ಯದ ಪ್ರತೀ ಮನೆಗೆ 300 ಯೂನಿಟ್ ಉಚಿತ ವಿದ್ಯುತ್, ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, 2021ರ ಡಿಸೆಂಬರ್‌ವರೆಗಿನ ವಿದ್ಯುತ್ ಬಾಕಿ ಮನ್ನಾ ಮಾಡುವುದಾಗಿ ಕೇಜ್ರಿವಾಲ್ ಭರವಸೆ ಕೊಟ್ಟಿದ್ದಾರೆ.


ಎಎಪಿ ಭರವಸೆಗಳನ್ನು ಈಡೇರಿಸುತ್ತಿದೆ ಬಿಜೆಪಿ

ವೇತನ ಪರಿಷ್ಕರಣೆ ಸೇರಿದಂತೆ ಎಎಪಿ ನೀಡಿದ್ದ ಭರವಸೆಗಳನ್ನು ಹೈಜಾಕ್ ಮಾಡಿರುವ ಬಿಜೆಪಿ, ಅವುಗಳನ್ನು ಇದೇ ಅವಧಿಯಲ್ಲಿ ಕಾರ್ಯರೂಪಕ್ಕೆ ತರುತ್ತಿದೆ ಎಂದು ಆರೋಪಿಸಲಾಗಿದೆ. ಎಎಪಿ ಅಧಿಕಾರಕ್ಕೆ ಬಂದರೆ ಪೊಲೀಸರು, ಅಂಗನವಾಡಿ ಕಾರ್ಯಕರ್ತೆಯರು, ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಮಾಡುವುದಾಗಿ ಎಎಪಿ ಘೋಷಿಸಿತ್ತು. ತಕ್ಷಣವೇ ಕಾರ್ಯಪ್ರವೃತ್ತವಾದ ಬಿಜೆಪಿ, ಪೊಲೀಸರ ವೇತನ ಹೆಚ್ಚಿಸಲು ₹550 ಕೋಟಿ ಪ್ಯಾಕೇಜ್ ಘೋಷಿಸಿತು. ಅಂಗನವಾಡಿ ಸಿಬ್ಬಂದಿ ವೇತನವನ್ನು ₹10,000ಕ್ಕೆ ಹೆಚ್ಚಿಸಿತು. ಸರ್ಕಾರಿ ನೌಕರರ ವೇತನವೂ ಪರಿಷ್ಕರಣೆ ಆಗಲು ಕೇಜ್ರಿವಾಲ್ ಅವರು ನೀಡಿದ್ದ ಭರವಸೆಯೇ ಕಾರಣವಾಯಿತು.

ರಾಜ್ಯದ ಒಬಿಸಿ ಸಮುದಾಯದ ಮೇಲೆ ಕಣ್ಣಿಟ್ಟಿದ್ದ ಕೇಜ್ರಿವಾಲ್ ಅವರು, ಜಾನುವಾರು ನಿಯಂತ್ರಣ ಕಾಯ್ದೆ ವಾಪಸ್ ಪಡೆಯಲು ಮಾಲ್ಧಾರಿ ಸಮುದಾಯ ನಡೆಸಿದ್ದ ಪ್ರತಿಭಟನೆಗೆ ಬೆಂಬಲ ಘೋಷಿಸಿದರು. ಕೇಜ್ರಿವಾಲ್ ಅವರ ತಂತ್ರಗಾರಿಕೆ ಅರಿತ ಬಿಜೆಪಿ, ತಕ್ಷಣವೇ ಕಾಯ್ದೆ ವಾಪಸ್ ಪಡೆದು, ಸರ್ಕಾರವು ಸಮುದಾಯದ ಪರವಾಗಿದೆ ಎಂದು ಬಿಂಬಿಸಿಕೊಂಡಿತು. ಆರು ವರ್ಷಗಳ ಹಿಂದೆ ನಿವೃತ್ತ ಸೈನಿಕರು ನೀಡಿದ್ದ 14 ಅಂಶಗಳ ಬೇಡಿಕೆಗಳನ್ನು ಈಡೇರಿಸುವುದಾಗಿ ಕೇಜ್ರಿವಾಲ್ ಭರವಸೆ ನೀಡಿದ್ದೇ ತಡ, ಹುತಾತ್ಮ ಸೈನಿಕರಿಗೆ ನೀಡುವ ಪರಿಹಾರ ಮೊತ್ತವನ್ನು ₹1 ಲಕ್ಷದಿಂದ ₹1 ಕೋಟಿಗೆ ಏರಿಸುವ ಹಾಗೂ ಸೈನಿಕ ಸ್ಮಾರಕ ನಿರ್ಮಿಸುವ ಘೋಷಣೆಯನ್ನು ಬಿಜೆಪಿ ಮಾಡಿತು.

'ಆರ್ಥಿಕ ಬಿಕ್ಕಟ್ಟಿನಲ್ಲಿ ಸರ್ಕಾರ'

ಉಚಿತ ಕೊಡುಗೆ ಘೋಷಿಸುವ ಮುನ್ನ, ಸರ್ಕಾರದ ಆರ್ಥಿಕ ಸ್ಥಿತಿ ಹೇಗಿದೆ ಎಂದು ಪರಿಶೀಲಿಸುವ ಗೋಜಿಗೆ ಯಾವ ಪಕ್ಷವೂ ಹೋದಂತಿಲ್ಲ. ಇದೇ ಮಾರ್ಚ್‌ನಲ್ಲಿ ಸಿಎಜಿ ಬಿಡುಗಡೆ ಮಾಡಿದ ವರದಿಯಲ್ಲಿ, ಸರ್ಕಾರವು ಸಾಲದ ಸುಳಿಯಲ್ಲಿದ್ದು, ಪರಿಸ್ಥಿತಿ ಬಿಗಡಾಯಿಸುತ್ತಿರುವುದರತ್ತ ಬೊಟ್ಟು ಮಾಡಿತ್ತು. ಮುಂದಿನ 7 ವರ್ಷಗಳಲ್ಲಿ ಸರ್ಕಾರವು ₹1.67 ಲಕ್ಷ ಕೋಟಿ ಮರುಪಾವತಿ ಮಾಡಬೇಕಿದೆ ಎಂದು ತಿಳಿಸಿದೆ. ಇಂತಹ ಪರಿಸ್ಥಿತಿಯಲ್ಲಿ ಉಚಿತ ಕೊಡುಗೆಗಳಿಗೆ ಬೇಕಾಗುವ ಹಣವನ್ನು ಎಲ್ಲಿಂದ ತರಲಾಗುತ್ತದೆ ಎಂಬುದು ಸಾರ್ವಜನಿಕರ ಪ್ರಶ್ನೆ.



ಯೋಜನೆಗಳ ಸರಮಾಲೆ

ಎಎಪಿ ಹಾಗೂ ಕಾಂಗ್ರೆಸ್ ಉಚಿತ ಕೊಡುಗೆಗಳ ಮೊರೆ ಹೋಗಿದ್ದರೆ, ಬಿಜೆಪಿ ಸರ್ಕಾರವು ಬೃಹತ್ ಯೋಜನೆಗಳ ಮೂಲಕ ಜನರ ಮನವೊಲಿಕೆಯಲ್ಲಿ ತೊಡಗಿದೆ. ಮೂರ್ನಾಲ್ಕು ತಿಂಗಳ ಅವಧಿಯಲ್ಲಿ ರಾಜ್ಯಕ್ಕೆ ಕೋಟ್ಯಂತರ ರೂಪಾಯಿ ಮೌಲ್ಯದ ಹತ್ತಾರು ಯೋಜನೆಗಳನ್ನು ಬಿಜೆಪಿ ಘೋಷಿಸಿದೆ. ಸದ್ಯ ಗುಜರಾತ್ ಪ್ರವಾಸದಲ್ಲಿರುವ ಪ್ರಧಾನಿ ಮೋದಿ ಅವರು ₹14,600 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಸೋಮವಾರ ಚಾಲನೆ ನೀಡಿದರು. ಸೂರತ್, ಭಾವನಗರ, ಅಹಮದಾಬಾದ್ ನಗರಗಳಲ್ಲಿ ಸುಮಾರು ₹21 ಸಾವಿರ ಕೋಟಿ ಮೊತ್ತದ ಯೋಜನೆಗಳಿಗೆ ಸೆಪ್ಟೆಂಬರ್‌ನಲ್ಲಿ ಚಾಲನೆ ನೀಡಿದ್ದರು. ಇದೇ ಏಪ್ರಿಲ್‌ನಲ್ಲಿ ₹22 ಸಾವಿರ ಕೋಟಿ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಶಿಲಾನ್ಯಾಸ ಮಾಡಿದ್ದರು. ಜೂನ್ ತಿಂಗಳಲ್ಲಿ ವಡೋದರದಲ್ಲಿ ನಡೆದ ಗೌರವ ಅಭಿಯಾನದಲ್ಲಿ ಭಾಗಿಯಾಗಿದ್ದ ಪ್ರಧಾನಿ, ₹21 ಸಾವಿರ ಕೋಟಿ ಮೊತ್ತದ ಕಾಮಗಾರಿಗಳಿಗೆ ಚಾಲನೆ ನೀಡಿದ್ದರು.

ಕಾಂಗ್ರೆಸ್‌ನಿಂದಲೂ ಮಹಾಪೂರ

ಉಚಿತ ಕೊಡುಗೆ ಘೋಷಿಸುವಲ್ಲಿ ಕಾಂಗ್ರೆಸ್ ಪಕ್ಷವೂ ಹಿಂದೆ ಬಿದ್ದಿಲ್ಲ. ರಾಜ್ಯದ ಪ್ರತೀ ನಿವಾಸಿಗೆ ₹10 ಲಕ್ಷದವರೆಗೆ ಉಚಿತ ವೈದ್ಯಕೀಯ ಚಿಕಿತ್ಸೆ ಹಾಗೂ ಉಚಿತ ಔಷಧ ನೀಡುವ ವಾಗ್ದಾನ ಮಾಡಿದೆ. ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ₹4 ಲಕ್ಷ ಆರ್ಥಿಕ ನೆರವು, ರೈತರ ₹3 ಲಕ್ಷದವರೆಗಿನ ಬೆಳೆಸಾಲ ಮನ್ನಾ, ಹಾಲು ಉತ್ಪಾದಕರಿಗೆ ಲೀಟರ್‌ಗೆ ₹5 ಸಹಾಯಧನ ನೀಡುವುದಾಗಿ ಪಕ್ಷ ಪ್ರಕಟಿಸಿದೆ. ಮನೆಗಳಿಗೆ 300 ಯೂನಿಟ್ ವಿದ್ಯುತ್, ಹಾಗೂ ನಿರುದ್ಯೋಗ ಭತ್ಯೆ ನೀಡುವ ಎಎಪಿ ಭರವಸೆಗಳನ್ನು ಕಾಂಗ್ರೆಸ್ ಸಹ ನೀಡಿದೆ.

ಆಧಾರ: ಪಿಟಿಐ, ಎಎಪಿ, ಬಿಜೆಪಿ, ಕಾಂಗ್ರೆಸ್‌ನ ಅಧಿಕೃತ ಟ್ವಿಟರ್ ಖಾತೆಗಳು

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದಿ ಅಥವಾ ಸ್ಥಳೀಯ ಭಾಷೆಯೇ ಬೋಧನಾ ಮಾಧ್ಯಮ ಆಗಿರಬೇಕು ಎಂಬ ಸಂಸದೀಯ ಸಮಿತಿಯ ಶಿಫಾರಸು ಜಾರಿಯಾದರೆ ಇಂಗ್ಲಿಷ್ ಭಾಷೆಯ ಪ್ರಾಬಲ್ಯ ಕ್ರಮೇಣ ತಗ್ಗಲಿದೆ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 246

ಕಲ್ಯಾಣಕ್ಕೆ ಸಪ್ತರ್ಷಿಗಳ ರಾಯಭಾರ

ಬ್ರಾಹ್ಮಣ ವೇಷಧಾರಿ ಶಿವನ ಮಾತುಗಳನ್ನು ಕೇಳಿ ಮೇನಾದೇವಿಗೆ ಆತಂಕವಾಗುತ್ತದೆ. ಅವಳು ಗಂಡನಿಗೆ 'ಈ ಬ್ರಾಹ್ಮಣನ ಮಾತು ಕೇಳಿದರೆ ಭಯವಾಗುತ್ತಿದೆ. ಶಿವ ನಮ್ಮ ಮಗಳಿಗೆ ಯೋಗ್ಯನಾದ ವರನಲ್ಲ ಎಂದು ತಿಳಿದ ನಂತರವೂ ಮದುವೆ ಮಾಡಿಕೊಡುವುದು ಸರಿಯಲ್ಲ. ಇಷ್ಟೆಲ್ಲಾ ತಿಳಿದ ಮೇಲೂ ಕುರೂಪಿಯೂ ದುಶ್ಶೀಲನೂ ಆದಂತಹ ರುದ್ರನಿಗೆ ಸುಲಕ್ಷಣವತಿಯಾದ ಪುತ್ರಿಯನ್ನು ಹೇಗೆ ಕೊಡಲಿ? ನನ್ನ ಮಾತನ್ನು ನೀನು ಕೇಳದೇ ಹೋದರೆ, ಖಂಡಿತ ಪ್ರಾಣ ತ್ಯಾಗ ಮಾಡುವೆ' ಎಂದು ಕೋಪದಿಂದ ಹೇಳಿದಳು.

ಪತ್ನಿಯ ಹಟ ಕಂಡು ಹಿಮವಂತ ಕಂಗಾಲಾದ. ಮೇನಾದೇವಿಯ ಮಾತು ಕೇಳಿದರೆ ಪಾರ್ವತಿ ಮುನಿಸಿಕೊಳ್ಳುತ್ತಾಳೆ, ಪಾರ್ವತಿ ಮಾತು ಕೇಳಿದರೆ ಮೇನಾದೇವಿ ಮುನಿಸಿಕೊಳ್ಳುತ್ತಾಳೆ – ಎಂದು ಉಭಯ ಸಂಕಟಕ್ಕೆ ಸಿಲುಕಿದ. ಅಂತಿಮವಾಗಿ ಪತ್ನಿಯ ಹಠದಲ್ಲಿ ಮಗಳು ಪಾರ್ವತಿಯ ಹಿತವಿದೆ ಎಂದು ಭಾವಿಸಿ, ಮದುವೆ ಕಾರ್ಯ ನಿಲ್ಲಿಸಿದ.

ಅತ್ತ ಶಿವ ಕೈಲಾಸಕ್ಕೆ ಹೋದ ನಂತರ ತನ್ನ ಕೃತ್ಯಕ್ಕೆ ವ್ಯಥಿಸಿದ. ದೇವತೆಗಳ ಕುಯುಕ್ತಿ ಗೊತ್ತಾಗಿಯೂ, ಅವರ ಮಾತಿನಂತೆ ಮಾರುವೇಷದಲ್ಲಿ ಹೋಗಿ ಹಿಮವಂತ ಮತ್ತು ಮೇನಾದೇವಿ ದಂಪತಿ ಮನಸ್ಸು ಕೆಡಿಸಿದೆ. ತಪ್ಪು ತಿಳಿವಳಿಕೆಯಿಂದ ಮದುವೆ ಕಾರ್ಯ ನಿಲ್ಲಿಸಿರುವ ಅವರಿಗೆ ನಿಜಸ್ಥಿತಿಯನ್ನು ತಿಳಿಸುವುದು ಹೇಗೆಂದು ಯೋಚಿಸಿದ. ಆಗ ಸಪ್ತರ್ಷಿಗಳ ನೆರವು ಪಡೆಯಲು ನಿರ್ಧರಿಸಿದ. ಸಪ್ತರ್ಷಿಗಳು ಶಂಕರನಲ್ಲಿಗೆ ಬಂದರು. ವಸಿಷ್ಠನೊಂದಿಗೆ ಪತ್ನಿ, ಅರುಂಧತಿಯೂ ಬಂದಳು.

ಸಪ್ತರ್ಷಿಗಳು 'ನಿನ್ನ ಸೇವಕರಾದ ನಮ್ಮನ್ನು ಕರೆಸಿದ ಕಾರಣವೇನು?' ಎಂದು ಕೇಳಿದರು. ಆಗ ಮಹೇಶ್ವರ ಹೇಳಿದ, 'ಎಲೈ ಋಷಿಗಳಿರಾ, ನನ್ನ ಕಾರ್ಯವೆಲ್ಲವೂ ಲೋಕೋಪಕ್ಕಾರಕ್ಕಾಗಿ ಎಂಬುದು ನಿಮಗೆಲ್ಲ ತಿಳಿದಿದೆ. ನನ್ನ ಪ್ರಸಿದ್ಧವಾದ ಎಂಟು ಮೂರ್ತಿಗಳೂ ಪರೋಪಕ್ಕಾರಕ್ಕಾಗಿಯೇ ಇರುವುವು. ನನ್ನ ಸ್ವಾರ್ಥಕ್ಕಾಗಿ ಯಾವುದೂ ಇಲ್ಲ. ಪ್ರಸ್ತುತ ದುಷ್ಟನಾದ ತಾರಕಾಸುರನಿಂದ ದೇವತೆಗಳ ರಕ್ಷಿಸಲು ನಾನು ಪಾರ್ವತಿಯನ್ನು ಮದುವೆಯಾಗಲು ಇಚ್ಛಿಸಿದ್ದೇನೆ. ಆ ದೇವಿಯೂ ನನ್ನನ್ನೇ ಪತಿಯನ್ನಾಗಿ ಪಡೆಯಲು, ಮಹಾ ಮಹಾ ಮುನಿಗಳೂ ಮಾಡದಂತಹ ತಪವನ್ನು ಆಚರಿಸಿದ್ದಾಳೆ. ನನ್ನ ಆರಾಧಿಸುವ ಭಕ್ತರ ಇಷ್ಟಾರ್ಥ ನೆರವೇರಿಸುವುದು ನನ್ನ ಕರ್ತವ್ಯ. ಅದರಂತೆ ನಾನು ಪಾರ್ವತಿಯನ್ನು ಮದುವೆಯಾಗಲು ಒಪ್ಪಿದ್ದೆ. ಇದಕ್ಕೆ ಪಾರ್ವತಿಯ ಮಾತಾಪಿತೃಗಳಾದ ಮೇನಾದೇವಿ ಮತ್ತು ಹಿಮವಂತರು, ನನಗೆ ವೇದವಿಧಿಯಂತೆ ಮದುವೆಮಾಡಿಕೊಡಲು ಒಪ್ಪಿದ್ದರು. ಇದರ ಮಧ್ಯೆ ದೇವತೆಗಳ ಕೋರಿಕೆಯಂತೆ ಹಿಮವಂತನಿಗೆ ನನ್ನ ಮೇಲಿರುವ ಭಕ್ತಿಯನ್ನು ಪರೀಕ್ಷಿಸಲು ನಿರ್ಧರಿಸಿದೆ. ಇದಕ್ಕಾಗಿ ಬ್ರಾಹ್ಮಣನ ವೇಷದಿಂದ ಅವನ ಬಳಿಗೆ ಹೋಗಿ ಶಿವನಿಂದನೆ ಮಾಡಿದೆ. ಇದನ್ನು ಕೇಳಿದ ಮೇನಾದೇವಿ ಮತ್ತು ಹಿಮವಂತ ದಂಪತಿ ತುಂಬಾ ಹತಾಶರಾಗಿದ್ದಾರೆ. ಈಗ ಅವರು ತಮ್ಮ ಪುತ್ರಿಯನ್ನು ನನಗೆ ಮದುವೆ ಮಾಡಿಕೊಡಲು ಇಚ್ಛಿಸುತ್ತಿಲ್ಲ. ಆದುದರಿಂದ ನೀವು ಹಿಮವಂತನ ಮನೆಗೆ ಹೋಗಿ, ಮೇನಾದೇವಿ ಮತ್ತು ಹಿಮವಂತ ದಂಪತಿಗೆ ಸರಿಯಾದ ತಿಳಿವಳಿಕೆಯನ್ನ ನೀಡಿ. ವೇದಸಮಾನವಾದ ಮಾತಿನಿಂದ ಉಪದೇಶ ನೀಡಿ, ನಾನು ಪಾರ್ವತಿಯೊಂದಿಗೆ ವಿವಾಹವಾಗುವಂತೆ ಮಾಡಿ' ಎಂದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹಮ್ಮಿಕೊಂಡಿರುವ 'ಭಾರತ್ ಜೋಡೊ ಯಾತ್ರೆ'ಯು ಕೇರಳದ ಗಡಿಯಿಂದ ಕರ್ನಾಟಕವನ್ನು ಪ್ರವೇಶಿಸಿ ಮುನ್ನಡೆಯುತ್ತಿದೆ. 'ಕೇರಳದಲ್ಲಿ ಯಾತ್ರೆಯ ವೇಳೆ ಪ್ಯಾಂಟ್ ಹಾಗೂ ಟೀಶರ್ಟ್ ಧರಿಸಿದ್ದ ರಾಹುಲ್ ಅವರು ಕರ್ನಾಟಕವನ್ನು ಪ್ರವೇಶಿಸುತ್ತಿದ್ದಂತೆಯೇ ಬಿಳಿ ಕುರ್ತಾ, ಸ್ತೋತ್ರ ಮುದ್ರಿತವಾಗಿರುವ ಶಲ್ಯ ಹಾಗೂ ರುದ್ರಾಕ್ಷಿ ಮಾಲೆ ಧರಿಸಿದ್ದರು' ಎಂದು ಮಲಯಾಳ ಭಾಷೆಯಲ್ಲಿ ಟ್ವೀಟ್ ಮಾಡಲಾಗಿದೆ. ರಾಹುಲ್ ಅವರು ಬೇರೆ ಬೇರೆ ದಿರಿಸುಗಳಲ್ಲಿ ಕಾಣಿಸಿಕೊಂಡಿರುವ ಎರಡು ಚಿತ್ರಗಳನ್ನು ಕೊಲಾಜ್ ಮಾಡಿ ಬಳಸಲಾಗಿದೆ. ಇದು ಚರ್ಚೆಗೆ ಗ್ರಾಸವಾಗಿದೆ.



ರಾಹುಲ್ ಅವರು ಕೇರಳ ಹಾಗೂ ಕರ್ನಾಟಕದಲ್ಲಿ ಒಂದೇ ರೀತಿಯ ಬಟ್ಟೆ ಧರಿಸಿದ್ದಾರೆ. ಕುರ್ತಾ, ಶಲ್ಯ ಹಾಗೂ ರುದ್ರಾಕ್ಷಿ ಧರಿಸಿರುವ ಚಿತ್ರವು ಯಾತ್ರೆಗೆ ಸಂಬಂಧಿಸಿದ್ದಲ್ಲ ಎಂದು 'ಇಂಡಿಯಾ ಟುಡೇ' ವರದಿ ಮಾಡಿದೆ. ಉತ್ತರ ಪ್ರದೇಶ ಚುನಾವಣಾ ಪ್ರಚಾರದ ವೇಳೆ ತಮ್ಮ ಸಹೋದರಿ ಪ್ರಿಯಾಂಕಾ ಗಾಂಧಿ ಅವರ ಜೊತೆ ಕಾಶಿ ವಿಶ್ವನಾಥ ಮಂದಿರಕ್ಕೆ ರಾಹುಲ್ ಭೇಟಿ ನೀಡಿದ್ದಾಗ ಈ ಚಿತ್ರವನ್ನು ಸೆರೆಹಿಡಿಯಲಾಗಿತ್ತು. ದೇವಸ್ಥಾನಕ್ಕೆ ಭೇಟಿ ನೀಡಿದ್ದ ಚಿತ್ರವನ್ನು ಯಾತ್ರೆಯ ಜೊತೆ ತಪ್ಪಾಗಿ ತಳಕು ಹಾಕಲಾಗಿದೆ ಎಂದು ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಅನೂಹ್ಯ ಜೀವನ ಮಾರ್ಗ

ಆವ ಕಡೆ ಹಾರುವುದೊ! ಆವ ಕಡೆ ತಿರುಗುವುದೊ!
ಆವಾಗಳಾವಕಡೆಗೆರಗುವುದೊ ಹಕ್ಕಿ ||
ನಾವುಮಂತೆಯೆ ಸೃಷ್ಟಿಕೃತ್ರಿಮದ ಕೈಗೊಂಬೆ |
ಜೀವನಮಾರ್ಗವನೂಹ್ಯ – ಮಂಕುತಿಮ್ಮ || 732 ||

ಪದ-ಅರ್ಥ: ಆವಾಗಳಾವಕಡೆಗೆರೆಗುವುದೊ = ಆವಗಳೆ + ಆವಕಡೆಗೆ + ಎರಗಂವುದೊ, ನಾವುಮಂತೆಯೆ = ನಾವು (ನಾವೂ) + ಅಂತೆಯೆ, ಜೀವನಮಾರ್ಗವನೂಹ್ಯ = ಜೀವನಮಾರ್ಗವು + ಅನೂಹ್ಯ(ಊಹಿಸಲು ಸಾಧ್ಯವಾಗದ್ದು).

ವಾಚ್ಯಾರ್ಥ: ಹಕ್ಕಿ ಯಾವ ಕಡೆಗೆ ಹಾರುವುದೊ, ಯಾವ ಕಡೆಗೆ ತಿರುಗುವುದೊ, ಯಾವಾಗ, ಯಾವ ಕಡೆಗೆ ಎರಗುವುದೋ ಹೇಳುವುದು ಕಷ್ಟ. ಅದರಂತೆಯೇ, ನಾವೂ ಸೃಷ್ಟಿಯ ಕೃತ್ರಿಮದ ಕೈಗೊಂಬೆಗಳು. ಜೀವನ ನಡೆಯುವ ಮಾರ್ಗ ಊಹಿಸಲ ಸಾಧ್ಯವಾದದ್ದು.

ವಿವರಣೆ: ಒಂದು ಹಕ್ಕಿಯ ಚಲನವಲನಗಳು ಹೀಗೆಯೇ ಎಂದು ಹೇಳುವುದು ಸಾಧ್ಯವಿಲ್ಲ. ಆಹಾರಕ್ಕಾಗಿ ಎಲ್ಲೆಲ್ಲಿಯೋ ಹೋಗುತ್ತದೆ, ಯಾವುದೋ ಭಯದಿಂದ ತಕ್ಷಣ ಹಾರಿ ಬೇರೆಡೆಗೆ ಸಾಗುತ್ತದೆ. ಅದರ ಹಾರಾಟ, ಚಟುವಟಿಕೆಗಳು ಅನಿಶ್ಚಿತವಾಗಿರುತ್ತವೆ. ಕಗ್ಗ ಹೇಳುತ್ತದೆ ಮನುಷ್ಯನ ಜೀವನದ ದಾರಿಯೂ ಹೀಗೆಯೇ ಅನೂಹ್ಯವಾದದ್ದು. ಬದುಕು ಹೀಗೆಯೇ ಆದೀತು ಎಂದು ಹೇಳುವುದು ಅಸಾಧ್ಯ. ಕೇರಳದ ಅತ್ಯಂತ ಬಡ ಕುಟುಂಬದಲ್ಲಿ ರಾತ್ರಿಯ ಊಟ ದೊರಕೀತೇ ಎಂಬ ಸ್ಥಿತಿಯಲ್ಲಿದ್ದ ಹುಡುಗನೊಬ್ಬ ರಾಷ್ಟ್ರಪತಿಯಾಗುತ್ತಾನೆ. ರೈತನ ಮಗನೊಬ್ಬ ಪ್ರಧಾನಮಂತ್ರಿಯಾಗುತ್ತಾನೆ. ಕೋಟಿ ಕೋಟಿ ಹಣವನ್ನು ಕಾಲಡಿಯಲ್ಲಿಟ್ಟುಕೊಂಡು ವ್ಯಾಪಾರದಲ್ಲಿ ಸಂಭ್ರಮಪಟ್ಟವನು ಪರದೇಶದ ಜೈಲುಗಳಲ್ಲಿ ಕೊಳೆಯುತ್ತಾನೆ, ಸನ್ಯಾಸಿಯಾಗಿ ಲೋಕಕ್ಕೆ ಮಾದರಿಯ ಬದುಕನ್ನು ಹೇಳಿಕೊಡುತ್ತಿದ್ದ ವ್ಯಕ್ತಿಮುಖಗೇಡಿಯಾಗಿ ತಿರಸ್ಕಾರಕ್ಕೆ ಒಳಗಾಗುತ್ತಾನೆ. ಇದೇ ಬದುಕಿನ ಅನೂಹ್ಯತೆ. ಬಸವ ಪುರಾಣ, ಶೂನ್ಯಸಂಪಾದನೆ ಮತ್ತು ಗೌರವಾಂಕನ ಮೋಳಿಗಯ್ಯನ ಪುರಾಣ ಗ್ರಂಥಗಳಲ್ಲಿ ದೊರೆಯುವ ಮಹಾದೇವ ಭೂಪಾಲನ ಕಥೆ, ವಿಧಿ ನಮ್ಮ ಬದುಕನ್ನು ತನ್ನಿಚ್ಛೆಯಂತೆ ಬದಲಿಸುವುದನ್ನು ತೋರಿಸುತ್ತದೆ. ದೂರದ ಕಾಶ್ಮೀರ. ಅಲ್ಲಿಯ ರಾಜ ಮಹಾದೇವ ಭೂಪಾಲ. ಅವನ ಪತ್ನಿ ಗಂಗಾದೇವಿ. ಅವನ ಶ್ರೀಮಂತಿಕೆ ಬೆರಗುಗೊಳಿಸುವಂಥದ್ದು. ಅದರೊಂದಿಗೆ ಹೃದಯ ಶ್ರೀಮಂತಿಕೆಯೂ ಅದ್ಭುತ. ಆತ ನಿತ್ಯ ಸಾವಿರಾರು ಜನರಿಗೆ ದಾಸೋಹವನ್ನು ಮಾಡುತ್ತಿದ್ದ. ಅವನ ಕಿವಿಗೆ ಬಸವಕಲ್ಯಾಣದ ಬಸವಣ್ಣನ ವಿಷಯ ಕಿವಿಗೆ ಬಿದ್ದು, ಅದನ್ನು ಕಾಣಲು ಪತ್ನಿಯೊಂದಿಗೆ ಬಂದ ಮಹಾದೇವ ಭೂಪಾಲ, ಬಸವಣ್ಣನ ಭಕ್ತಿಯ, ಪ್ರೇಮದ ಬಲೆಯಲ್ಲಿ ಸೇರಿಹೋಗಿ, ತಾನೂ ಶರಣನಾಗಿ ಅಲ್ಲಿಯೇ ನಿಂತುಬಿಟ್ಟ. ಕಟ್ಟಿಗೆ ಒಡೆದು, ಹೊತ್ತು ತಂದು ಮಾರಿ, ಬಂದ ಹಣದಲ್ಲಿ ದಾಸೋಹ ಮಾಡುತ್ತ, ಕನ್ನಡ ಕಲಿತು, ಅದ್ಭುತ ವಚನಗಳನ್ನು ರಚಿಸಿ, ಶಾಶ್ವತರಾದದ್ದು ಮೋಳಿಗೆ (ಕಟ್ಟಿಗೆಯ ಹೊರೆ) ಮಾರಯ್ಯ ಮತ್ತು ಮಹಾದೇವಿಯವರ ಜೀವನ ಗಾಥೆ. ಎಲ್ಲಿಯ ಕಾಶ್ಮೀರ, ಎಲ್ಲಿಯ ಬಸವಕಲ್ಯಾಣ? ಕತ್ತಿ, ಗುರಾಣಿ ಹಿಡಿದಿದ್ದ ರಾಜನ ಕೈಯಲ್ಲಿ ಇಷ್ಟಲಿಂಗ. ಕಿರೀಟ ಧರಿಸುತ್ತಿದ್ದ ತಲೆಯ ಮೇಲೆ ಕಟ್ಟಿಗೆಯ ಹೊರೆ. ರಾಜಾಜ್ಞೆಯನ್ನು ಬರೆಯುವ ಕೈಗಳಿಂದ ವಚನ ರಚನೆ. ರಾಜಕಾರ್ಯ ಮತ್ತು ದಾಸೋಹಗಳೆರಡರಲ್ಲೂ ಸಾರ್ಥಕ್ಯ ಕಂಡ ಚೇತನಗಳು. ಜೀವನದ ಕಲ್ಪನಾತೀತ ಬದಲಾವಣೆಗಳು ವಿಧಿಯ ಕೈವಾಡ. ನಾವು ಆ ಸೃಷ್ಟಿ ಕೃತ್ರಿಮದ ಕೈಯಲ್ಲಿದ್ದ ಗೊಂಬೆಗಳು ಮಾತ್ರ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಅಕ್ಟೋಬರ್ 11, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ದ್ವಿತೀಯ ಗಂ. 25-30 ನಕ್ಷತ್ರ: ಅಶ್ವಿನಿ ಗಂ. 16-57 ಯೋಗ: ಹರ್ಷಣ ಗಂ. 15-46, ಕರಣ: ತೈತಿಲ ಗಂ. 13-30, ಕನ್ಯಾ ಮಾಸದ 24 ನೇ ದಿನ.

ರಾಹುಕಾಲ : ಮಧ್ಯಾಹ್ನ 03-00 – 04:30 ಸೂರ್ಯೋದಯ : 06-24 ಸೂರ್ಯಾಸ್ತ : 06-10 ಮುಸ್ಲಿಂ ದಿನಾಂಕ : 14 ರಬಿಉಲ್ಲಾವಲ್, ದಿನ ವಿಶೇಷ : ಅಮೃತ ಸಿದ್ಧಿ ಯೋಗ, ಟೆಬರ್‌ನ್ಯಾಕಲ್ಸ್, ಮೊದಲ ದಿನ (ಸುಖ್ಖೋತ್) – ಜ್ಯೂಯಿಷ್‌ಅ

ದೃಷ್ಟ ಸಂಖ್ಯೆ : 4, 12

ಮೇಷ: ನೀವು ಕೈಗೊಂಡ ಪೂರ್ವನಿಯೋಜಿತ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆದು ಹೋಗುವುದು. ಅನುಕಂಪಕ್ಕೆ ಅರ್ಹರಲ್ಲದವರಿಗೆ ಸಹಾಯ ಹಸ್ತ ಚಾಚಬೇಡಿ. ಕಬ್ಬಿಣ ದಾಸ್ತಾನುದಾರರಿಗೆ ಉತ್ತಮ ಆದಾಯ ಸಿಗಲಿದೆ.

ವೃಷಭ: ರಹಸ್ಯವಾಗಿ ಸಿಗುವ ಬೆಂಬಲದಿಂದ ನಿಮ್ಮ ಕನಸುಗಳು ನನಸಾಗಲಿದೆ. ಸಂಸಾರದ ವಿಷಯಗಳತ್ತ ಹೆಚ್ಚು ಗಮನ ಹರಿಸಬೇಕಾಗಲಿದೆ. ಶಸ್ತ್ರವೈದ್ಯ ವೃತ್ತಿಯವರಿಗೆ ಸವಾಲು ಎನಿಸುವ ಪರಿಸ್ಥಿತಿಯನ್ನು ಎದುರಿಸಬೇಕಾಗುವುದು.

ಮಿಥುನ: ತೊಂದರೆಗಳೆಲ್ಲಾ ಒಂದೊಂದಾಗಿ ಉಪಶಮನಗೊಳ್ಳುತ್ತಾ ಅಭಿವೃದ್ಧಿಯನ್ನು ಕಾಣುವಿರಿ. ಸಂಯಮದಿಂದ ನಡೆದುಕೊಳ್ಳುವುದು ಲಾಭವನ್ನು ತಂದುಕೊಡುವುದು. ಬ್ಯಾಂಕ್ ಅಧಿಕಾರಿಗಳಿಗೆ ವರ್ಗಾವಣೆಯ ಸಂಭವವಿದೆ.

ಕರ್ಕಾಟಕ: ನಿಮ್ಮ ಭಾವನೆಗಳಿಗೆ ನಿಮ್ಮ ಮಕ್ಕಳು ಅಥವಾ ನಿಮ್ಮ ಸಹಚರರು ಸ್ಪಂದಿಸದೇ ಇರುವುದು ನಿಮ್ಮ ಬೇಸರಕ್ಕೆ ಮುಖ್ಯ ಕಾರಣವಾಗುತ್ತದೆ. ನಿಮ್ಮ ಪರಿಶ್ರಮದಿಂದ ಆರ್ಥಿಕ ಸ್ಥಿತಿ ಕ್ರಮೇಣವಾಗಿ ಉತ್ತಮಗೊಳ್ಳಲಿದೆ.

ಸಿಂಹ: ದಾಂಪತ್ಯದಲ್ಲಿ ಆಗಾಗ ಸಮಸ್ಯೆಗಳು ತೋರಿಬಂದರೂ ಮುಂದಿನ ದಿನಗಳಲ್ಲಿ ಸಂತಸವಿದೆ. ಯಂತ್ರೋಪಕರಣಗಳ ಮಾರಾಟದಿಂದ ಮತ್ತು ಅದರ ಸೇವೆಯಿಂದ ಹೆಚ್ಚಿನ ಲಾಭ ಪಡೆಯುವಿರಿ. ತಂದೆ ನಿಮ್ಮ ನೆರವಿಗೆ ನಿಲ್ಲಲಿದ್ದಾರೆ.

ಕನ್ಯಾ: ಶುಭ ಕಾರ್ಯಗಳಿಗೆ ಹೆಚ್ಚು ಹಣ ವಿನಿಯೋಗವಾಗುವುದು. ಈ ದಿನ ಎದುರಾಗುವ ಸಂದಿಗ್ಧ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅವಲೋಕಿಸಿ ನಿಮ್ಮ ಇಷ್ಟದೇವರನ್ನು ಪ್ರಾರ್ಥಿಸಿ ತೀರ್ಮಾನ ಕೈಗೊಳ್ಳುವುದು ಉತ್ತಮ.

ತುಲಾ: ದಿಟ್ಟತನದ ಜೊತೆಗೆ ಸ್ವಲ್ಪ ತಂತ್ರಗಾರಿಕೆ ತೋರಿದರೆ ಅಧಿಕಾರಿಗಳ ಗಮನ ಸೆಳೆಯುವುದು ಕಷ್ಟವಾಗುವುದಿಲ್ಲ. ವಿಶ್ವಾಸದಲ್ಲಿ ಇಂದು ಯಾರಿಗೂ ಹಣವನ್ನು ನೀಡಬೇಡಿ. ಕಾಗದ ಪತ್ರಗಳ ನಿರ್ವಹಣೆಯಲ್ಲಿ ಎಚ್ಚರವಿರಲಿ.

ವೃಶ್ಚಿಕ: ಆತ್ಮವಿಶ್ವಾಸದಿಂದ ಹೊಸ ಯೋಜನೆ ಆರಂಭಿಸುವಿರಿ. ನೇಕಾರರಿಗೆ ಉತ್ತಮ ದಿನ. ವ್ಯಾಪಾರ ವ್ಯವಹಾರದಲ್ಲಿ ಮಂದಗತಿಯ ನಡೆ ಕಂಡರೂ ಅಭಿವೃದ್ಧಿ ಖಚಿತ. ಮನೆಗೆ ಹೊಸ ವಸ್ತುಗಳನ್ನು ಕೊಳ್ಳುವ ಯೋಗವಿದೆ.

ಧನು: ಹಲವು ಅಪರೂಪದ ಅವಕಾಶಗಳಿಂದ ವರ್ಚಸ್ಸನ್ನು ಬೆಳೆಸಿಕೊಳ್ಳುವಿರಿ. ಭೂ ಸಂಬಂಧದ ವ್ಯವಹಾರದಲ್ಲಿ ಹಣ ಹೂಡಿಕೆ ಮಾಡುವ ಮುನ್ನ ಎರಡೆರಡು ಬಾರಿ ಯೋಚಿಸುವುದು ಉತ್ತಮ. ಇಲ್ಲವಾದರೆ ಸಮಸ್ಯೆ ಎದುರಾಗುವುದು.

ಮಕರ: ಸಾಧಿಸಲೇಬೇಕೆಂಬ ಛಲವಿರುವ ಕಾರ್ಯಗಳೆಲ್ಲವೂ ಸಿದ್ಧಿಸಲಿದೆ. ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟ ಮತ್ತು ರಿಪೇರಿಯಿಂದ ಆದಾಯ ಹೆಚ್ಚುವುದು. ತಂದೆ ತಾಯಿಯ ಇಷ್ಟಾರ್ಥಗಳು ಪೂರ್ಣಗೊಳಿಸುವ ಬಗ್ಗೆ ಗಮನಹರಿಸಿ.


ಕುಂಭ: ನಿಮ್ಮ ಕೆಲಸಕ್ಕೆ ಸಮಯದ ಅಭಾವ ತೋರಲಿದೆ. ಆರ್ಥಿಕ ಬಲವನ್ನು ಮತ್ತು ನೆಮ್ಮದಿ ಕಡಿಮೆ ಹೊಂದಿರುವ ನಿಮಗೆ ಮಹಾಗಣಪತಿಯ ಆರಾಧನೆ ಶುಭವನ್ನುಂಟುಮಾಡುವುದು.

ಮೀನ: ಸಮರ್ಥವಾಗಿ ಯೋಜನೆ ಪೂರ್ಣಗೊಳಿಸುವಿರಿ, ಆದರೆ ಹಣಕಾಸಿನ ವಿಚಾರದಲ್ಲಿ ಮುಂಜಾಗ್ರತೆ ತೆಗೆದುಕೊಳ್ಳುವುದು ಉತ್ತಮ. ಗುರಿ ಸಾಧನೆಗಳ ಬಗ್ಗೆ ಲಕ್ಷ್ಯವಿರಿಸಲು ಮಕ್ಕಳಿಗೆ ಬುದ್ಧಿವಾದ ಹೇಳುವುದು ಒಳ್ಳೆಯದು.

ಪದಬಂಧ 5105 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚಕಚಕನೆ ನೇಯುವ ರಾಟೆ (3)
3.ಕಿತಾಪತಿ ಏರಿಸಿದ ಬಾವುಟ (3)
5.ಕಚಕ್ಕನೆ ಕತ್ತರಿಸಿದ ತಲೆಗೂದಲು (2)
6.ಗುಟುರು ಹಾಕುತ್ತಿರುವ ಗಂಡುಕುರಿ (3)
7.ನೆನಪಲ್ಲೇ ಇರುವ ನೆವ (2)
9.ತರ್ಕ ಮಾಡುವ ವ್ಯಾಪಾರಿ (3)
10.ಗಡಕ್ಕನೆ ಬಂದೆರಗಿದ ಗಂಡುಕೋತಿ (3)
11.ಹಾವಸೆ ಬೆಳೆದಲ್ಲಿ ಉಲ್ಟಾ ರಂಗೋಲಿ (2)
13.ಜನರ ಹತ್ತಿರವಿರುವ ತಾಯಿ (3)
15.ಅರಮನೆ ಮುಂದಿರುವ ಗಜ (2)
16.ಕಕ್ಷದಲ್ಲಿದ್ದು ಕಾಪಾಡುವವ! (3)
17.ವರ್ತಮಾನದ ಕುಣಿತ (3)

ಮೇಲಿಂದ ಕೆಳಕ್ಕೆ
1.ಚಮತ್ಕಾರಿ ಸ್ಪೂನು! (3)
2.ಕರದಲ್ಲಿ ಹಿಡಿದಿಹ ಚಿಪ್ಪು (3)
3.ಪರಿಮಳಯುಕ್ತ ನೀರು (3)
4.ನೆರೆ ಬಂದಾಗ ಉಲ್ಟಾ ಆಗಿರುವ ತಡಿಕೆ (3)
5.ಕತ್ತಿ ಹಿಡಿದು ತೋರುವ ಪಟ್ಟು (5)
8.ಈ ಪರಿ ಆದ ಬದಲಾವಣೆ (5)
12.ಹತ್ತಿ ಹಿಡಿದವನ ಸಮೀಪ (3)
13.ಧನಕನಕ ನೀಡಿದ ತಂದೆ (3)
14 ಸನ್ನಿಧಾನ ಸೇರುವಾಗಿನ ತಡ (3)
15.ಆ ಮಾನವನ ಮುಖ (3)



5104ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚದುರಂಗ 3.ಮದುಮಗ
5.ಯಾಚಕ 6.ದಿನಕರ
8.ರಿಯಾಯಿತಿ 10.ಕಬಳಿಸು
12.ಅವಸರ 14.ದಡಿಯ
15.ರಸಾಯನ 16.ತರಕಾರಿ

ಮೇಲಿಂದ ಕೆಳಕ್ಕೆ:
1.ಚತುಷ್ಪಾದಿ 2.ಗತ್ಯಂತರ
3.ಮಧುಕರಿ 4.ಗಣಪತಿ
7.ನವಾಬ 9.ಯಮಸ
10.ಕಳೇಬರ 11.ಸುದರ್ಶನ
12.ಅಯಸ್ಕಾಂತ 13.ರಹದಾರಿ

ಸುಡೊಕು 5491


2		6					5	
	4		5		6	3		2
3							6	
	2					9		4
			2	4	7			
	7					5		8
		9			8		4	
4		2						1
	6		4		2	7	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5490 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8



ಮುಲಾಯಂ ಸಿಂಗ್ ಅಂತ್ಯಕ್ರಿಯೆ ಇಂದು

ಗುರುಗ್ರಾಮ (ಪಿಟಿಐ): ಸಮಾಜವಾದಿ ಪಕ್ಷದ ನಾಯಕ ಮುಲಾಯಂ ಸಿಂಗ್ ಯಾದವ್ (82) ಅವರು ಗುರುಗ್ರಾಮದ ಮೇದಾಂತ ಆಸ್ಪತ್ರೆಯಲ್ಲಿ ಸೋಮವಾರ ಬೆಳಿಗ್ಗೆ ನಿಧನರಾದರು.

ತೀವ್ರ ಅನಾರೋಗ್ಯದ ಕಾರಣ ಮುಲಾಯಂ ಅವರಿಗೆ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಇದೇ 2ರಂದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. 'ನನ್ನ ತಂದೆ ಮತ್ತು ನಮ್ಮೆಲ್ಲರ ನೇತಾಜಿ ಇನ್ನಿಲ್ಲ' ಎಂದು ಮುಲಾಯಂ ಅವರ ಮಗ ಅಖಿಲೇಶ್ ಯಾದವ್ ಅವರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಮುಲಾಯಂ ಅವರ ಹುಟ್ಟೂರು ಉತ್ತರಪ್ರದೇಶದ ಇಟಾವಾ ಜಿಲ್ಲೆಯ ಸೈಫೈನಲ್ಲಿ ಮಂಗಳವಾರ ಅಪರಾಹ್ನ 3 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ.

ಮುಲಾಯಂ ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ. ರಾಜ್ಯದಲ್ಲಿ ಮೂರು ದಿನ ಶೋಕಾಚರಣೆ ಇರಲಿದೆ ಎಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ.

1989–91, 1993–95 ಮತ್ತು 2003–07ರ ಅವಧಿಯಲ್ಲಿ ಮೂರು ಬಾರಿ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿದ್ದರು. 1996–98ರ ಅವಧಿಯಲ್ಲಿ ರಕ್ಷಣಾ ಸಚಿವರಾಗಿದ್ದರು. 10 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು ಮತ್ತು ಏಳು ಬಾರಿ ಸಂಸದರಾಗಿದ್ದರು. ಸಂಸದರಾಗಿ ಮುಖ್ಯವಾಗಿ ಮೈನ್‌ಪುರಿ ಮತ್ತು ಆಜಂಗಢದಿಂದ ಗೆದ್ದಿದ್ದರು.

'ಸಮಾಜವಾದಿ' ಹಿನ್ನೆಲೆಯ ಮುಲಾಯಂ ಅವರು ರಾಜಕಾರಣದಲ್ಲಿ ಹೊಂದಾಣಿಕೆಗೆ ಸದಾ ಮುಕ್ತವಾಗಿದ್ದರು.



ಸಮಾಜವಾದಿ ಪಕ್ಷ ಸೇರಿದ್ದ ಎಸ್ ಬಂಗಾರಪ್ಪ ಅವರು 2005ರಲ್ಲಿ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ ಮುಲಾಯಂ ಸಿಂಗ್ ಅವರು ಪ್ರಚಾರಕ್ಕೆ ಬಂದಿದ್ದರು ಪ್ರಜಾವಾಣಿ ಆರ್ಕೈವ್ ಚಿತ್ರ

ಹಾಗಾಗಿಯೇ ಬಿಎಸ್‌ಪಿ, ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದ ಜತೆಗೆ ವಿವಿಧ ಸಂದರ್ಭಗಳಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದರು.

ಮೋದಿ ಅವರನ್ನು ಸಂಸತ್ತಿನಲ್ಲಿ ಹೊಗಳುವ ಮೂಲಕ 2019ರಲ್ಲಿ ಅಚ್ಚರಿ ಮೂಡಿಸಿದ್ದರು. ಮುಂದಿನ ಚುನಾವಣೆಯಲ್ಲಿಯೂ ಪ್ರಧಾನಿಯಾಗಿ ಮತ್ತೆ ಅಧಿಕಾರ ವಹಿಸಿಕೊಳ್ಳಲಿದ್ದೀರಿ ಎಂದು ಹೇಳಿದ್ದರು.

ರಾಜಕೀಯ ಕುಸ್ತಿ ಕಣದ ಪೈಲ್ವಾನ್

• ಜಯಸಿಂಹ ಆರ್.

ನುಡಿ ನಮನ

'ನಾನು ಅಖಾಡ ಬದಲಿಸಿದ್ದೇನೆ, ಕುಸ್ತಿಯನ್ನು ಬಿಟ್ಟಿಲ್ಲ'. 2021ರಲ್ಲಿ ಬಿಡುಗಡೆಯಾಗಿದ್ದ 'ಮೇ ಮುಲಾಯಂ ಸಿಂಗ್ ಯಾದವ್' ಚಲನಚಿತ್ರದ ಸಂಭಾಷಣೆ ಇದು. 1960ರ ದಶಕದಲ್ಲಿ ಮುಲಾಯಂ ಸಿಂಗ್ ಯಾದವ್ ರಾಜಕೀಯಕ್ಕೆ ಧುಮುಕಬೇಕು ಎಂಬ ತಮ್ಮ ನಿರ್ಧಾರವನ್ನು ಮನೆಯಲ್ಲಿ ಹೇಳಿದಾಗ, ಅವರ ತಮ್ಮ ಶಿವಪಾಲ್ ಯಾದವ್ ಆ ನಿರ್ಧಾರವನ್ನು ಪ್ರಶ್ನಿಸುತ್ತಾರೆ. ಆಗ ಮುಲಾಯಂ ಸಿಂಗ್ ಯಾದವ್ ಪಾತ್ರಧಾರಿ ಹೇಳುವ ಮಾತಿದು.

2022ರ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಪ್ರಚಾರದ ಅಂಗವಾಗಿ ಸಮಾಜವಾದಿ ಪಕ್ಷದ ಬೆಂಬಲದೊಂದಿಗೆ ಈ ಚಿತ್ರವನ್ನು ನಿರ್ಮಿಸಲಾಗಿತ್ತು. ಸಮಾಜವಾದಿ ಪಕ್ಷವೂ ಭಾರಿ ತಯಾರಿಯೊಂದಿಗೆ ಕಣಕ್ಕೆ ಇಳಿದಿತ್ತು. ಆದರೆ ಚಿತ್ರವಾಗಲೀ, ಪ್ರಚಾರವಾಗಲೀ ಪಕ್ಷದ ನೆರವಿಗೆ ಬರಲಿಲ್ಲ. ಪಕ್ಷವು ಸತತವಾಗಿ ಎರಡನೇ ಬಾರಿ ಹೀನಾಯವಾಗಿ ಸೋತಿತು. ಪಕ್ಷವು ಈ ರೀತಿ ಸೋಲುತ್ತಿರುವುದು ಇದೇ ಮೊದಲಲ್ಲ. ಇದೇ ಮಾತು ಮುಲಾಯಂ ಸಿಂಗ್ ಅವರಿಗೂ ಅನ್ವಯವಾಗುತ್ತದೆ.

ಮುಲಾಯಂ ಅವರು ಮೂರು ಬಾರಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರೂ, ಒಂದು ಬಾರಿಯೂ ಐದು ವರ್ಷಗಳ ಅವಧಿಯನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಅವರ ರಾಜಕೀಯ ಸಿದ್ಧಾಂತ ಮತ್ತು ರಾಜಕೀಯ ನಿಲುವು ಅವರ ಕುರ್ಚಿಯನ್ನು ಹಲವು ಬಾರಿ ಕಸಿದುಕೊಂಡಿತು.

1967ರಲ್ಲಿ ಮೊದಲ ಬಾರಿಗೆ ಶಾಸಕನಾಗಿ ಆಯ್ಕೆಯಾಗಿದ್ದ ಮುಲಾಯಂ ಅನಂತರದ 22 ವರ್ಷ ಬಳಿಕ (1989ರಲ್ಲಿ) ಮುಖ್ಯಮಂತ್ರಿ ಹುದ್ದೆಗೆ ಏರಿದ್ದರು. 1989ರಲ್ಲಿ ನಡೆದ ಚುನಾವಣೆಯಲ್ಲಿ ಜನತಾ ದಳ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಕಾಂಗ್ರೆಸ್ ಅನ್ನು ಅಧಿಕಾರದಿಂದ ದೂರ ಇಡುವ ಒಂದೇ ಉದ್ದೇಶದಿಂದ ಜನತಾ ದಳಕ್ಕೆ ಬಿಜೆಪಿ ಬಾಹ್ಯ ಬೆಂಬಲ ನೀಡಿತ್ತು. ಅದೇ ಸಂದರ್ಭದಲ್ಲಿ ಎಲ್.ಕೆ.ಅಡ್ವಾಣಿ ನೇತೃತ್ವದಲ್ಲಿ ಬಿಜೆಪಿಯು ರಥಯಾತ್ರೆ ಆರಂಭಿಸಿತ್ತು. ಬಾಬರಿ ಮಸೀದಿ ಜಾಗದಲ್ಲಿ ರಾಮಮಂದಿರ ನಿರ್ಮಿಸಬೇಕು ಎಂದು ಬಿಜೆಪಿ ಈ ರಥಯಾತ್ರೆ ಆಯೋಜಿಸಿತ್ತು. ಈ ರಥಯಾತ್ರೆ ಮತ್ತು ಬೇಡಿಕೆ ಎರಡನ್ನೂ ಮುಲಾಯಂ ವಿರೋಧಿಸಿದ್ದರು.

1990ರ ಅಕ್ಟೋಬರ್ ಕೊನೆಯ ವಾರ. ಸಾವಿರಾರು ಕರಸೇವಕರು ಬಾಬರಿ ಮಸೀದಿಗೆ ನುಗ್ಗಿ, ಗುಮ್ಮಟದ ಮೇಲೆ ಕೇಸರಿ ಧ್ವಜ ಹಾರಿಸಿದರು. ಪರಿಸ್ಥಿತಿ ಕೈಮೀರಿದ ಕಾರಣ ಪೊಲೀಸರು ಗುಂಡು ಹಾರಿಸಿದರು. ಕರಸೇವಕರು ಚದುರಿದರು. ನವೆಂಬರ್ 2ರಂದು ಕರಸೇವಕರು ಎರಡನೇ ಬಾರಿ ಮಸೀದಿಯತ್ತ ನುಗ್ಗಿದ್ದರು. ಮುಲಾಯಂ ಅವರ ಆದೇಶದ ಮೇರೆಗೆ ಪೊಲೀಸರು ಮತ್ತೆ ಗುಂಡು ಹಾರಿಸಿದರು. 20ಕ್ಕೂ ಹೆಚ್ಚು ಜನರು ಮೃತಪಟ್ಟರು. ಮುಲಾಯಂ ಸರ್ಕಾರಕ್ಕೆ ನೀಡಿದ್ದ ಬಾಹ್ಯ ಬೆಂಬಲವನ್ನು ಬಿಜೆಪಿ ವಾಪಸ್ ಪಡೆಯಿತು. ಮುಲಾಯಂ ಅವರನ್ನು 'ಮೌಲಾನಾ ಮುಲಾಯಂ' ಎಂದು ಜರಿಯಿತು. ಸರ್ಕಾರಕ್ಕೆ ಕಾಂಗ್ರೆಸ್ ಬೆಂಬಲ ಘೋಷಿಸಿತು. ಆದರೆ 1991ರಲ್ಲಿ ಸರ್ಕಾರ ಉರುಳಿಸಿತು.

1992ರಲ್ಲಿ ಸಮಾಜವಾದಿ ಪಕ್ಷವನ್ನು ಮುಲಾಯಂ ಸ್ಥಾಪಿಸಿದರು. 1992ರಲ್ಲಿ ಬಾಬರಿ ಮಸೀದಿ ಧ್ವಂಸವಾದ ನಂತರ, ಮುಸ್ಲಿಮರು ಮುಲಾಯಂ ಅವರ ಸಮಾಜವಾದಿ ಪಕ್ಷದತ್ತ ಹೊರಳಿದರು. 1993ರ ಚುನಾವಣೆಯಲ್ಲಿ ಯಾದವರು ಮತ್ತು ಮುಸ್ಲಿಮರು ಮುಲಾಯಂ ಅವರಿಗೆ ಮತ ನೀಡಿದರು. ಬಿಎಸ್‌ಪಿ, ಮುಲಾಯಂಗೆ ಬೆಂಬಲ ಘೋಷಿಸಿತ್ತು. 1995ರಲ್ಲಿ ಬಿಎಸ್‌ಪಿ ಬೆಂಬಲ ವಾಪಸ್ ಪಡೆದ ಕಾರಣ ಮುಲಾಯಂ ಅವರ ಸರ್ಕಾರ ಬಿತ್ತು.

ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಮುಲಾಯಂ ಸಂಸತ್ತಿಗೂ ಹೋದರು. ಅದಕ್ಕೂ ಮುನ್ನ ಮುಲಾಯಂ ಅವರು ಸೋನಿಯಾ ನಾಯಕತ್ವ ವಿರೋಧಿಸಿ, ವಿದೇಶಿ ಮಹಿಳೆ ಎಂದು ಜರಿದಿದ್ದರು. 1996ರಲ್ಲಿ ಮುಲಾಯಂ ಅವರು ಸಂಯುಕ್ತ ರಂಗ ನೇತೃತ್ವದ ಸರ್ಕಾರದ ಪ್ರಧಾನಿಯಾಗುವ ಸಾಧ್ಯತೆ ಅತ್ಯಧಿಕವಾಗಿತ್ತು. ಆದರೆ, ಸೋನಿಯಾ ಅವರನ್ನು ಜರಿದಿದ್ದ ಕಾರಣಕ್ಕೆ ಆ ಅವಕಾಶವನ್ನು ಮುಲಾಯಂ ಕಳೆದುಕೊಂಡರು ಎಂದು ಆಗ ಹೇಳಲಾಗಿತ್ತು.

2002ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಎಸ್‌ಪಿ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಆದರೆ ಸರ್ಕಾರ ರಚಿಸಿದ್ದು ಬಿಎಸ್‌ಪಿ-ಬಿಜೆಪಿ. ಒಂದೇ ವರ್ಷದಲ್ಲಿ ಆ ಸರ್ಕಾರ ಬಿತ್ತು. 2003ರಲ್ಲಿ ಬಿಎಸ್‌ಪಿ ಬೆಂಬಲದೊಂದಿಗೆ ಮುಲಾಯಂ ಮತ್ತೆ ಸರ್ಕಾರ ರಚಿಸಿದರು.

ಮುಲಾಯಂ ಅವರು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಭಾಗವಾಗಿದ್ದರೂ, ಸರ್ಕಾರದ ಹಲವು ನೀತಿಗಳನ್ನು ಮುಲಾಯಂ ವಿರೋಧಿಸುತ್ತಾ ಬಂದಿದ್ದರು. 2012ರಲ್ಲಿ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಎಸ್‌ಪಿ ಪೂರ್ಣ ಬಹುಮತ ಪಡೆಯಿತು, ಸರ್ಕಾರ ರಚಿಸಿತು. ಆದರೆ ಮುಖ್ಯಮಂತ್ರಿಯಾಗಿದ್ದು, ಮುಲಾಯಂ ಅವರ ಮಗ ಅಖಿಲೇಶ್ ಯಾದವ್.

'1990ರಲ್ಲಿ ಕರಸೇವಕರ ಮೇಲೆ ಗುಂಡು ಹಾರಿಸಲು ಆದೇಶ ನೀಡಿದ್ದು ಯಾರು?' ಎಂದು ಬಿಜೆಪಿ ಇಂದಿಗೂ ಮುಲಾಯಂ ಅವರನ್ನು ಟೀಕಿಸುತ್ತದೆ. ಆದರೆ ಮುಲಾಯಂ ಮಾತ್ರ ತಮ್ಮ ನಿರ್ಧಾರ ಸರಿ ಎಂದೇ ಪ್ರತಿಪಾದಿಸಿದ್ದರು. ಈ ಬಗ್ಗೆ ಪತ್ರಕರ್ತರು ಕೇಳಿದ್ದ ಪ್ರಶ್ನೆಗೆ ಮುಲಾಯಂ, 'ನನ್ನ ನಿರ್ಧಾರ ಸರಿಯಾಗಿತ್ತು, ಆ ನಿರ್ಧಾರದಿಂದ ಬಹಳ ನೋವೂ ಆಗಿದೆ. ಆದರೆ, ದೇಶದ ಹಿತಾಸಕ್ತಿಗಾಗಿ ನಾನು ಆ ನಿರ್ಧಾರ ತೆಗೆದುಕೊಂಡೆ' ಎಂದು ಹೇಳಿದ್ದರು.



ಲೋಹಿಯಾ ಪ್ರಭಾವದಿಂದ ರಾಜಕಾರಣಕ್ಕೆ

ಉತ್ತರ ಪ್ರದೇಶದ ಇಟಾವಾ ಜಿಲ್ಲೆಯ ಬಡ ಕೃಷಿ ಕುಟುಂಬದಲ್ಲಿ 1939ರ ನವೆಂಬರ್ 22ರಂದು ಜನಿಸಿದ್ದ ಮುಲಾಯಂ ಸಿಂಗ್ ಅವರು, ಆರು ಮಕ್ಕಳಲ್ಲಿ ಒಬ್ಬರು. ಬಡತನದಲ್ಲೂ ಎಲ್ಲರಿಗೂ ಶಾಲಾ ಶಿಕ್ಷಣವನ್ನು ಅವರ ತಂದೆ–ತಾಯಿ ನೀಡಿದ್ದರು. ಮುಲಾಯಂಗೆ ಓದಿನಂತೆಯೇ ಕುಸ್ತಿಯಲ್ಲಿ ಹೆಚ್ಚು ಆಸಕ್ತಿ. ಶಾಲಾ ದಿನಗಳಲ್ಲೇ ಜಿಲ್ಲಾ ಮಟ್ಟದ ಚಾಂಪಿಯನ್ ಆಗಿದ್ದರು. ಪೈಲ್ವಾನ್ ಆಗಬೇಕು ಎಂಬುದು ಅವರ ತಂದೆಯ ಒತ್ತಾಸೆಯಾಗಿತ್ತು. ಆದರೆ ಕಾಲೇಜು ಮೆಟ್ಟಿಲು ಏರಬೇಕೆಂಬುದು ಅವರ ಬಯಕೆಯಾಗಿತ್ತು. ಆ ನಿರ್ಧಾರ ಅವರ ಬದುಕನ್ನೇ ಬದಲಿಸಿತು.

1950ರ ದಶಕದಲ್ಲಿ ಲೋಹಿಯಾ ಅವರ ಬರಹಗಳು ಮತ್ತು ಚಳವಳಿ ಉತ್ತುಂಗದಲ್ಲಿ ಇತ್ತು. ತರಗತಿಯಲ್ಲಿ ಕಲಿಸುತ್ತಿದ್ದ ಪಾಠಗಳು, ಸಮಾಜದಲ್ಲಿ ಪ್ರತ್ಯಕ್ಷ ರೂಪದಲ್ಲಿ ಅವರಿಗೆ ಲಭ್ಯವಿದ್ದವು. 15–16ನೇ ವಯಸ್ಸಿನಲ್ಲಿಯೇ ಪ್ರತಿಭಟನೆಗಳಲ್ಲಿ ಮುಲಾಯಂ ಭಾಗಿಯಾಗಲು ಆರಂಭಿಸಿದ್ದರು. ರಾಜಕೀಯದಲ್ಲಿನ ಅವರ ಆಸಕ್ತಿ ಬಿ.ಎ ಆನರ್ಸ್, ಆನಂತರ ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯವರೆಗೆ ಕರೆದೊಯ್ದಿತ್ತು. ಅದು ಅವರಿಗೆ ಕಾಲೇಜಿನಲ್ಲಿ ಪಾಠ ಮಾಡುವ ಉದ್ಯೋಗವನ್ನೂ ನೀಡಿತ್ತು. ರಾಜಕೀಯಕ್ಕೆ ಬಂದ ನಂತರ ಕುಸ್ತಿ ಮತ್ತು ಪ್ರಾಧ್ಯಾಪಕ ಹುದ್ದೆಯನ್ನು ಅವರು ತ್ಯಜಿಸಿದರು.



ಬೋಧಕೇತರರ ವರ್ಗಕ್ಕೆ ನಿಯಮ

ಒಂದನೇ ಪುಟದಿಂದ...

ಇಲಾಖೆಯ ಆಡಳಿತದಲ್ಲಿ ಸುಧಾರಣೆ ತರಲು ಬೋಧಕೇತರ ಸಿಬ್ಬಂದಿಯ ವರ್ಗಾವಣೆಗೆ ಹೊಸ ನಿಯಮ ರೂಪಿಸಲು ತಕ್ಷಣ ಕ್ರಮ ಕೈಗೊಳ್ಳುವಂತೆ ಸಚಿವ ಬಿ.ಸಿ.ನಾಗೇಶ್ ಅವರು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದರು.

ಉದ್ದೇಶಿತ ಹೊಸ ನಿಯಮದ ಅನ್ವಯ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕಚೇರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಬೋಧಕೇತರ ಅಧಿಕಾರಿ, ಸಿಬ್ಬಂದಿ 5 ವರ್ಷಕ್ಕಿಂತ ಮೇಲ್ಪಟ್ಟು ಕಾರ್ಯನಿರ್ವಹಿಸುವಂತಿಲ್ಲ. ಒಂದು ಹುದ್ದೆಯಿಂದ ಪದೋನ್ನತಿ ಹೊಂದಿದ್ದರೆ ಒಟ್ಟು ಅವಧಿ 8 ವರ್ಷ ಮೀರುವಂತಿಲ್ಲ. ಅವರ ಒಟ್ಟಾರೆ ಸೇವಾವಧಿಯಲ್ಲಿ ಹಿಂದೆ ಕಾರ್ಯನಿರ್ವಹಿಸಿದ್ದ ಕಚೇರಿಗೆ ಮತ್ತೆಂದೂ ನಿಯೋಜನೆ ಮೇರೆಗೂ ಹೋಗುವಂತಿಲ್ಲ.

ಗ್ರೂಪ್ 'ಡಿ', ಬೆರಳಚ್ಚು ಸಹಾಯಕರು, ಶೀಘ್ರಲಿಪಿಕಾರರು, ದ್ವಿತೀಯದರ್ಜೆ ಸಹಾಯಕರು, ಪ್ರಥಮದರ್ಜೆ ಸಹಾಯಕರನ್ನು ಶಾಲಾ–ಕಾಲೇಜುಗಳಿಗೆ ವರ್ಗಾಯಿಸುವುದು, ಅಧೀಕ್ಷಕರು, ಪತ್ರಾಂಕಿತ ವ್ಯವಸ್ಥಾಪಕರು, ಪತ್ರಾಂಕಿತ ಸಹಾಯಕರನ್ನು ಬೇರೆ ತಾಲ್ಲೂಕು, ಜಿಲ್ಲೆಗಳಿಗೆ ವರ್ಗಾವಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಹೀಗೆ ವರ್ಗಾವಣೆ ಮಾಡುವಾಗ ಅಂಗವಿಕಲರು, ವಿಧವೆಯರಿಗೆ ಸ್ಥಳ ನಿಯುಕ್ತಿಯಲ್ಲಿ ಆದ್ಯತೆ ನೀಡಲು ಸಮ್ಮತಿಸಲಾಗಿದೆ.

ಶಿಕ್ಷಣ ಇಲಾಖೆಯ ಆಯುಕ್ತರು, ಹೆಚ್ಚುವರಿ ಆಯುಕ್ತರು, ನಿರ್ದೇಶಕರು, ಸಚಿವಾಲಯಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು, ಸಿಬ್ಬಂದಿ ಎರಡು ವರ್ಷಕ್ಕಿಂತ ಹೆಚ್ಚು ಸಮಯ ಒಂದೇ ವಿಷಯದ ನಿರ್ವಹಣೆ ಮಾಡುವಂತಿಲ್ಲ. ಐದು ವರ್ಷದ ಅವಧಿ ಮುಗಿದ ಎಲ್ಲರನ್ನೂ ಶಾಲೆ, ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಕಡ್ಡಾಯವಾಗಿ ವರ್ಗಾವಣೆ ಮಾಡಲು ಹಾಗೂ ಈಗಾಗಲೇ ಶಾಲೆ, ಕಾಲೇಜುಗಳಲ್ಲಿ ಕೆಲಸ ಮಾಡಿದವರನ್ನು ಉನ್ನತ ಕಚೇರಿಗಳಿಗೆ ನಿಯೋಜಿಸಲು ನಿಯಮ ರೂಪಿಸಲಾಗಿದೆ.

ಆಯಕಟ್ಟಿನ ಹುದ್ದೆಗಾಗಿ ಲಾಬಿ

ಲೋಕಾಯುಕ್ತ, ಇಲಾಖಾ ವಿಚಾರಣೆ ಸೇರಿದಂತೆ ವಿವಿಧ ಆರೋಪಗಳಿದ್ದ 33 ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು (ಬಿಇಒ) ಸರ್ಕಾರ ಈಚೆಗೆ ನಾನ್ ಎಕ್ಸಿಕ್ಯೂಟಿವ್ ಹುದ್ದೆಗಳಿಗೆ ವರ್ಗಾಯಿಸಿತ್ತು.

ಅವರಲ್ಲಿ ಕೆಲವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಿಂದ ತಡೆಯಾಜ್ಞೆ ತಂದು ಅದೇ ಹುದ್ದೆಗಳಲ್ಲೇ ಮುಂದುವರಿದಿದ್ದಾರೆ. ಬೇರೆ ಇಲಾಖೆಗಳಿಗೆ ನಿಯೋಜನೆಗೊಂಡಿದ್ದ ಅಧಿಕಾರಿಗಳು, ಸಿಬ್ಬಂದಿಯನ್ನು ಮಾತ್ರ ಇಲಾಖೆಗೆ ಮರಳಿ ಕರೆಸಿಕೊಳ್ಳಲು ಆದೇಶ ಹೊರಡಿಸಿದ್ದರೂ, ಹೆಚ್ಚಿನವರು ರಾಜಕೀಯ ಒತ್ತಡ ಹಾಗೂ ಪ್ರಭಾವವನ್ನು ಬಳಸಿ ಅಲ್ಲೇ ಉಳಿದುಕೊಂಡಿದ್ದಾರೆ ಎಂದು ಇಲಾಖೆಯ ಮೂಲಗಳು ಹೇಳಿವೆ.

ಸ್ವಾತಂತ್ರ್ಯಕ್ಕಾಗಿ ಸಂತೋಷ್ ಹೋರಾಡಿದ್ದಾರೆಯೇ: ಸಿದ್ದರಾಮಯ್ಯ ಪ್ರಶ್ನೆ

ಕೊಪ್ಪಳ: 'ದೇಶದ ಸ್ವಾತಂತ್ರ್ಯಕ್ಕಾಗಿ ಮಹಾತ್ಮ ಗಾಂಧೀಜಿ ಸೇರಿ ಅನೇಕರು ಹೋರಾಡಿದ್ದಾರೆ. ಆದರೆ, ಬಿ.ಎಲ್. ಸಂತೋಷ್ ಒಳಗೊಂಡಂತೆ ಬಿಜೆಪಿಯ ಯಾವ ನಾಯಕರಾದರೂ ದೇಶಕ್ಕಾಗಿ ಹೋರಾಡಿದ್ದಾರೆಯೇ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

'ಇತಿಹಾಸ ತಿರುಚಿದವರು ಎಂದಾದರೂ ಸತ್ಯ ಹೇಳಲು ಸಾಧ್ಯವೇ? ಸ್ವಾತಂತ್ರ್ಯಕ್ಕಾಗಿ ಬಿಜೆಪಿಯ ಒಬ್ಬ ನಾಯಕರಾದರೂ ಜೀವ ಕೊಟ್ಟಿದ್ದಾರೆಯೇ? ಗಾಂಧೀಜಿಯವರನ್ನು ಕೊಂದ ಗೋಡ್ಸೆಗೆ ಬಿಜೆಪಿಯವರು ಪೂಜೆಸುತ್ತಾರೆ' ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

'ಭಾರತ್ ಜೋಡೊ ಯಾತ್ರೆ ರಾಜಕೀಯ ಉದ್ದೇಶಕ್ಕಾಗಿ ಅಲ್ಲ. ಕೋಮುದ್ವೇಷದಿಂದ ತತ್ತರಿಸಿರುವ ಮನಸ್ಸುಗಳನ್ನು ಒಂದುಗೂಡಿಸುವುದು ಈ ಯಾತ್ರೆಯ ಉದ್ದೇಶ. ಇದರ ರಾಜ್ಯದ ಏಕೈಕ ಸಮಾವೇಶ ಅಕ್ಟೋಬರ್ 15ರಂದು ಬಳ್ಳಾರಿಯ ಮುನ್ಸಿಪಲ್ ಮೈದಾನದಲ್ಲಿ ಜರುಗಲಿದೆ' ಎಂದರು.

'ಆರೋಗ್ಯ ಸುಧಾರಣೆಗೆ ಕಾಂಗ್ರೆಸ್ ನಾಯಕರು ಯಾತ್ರೆ ನಡೆಸಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ 'ಬಸವರಾಜ ಬೊಮ್ಮಾಯಿ ಮತ್ತು ಬಿ.ಎಸ್. ಯಡಿಯೂರಪ್ಪ ಅವರು ಯಾಕೆ ಈಗ ಮಾಡುತ್ತಿದ್ದಾರೆ' ಎಂದು ಪ್ರಶ್ನಿಸಿದರು.

'ದೇವರ ಮೊಸಳೆ'ಗೆ ವಿದಾಯ

ಒಂದನೇ ಪುಟದಿಂದ

ಸಂಸದ ರಾಜ್ ಮೋಹನ್ ಉಣ್ಣಿತ್ತಾನ್, ಕಾಸರಗೋಡು ಶಾಸಕ ಎನ್.ಎ. ನೆಲ್ಲಿಕ್ಕುನ್ನು, ಮಂಜೇಶ್ವರ ಶಾಸಕ ಎ.ಕೆ.ಎಂ. ಅಶ್ರಫ್ ಸೇರಿದಂತೆ ಈ ಭಾಗದ ಜನಪ್ರತಿನಿಧಿಗಳು, ನೂರಾರು ಭಕ್ತರು ಅಂತಿಮ ದರ್ಶನ ಪಡೆದರು. ನಂತರ ದೇವಾಲಯದ ಎದುರು ದೇಹವನ್ನು ಭೂಮಿಯಲ್ಲಿ ಹೂಳಲಾಯಿತು.

ಬಬಿಯಾ: 'ಬ್ರಿಟಿಷ್ ಆಡಳಿತ ಅವಧಿಯಲ್ಲಿ ಅನಂತಪುರ ದೇವಾಲಯದ ಸರೋವರದಲ್ಲಿ 'ಬಬಿಯಾ' ಎಂಬ ಹೆಸರಿನ ಮೊಸಳೆ ಬದುಕಿತ್ತು. ಒಮ್ಮೆ ಅನಂತಪುರದಲ್ಲಿ ಬ್ರಿಟಿಷ್ ಮಿಲಿಟರಿ ಕ್ಯಾಂಪ್ ನಡೆದಾಗ ಸೇನೆಯ ಹಿರಿಯ ಅಧಿಕಾರಿಯೊಬ್ಬರು ಬಬಿಯಾ ಎಂದು ಕರೆದರು. ಆಗ ಹೊರಬಂದ ಆ ಮೊಸಳೆಯನ್ನು ಗುಂಡಿಕ್ಕಿ ಕೊಂದಿದ್ದರು. ನಂತರ ತಮ್ಮ ಜೀಪ್‌ನಲ್ಲಿ ಮೊಸಳೆಯ ಮೃತದೇಹ ಕೊಂಡೊಯ್ದಿದ್ದರು. ಆದರೆ, ಅದೇ ದಿನ ಮಧ್ಯಾಹ್ನ ಪೂಜೆಯ ನಂತರ ಅರ್ಚಕರು 'ಬಬಿಯಾ' ಎಂದು ಕರೆದಾಗ ಮೊಸಳೆ ಮೇಲಕ್ಕೆ ಬಂದು ನೈವೇದ್ಯ ಸೇವಿಸಿತ್ತು ಎಂಬ ಪ್ರತೀತಿ ಇದೆ' ಎನ್ನುತ್ತಾರೆ ಈ ಭಾಗದ ಹಿರಿಯರು.

ಹಿಂದೆ ಕೋಳಿಯನ್ನು ಹರಕೆಯಾಗಿ ಈ ಮೊಸಳೆಗೆ ನೀಡುವ ಪದ್ಧತಿ ಇತ್ತು. ಆದರೆ, 2002ರಲ್ಲಿ ನಡೆದ ಅಷ್ಟಮಂಗಲ ಪ್ರಶ್ನೆಯಲ್ಲಿ ಕೋಳಿಯನ್ನು ನೀಡುವುದು ಸರಿಯಲ್ಲ ಎಂದು ಕಂಡುಬಂದ ನಂತರ ಈ ಹರಕೆಯ ಕ್ರಮವನ್ನು ನಿಲ್ಲಿಸಲಾಗಿತ್ತು. ಈ ಮೊಸಳೆ ಇಲ್ಲಿಗೆ ಹೇಗೆ ಬಂತು ಎಂಬುದು ಯಾರಿಗೂ ಗೊತ್ತಿಲ್ಲ ಎನ್ನುತ್ತಾರೆ ಅವರು.

ಉದ್ಧವ್ ಠಾಕ್ರೆ ಬಣದ ಚಿಹ್ನೆ 'ಪಂಜು'

ನವದೆಹಲಿ (ಪಿಟಿಐ): ಚುನಾವಣಾ ಆಯೋಗವು ಶಿವಸೇನಾದ ಉದ್ಧವ್ ಠಾಕ್ರೆ ಬಣಕ್ಕೆ ಸೋಮವಾರ ಪಂಜಿನ ಚಿಹ್ನೆಯನ್ನು ಹಂಚಿಕೆ ಮಾಡಿದೆ.

ತ್ರಿಶೂಲದ ಚಿಹ್ನೆಯನ್ನು ಹಂಚಿಕೆ ಮಾಡುವಂತೆ ಉದ್ಧವ್ ಬಣ ಮಾಡಿದ್ದ ಮನವಿಯನ್ನು ಆಯೋಗ ತಿರಸ್ಕರಿಸಿದೆ.

ಉದ್ಧವ್ ಬಣಕ್ಕೆ 'ಶಿವಸೇನಾ–ಉದ್ಧವ್ ಬಾಳಾಸಾಹೇಬ್ ಠಾಕ್ರೆ' ಹಾಗೂ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಬಣಕ್ಕೆ 'ಬಾಳಾಸಾಹೇಬಾಚಿ ಶಿವಸೇನಾ (ಬಾಳಾಸಾಹೇಬರ ಶಿವಸೇನಾ) ಎಂಬ ಹೆಸರುಗಳನ್ನೂ ಆಯೋಗ ಹಂಚಿಕೆ ಮಾಡಿದೆ. ಉಭಯ ಬಣಗಳು ಈ ಹೆಸರುಗಳ ಅಡಿಯಲ್ಲೇ ಮುಂಬರುವ ಉಪಚುನಾವಣೆಯನ್ನು ಎದುರಿಸಬೇಕಾಗುತ್ತದೆ.

ಮಂಗಳವಾರ ಬೆಳಿಗ್ಗೆ 10 ಗಂಟೆಯೊಳಗೆ ತಮ್ಮ ಆಯ್ಕೆಯ ಮೂರು ಚಿಹ್ನೆಗಳನ್ನು ಆಯೋಗಕ್ಕೆ ಸಲ್ಲಿಸುವಂತೆ ಶಿಂದೆ ಬಣಕ್ಕೆ ಚುನಾವಣಾ ಆಯೋಗ ಸೂಚಿಸಿದೆ.

ಶಿವಸೇನಾದ ಹೆಸರು ಅಥವಾ ಚಿಹ್ನೆಯಾದ ಬಿಲ್ಲು–ಬಾಣವನ್ನು ಉಪಯೋಗಿಸುವಂತಿಲ್ಲ ಎಂದು ಚುನಾವಣಾ ಆಯೋಗ ಉಭಯ ಬಣಗಳಿಗೆ ಶನಿವಾರ ಸೂಚಿಸಿತ್ತು. ಹೀಗಾಗಿ ಎರಡು ಬಣಗಳು ಹೊಸ ಚಿಹ್ನೆ ಮತ್ತು ಹೆಸರುಗಳನ್ನು ಆಯೋಗಕ್ಕೆ ಸಲ್ಲಿಸಿದ್ದವು.

ಹೈಕೋರ್ಟ್ ಮೆಟ್ಟಿಲೇರಿದ ಠಾಕ್ರೆ ಬಣ: ಶಿವಸೇನಾ ಚಿಹ್ನೆ ಮತ್ತು ಹೆಸರನ್ನು ಚುನಾವಣಾ ಆಯೋಗವು ಮುಟ್ಟುಗೋಲು ಹಾಕಿಕೊಂಡಿರುವುದನ್ನು ಪ್ರಶ್ನಿಸಿ ಉದ್ಧವ್ ಠಾಕ್ರೆ ಬಣ ಸೋಮವಾರ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದೆ.

ಕೆಜಿಐಡಿ: ಆನ್‌ಲೈನ್‌ನಲ್ಲೇ ಎಲ್ಲ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸರ್ಕಾರಿ ವಿಮಾ ಇಲಾಖೆ (ಕೆಜಿಐಡಿ) ಸೇವೆಗಳು 22 ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಂಪೂರ್ಣ ಕಂಪ್ಯೂಟರೀಕರಣಗೊಂಡಿದೆ. ಕೆಜಿಐಡಿ ಪಾಲಿಸಿಗಳ ಮೇಲೆ ಸಾಲಪಡೆಯುವುದು, ಅವಧಿ ಮುಗಿದ ಪಾಲಿಸಿಗಳ ಮೊತ್ತ ಪಾವತಿ ಸೇರಿದಂತೆ ಎಲ್ಲ ಪ್ರಕ್ರಿಯೆಗಳನ್ನು ಆನ್‌ಲೈನ್ ಮೂಲಕವೇ ನಡೆಸುವಂತೆ ಆದೇಶ ಹೊರಡಿಸಲಾಗಿದೆ.

ಕೆಜಿಐಡಿ ಸೇವೆಗಳನ್ನು ಕಂಪ್ಯೂಟರೀಕರಣ ಮಾಡುವ ಯೋಜನೆಯನ್ನು ಬೆಂಗಳೂರು ನಗರ, ಬೆಳಗಾವಿ, ಚಿಕ್ಕಮಗಳೂರು, ಧಾರವಾಡ, ಮಂಡ್ಯ, ಮೈಸೂರು, ಕೊಡಗು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಲಾಗಿತ್ತು.

ಸೋಮವಾರದಿಂದ 22 ಜಿಲ್ಲೆಗಳಲ್ಲಿ ಜಾರಿಗೊಳಿಸಿದ್ದು, ನಂತರ ಎಲ್ಲ ಜಿಲ್ಲೆಗಳಲ್ಲೂ ಅನುಷ್ಠಾನಕ್ಕೆ ತರಲಾಗುವುದು ಎಂದು ಕೆಜಿಐಡಿ ನಿರ್ದೇಶಕರು ತಿಳಿಸಿದ್ದಾರೆ.

'ಇನ್ನು ಮುಂದೆ ಕೆಜಿಐಡಿ ಪಾಲಿಸಿಗಳ ಮೇಲೆ ಸಾಲ ಮಂಜೂರಾತಿ ಹಾಗೂ ಅವಧಿ ಮುಗಿದ ಪ್ರಕರಣಗಳ ಇತ್ಯರ್ಥಕ್ಕೆ ಭೌತಿಕ ಕಡತಗಳನ್ನು ನಿರ್ವಹಿಸುವಂತಿಲ್ಲ. ಆನ್‌ಲೈನ್‌ನಲ್ಲಿ ತಂತ್ರಾಂಶದ ಮೂಲಕವೇ ಪ್ರಕ್ರಿಯೆ ನಡೆಸಿ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕು. ಭೌತಿಕವಾಗಿ ಕಡತ ನಿರ್ವಹಣೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು' ಎಂದು ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

'ಹೆಚ್ಚುವರಿ ಹಣ ಪಾವತಿಯಾದರೆ ಸಂಬಂಧಿಸಿದ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ. ಉಪ ನಿರ್ದೇಶಕರು ಮತ್ತು ನಿರ್ದೇಶಕರಿಂದ ಅನುಮೋದನೆ ಪಡೆಯಬೇಕಾದ ಪ್ರಕರಣಗಳಲ್ಲೂ ಭೌತಿಕ ಕಡತ ಸಲ್ಲಿಸುವ ಅಗತ್ಯವಿಲ್ಲ. ಆನ್‌ಲೈನ್ ಮೂಲಕವೇ ಅನುಮೋದನೆ ಕೋರಬೇಕು' ಎಂದು ಸೂಚಿಸಿದ್ದಾರೆ.

ಬಿಜೆಪಿ: ಕುಟುಂಬಕ್ಕೊಂದೇ ಟಿಕೆಟ್

ಒಂದನೇ ಪುಟದಿಂದ...

ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ಅವರೂ ಟಿಕೆಟ್ ಆಕಾಂಕ್ಷಿಯಾಗಿದ್ದು, ಶಿಕಾರಿಪುರದಿಂದ ಸ್ಪರ್ಧಿಸಲಿದ್ದಾರೆ ಎಂದು ಯಡಿಯೂರಪ್ಪ ಅವರೇ ಘೋಷಿಸಿದ್ದಾರೆ. 'ಆದರೆ, ಅವರು ಎಲ್ಲಿಂದ ಸ್ಪರ್ಧಿಸಬೇಕು ಎಂಬುದನ್ನು ವರಿಷ್ಠರು ನಿರ್ಧರಿಸುತ್ತಾರೆ'. ಯಡಿಯೂರಪ್ಪ ನಿವೃತ್ತಿ ಹೊಂದಿದರೆ ವಿಜಯೇಂದ್ರ ಅವರಿಗೆ ಟಿಕೆಟ್ ನೀಡಲಾಗುತ್ತದೆಯೇ ಎಂಬ ಪ್ರಶ್ನೆಗೆ, 'ಅದನ್ನೂ ಪಕ್ಷದ ವರಿಷ್ಠರು ನಿರ್ಧರಿಸುತ್ತಾರೆ' ಎಂದರು.

ಉಮೇಶ ಕತ್ತಿ ನಿಧನರಾಗಿರುವುದರಿಂದ ಅವರ ಸಹೋದರ ರಮೇಶ ಕತ್ತಿ ಟಿಕೆಟ್ ಬಯಸಿದರೆ, ಗೆಲ್ಲುವ ಸಾಮರ್ಥ್ಯ ಇದ್ದರೆ ಪಕ್ಷ ಟಿಕೆಟ್ ನೀಡುತ್ತದೆ. ಇಂತಹ ಪ್ರಕರಣಗಳನ್ನು ಕುಟುಂಬ ರಾಜಕಾರಣ ಎಂದು ಪರಿಗಣಿಸುವುದು ಕಷ್ಟವಾಗುತ್ತದೆ ಎಂದೂ ಅವರು ಅಭಿಪ್ರಾಯಪಟ್ಟರು.

ಹೊಸಬರಿಗೆ ಆದ್ಯತೆ: 'ಕ್ಷೇತ್ರದಲ್ಲಿ ವರ್ಚಸ್ಸು ಕಳೆದುಕೊಂಡು ಮತದಾರರ ವಿಶ್ವಾಸ ಕಳೆದುಕೊಂಡವರಿಗೆ ಟಿಕೆಟ್ ಸಿಗುವುದಿಲ್ಲ. ಅಲ್ಲಿ ಹೊಸಬರಿಗೆ ಟಿಕೆಟ್ ಸಿಗಲಿದೆ. ಈ ಪ್ರಯೋಗವನ್ನು ಕಳೆದ ಮೂರು ವರ್ಷಗಳಲ್ಲಿ ನಡೆದ ವಿಧಾನಸಭಾ ಉಪಚುನಾವಣೆಗಳಲ್ಲಿ ಮಾಡಿದ್ದೇವೆ. ಅದು 2023ರ ಚುನಾವಣೆಯಲ್ಲೂ ಮುಂದುವರೆಯಲಿದೆ' ಎಂದೂ ವಿವರಿಸಿದರು. ಅಲ್ಲದೆ, ಇದುವರೆಗೂ ಪ್ರಾತಿನಿಧ್ಯ ಸಿಗದ, ಹಿಂದುಳಿದ ಮತ್ತು ನಿರ್ಲಕ್ಷಿತ ಸಮುದಾಯಗಳಿಗೂ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ನೀಡಲಾಗುತ್ತದೆ ಎಂದರು.

ಕೃಷಿ ಉಪಕರಣ: ಜಿಎಸ್‌ಟಿ ವಿನಾಯಿತಿಗೆ ಬಿಕೆಎಸ್ ರ‍್ಯಾಲಿ

ನವದೆಹಲಿ (ಪಿಟಿಐ): ಕೃಷಿ ಉಪಕರಣಗಳು ಮತ್ತು ರಸಗೊಬ್ಬರಕ್ಕೆ ಜಿಎಸ್‌ಟಿ ವಿನಾಯಿತಿ ಹಾಗೂ ಪಿಎಂ ಕಿಸಾನ್ ಯೋಜನೆಯಡಿ ಹಣಕಾಸು ನೆರವು ಹೆಚ್ಚಿಸುವ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಇಲ್ಲಿ ಡಿಸೆಂಬರ್ 19ರಂದು ಬೃಹತ್ ರ‍್ಯಾಲಿ ನಡೆಸುವುದಾಗಿ ಆರೆಸ್ಸೆಸ್ ಬೆಂಬಲಿತ ಭಾರತೀಯ ಕಿಸಾನ್ ಸಂಘ (ಬಿಕೆಎಸ್) ಸೋಮವಾರ ಪ್ರಕಟಿಸಿದೆ.

ಇದೇ ತಿಂಗಳ 8 ಮತ್ತು 9ರಂದು ನಡೆದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ನಿರ್ಧರಿಸಿದಂತೆ ಈ ಕಿಸಾನ್ ಘರ್ಜನಾ ರ‍್ಯಾಲಿ ನಡೆಸಲಾಗುವುದು ಎಂದು ಬಿಕೆಎಸ್ ಅಖಿಲ ಭಾರತ ಕಾರ್ಯದರ್ಶಿ ಕೆ. ಸಾಯಿ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಹಿಂದಿ ಬೋಧನಾ ಮಾಧ್ಯಮ ಶಿಫಾರಸು ಸ್ವೀಕಾರಾರ್ಹವಲ್ಲ: ಸಿಪಿಎಂ

'ದೇಶದ ಭಾಷಾ ವೈವಿಧ್ಯಕ್ಕೆ ವಿರುದ್ಧವಾದುದು'

ಕೊಚ್ಚಿ (ಪಿಟಿಐ): ಐಐಟಿಯಂತಹ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಮತ್ತು ತಾಂತ್ರಿಕೇತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದಿ ಅಥವಾ ಪ್ರಾದೇಶಿಕ ಭಾಷೆಗಳು ಬೋಧನಾ ಮಾಧ್ಯಮವಾಗಬೇಕೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಅಧಿಕೃತ ಭಾಷೆಗಳ ಬಗೆಗಿನ ಸಂಸದೀಯ ಸಮಿತಿಯು ಮಾಡಿರುವ ಶಿಫಾರಸುಗಳನ್ನು ಕೇರಳ ಸರ್ಕಾರ ವಿರೋಧಿಸಿದೆ.

'ಆರೆಸ್ಸೆಸ್‌ನ ಒಂದು ರಾಷ್ಟ್ರ, ಒಂದು ಸಂಸ್ಕೃತಿ, ಒಂದು ಭಾಷೆಯ ಪರಿಕಲ್ಪನೆಯನ್ನು ಜಾರಿಗೊಳಿಸುವ ಪ್ರಯತ್ನಗಳನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ. ಇದು ಸಂವಿಧಾನದ ಆಶಯಗಳಿಗೆ ಮತ್ತು ದೇಶದ ಭಾಷಾ ವೈವಿಧ್ಯಕ್ಕೆ ವಿರುದ್ಧವಾದುದು' ಎಂದು ರಾಜ್ಯದ ಆಡಳಿತಾರೂಢ ಸಿಪಿಎಂ ಸೋಮವಾರ ಟ್ವೀಟ್ ಮಾಡಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿರುವ ಸಂಸದೀಯ ಸಮಿತಿಯ 11ನೇ ವರದಿಯಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನಾ ಮಾಧ್ಯಮವಾಗಿ ಹಿಂದಿ ಭಾಷಿಕ ಪ್ರದೇಶದಲ್ಲಿ ಹಿಂದಿಯನ್ನೂ, ಇತರ ಪ್ರದೇಶಗಳಲ್ಲಿ ಅಲ್ಲಿನ ಸ್ಥಳೀಯ ಭಾಷೆಯನ್ನೂ ಬಳಸಬೇಕು. ಇಂಗ್ಲಿಷ್ ಬಳಕೆ ಐಚ್ಛಿಕವಾಗಿರಬೇಕು. ಎಲ್ಲ ರಾಜ್ಯಗಳಲ್ಲಿಯೂ ಇಂಗ್ಲಿಷ್‌ಗಿಂತ ಸ್ಥಳೀಯ ಭಾಷೆಗೆ ಹೆಚ್ಚು ಆದ್ಯತೆ ನೀಡಬೇಕು ಎಂದೂ ಶಿಫಾರಸು ಮಾಡಲಾಗಿದೆ.

'ದೇಶದ ವಿವಿಧತೆಯ ಮೇಲೆ ನಂಬಿಕೆ ಇಲ್ಲದ ಬಿಜೆಪಿ ದೇಶವನ್ನು ಆಳುತ್ತಿದೆ. ನೇಮಕಾತಿ ಪರೀಕ್ಷೆಗಳು ಹಿಂದಿಯಲ್ಲಿ ಮಾತ್ರ ಇರಬೇಕೆಂದು ಒತ್ತಾಯಿಸುವ ಮೂಲಕ ಕೇಂದ್ರ ಸರ್ಕಾರಿ ಉದ್ಯೋಗಕ್ಕೆ ಹಿಂದಿ ಭಾಷೆಯ ಜ್ಞಾನ ಕಡ್ಡಾಯವೆನ್ನುವ ಪೂರ್ವಭಾವಿ ಷರತ್ತು ವಿಧಿಸಲಾಗುತ್ತಿದೆ' ಎಂದು ಪಕ್ಷದ ಹಿರಿಯ ನಾಯಕ ಟಿ.ಎಂ. ಥಾಮಸ್ ಐಸಾಕ್ ಆರೋಪಿಸಿದ್ದಾರೆ.

> ಭಾರತದ ವಿಶಿಷ್ಟ ಮತ್ತು ಶ್ರೀಮಂತ ಭಾಷಾ ವಿವಿಧತೆಯ ಮೇಲೆ ಆರೆಸ್ಸೆಸ್‌ನ ಹಿಂದಿ, ಹಿಂದೂ, ಹಿಂದೂಸ್ತಾನ್ ಕಲ್ಪನೆ ಹೇರುವುದು ಸ್ವೀಕಾರವಲ್ಲ
> **ಸೀತಾರಾಮ್ ಯೆಚೂರಿ,** ಸಿಪಿಐಎಂ ಪ್ರಧಾನ ಕಾರ್ಯದರ್ಶಿ

> ಶಿಫಾರಸುಗಳನ್ನು ಒಪ್ಪಲಾಗದು. ಬಿಜೆಪಿಯು ದೇಶದ ಬಹುತ್ವವನ್ನು ತಿರಸ್ಕರಿಸುತ್ತಿದೆ. ರಾಷ್ಟ್ರದ ಏಕತೆಯು ವಿವಿಧತೆಯಿಂದ ಕೂಡಿದೆ ಎನ್ನುವುದನ್ನು ಅದು ಒಪ್ಪಿಕೊಳ್ಳುತ್ತಿಲ್ಲ
> **ವಿ.ಪಿ. ಸಾನು,** ಅಧ್ಯಕ್ಷರು, ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ

> ಹಿಂದಿಯೇತರ ಭಾಷಿಕರಿಗೆ ಶಿಕ್ಷಣ, ಉದ್ಯೋಗ ನಿರಾಕರಿಸುವ ಕೇಂದ್ರದ ಈ ನಿರ್ಧಾರ ಅನೇಕ ಅಪಾಯಗಳಿಂದ ಕೂಡಿದೆ. ಇದು ಸಂವಿಧಾನಕ್ಕೆ ವಿರುದ್ಧವಾದುದು ಕೂಡ
> **ಜಾನ್ ಬ್ರಿಟ್ಟಾಸ್,** ರಾಜ್ಯಸಭೆ ಸದಸ್ಯ, ಸಿಪಿಎಂ


ಮತ್ತೊಂದು ಭಾಷಾ ಸಮರಕ್ಕೆ ದಾರಿ ಮಾಡದಿರಿ: ಸ್ಟಾಲಿನ್

ಚೆನ್ನೈ: ಬಲವಂತವಾಗಿ ಹಿಂದಿ ಹೇರಿಕೆ ಮಾಡಿ ಮತ್ತೊಂದು ಭಾಷಾ ಸಮರಕ್ಕೆ ಅವಕಾಶ ಮಾಡಿಕೊಡದಿರಿ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸೋಮವಾರ ಬಿಜೆಪಿ ವಿರುದ್ಧ ಕಿಡಿಕಾರಿದ್ದಾರೆ.

ಕೇಂದ್ರದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇಂಗ್ಲಿಷ್ ಬದಲಿಗೆ ಹಿಂದಿಯನ್ನು ಬೋಧನಾ ಮಾಧ್ಯಮವಾಗಿ ಬಳಸುವಂತೆ ಅಧಿಕೃತ ಭಾಷೆಯ ಕುರಿತಾದ ಸಂಸದೀಯ ಸಮಿತಿಯು ಮಾಡಿರುವ ಶಿಫಾರಸು 'ವಿಭಜಕ ಗುಣ'ದಿಂದ ಕೂಡಿದೆ. ಕೇಂದ್ರ ಸರ್ಕಾರ ಬಲವಂತವಾಗಿ ಹಿಂದಿ ಹೇರಿಕೆ ಮಾಡಿ, ಮತ್ತೊಂದು ಭಾಷಾ ಸಮರಕ್ಕೆ ಹಾದಿ ಮಾಡಿಕೊಡಬಾರದು ಎಂದು ಅವರು ಒತ್ತಾಯಿಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಸಮಿತಿ ಸಲ್ಲಿಸಿರುವ ವರದಿಯಲ್ಲಿ ಶಿಫಾರಸುಗಳು ವಾಸ್ತವಿಕವಾಗಿ ಕಾರ್ಯಸಾಧುವಲ್ಲ. ಒಂದು ವೇಳೆ ದೇಶದಲ್ಲಿ ಏಕರೂಪ ಭಾಷೆಯಾಗಿ ಹಿಂದಿ ಹೇರಿದರೆ, ಹಿಂದಿ ಬಲ್ಲವರು ಮಾತ್ರ ದೇಶದ ಸತ್ಪ್ರಜೆಗಳೆಂದು, ಹಿಂದಿ ಗೊತ್ತಿಲ್ಲದವರನ್ನು ದ್ವಿತೀಯ ದರ್ಜೆಯ ಪ್ರಜೆಗಳಾಗಿ ನಡೆಸಿಕೊಳ್ಳುವ ಪರಿಸ್ಥಿತಿ ಬರಲಿದೆ ಎಂದು ಸ್ಟಾಲಿನ್ ಹೇಳಿದ್ದಾರೆ.

ಷೇರುಪೇಟೆ ವಹಿವಾಟು 200



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,315
ಇಂದಿನ ಅಂತ್ಯ	17,241
▼	74
ದಿನದ ಕನಿಷ್ಠ	17,064

ವಿನಿಮಯ ದರ

$ ಡಾಲರ್	82.40
£ ಪೌಂಡ್	91.15
€ ಯುರೊ	79.88
¥ ಯೆನ್ (100ಕ್ಕೆ)	57

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ



(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1710 (1710)
ಸೋಯಾ (ರಿಫೈನ್ಡ್)	₹1310 (1250)
ಸೂರ್ಯಕಾಂತಿ (ರಿಫೈನ್ಡ್)	₹1460 (1270)
ಪಾಮೋಲಿನ್	₹970 (945)

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)	
ದಪ್ಪ	₹1200-1800
ಮಧ್ಯಮ	₹800-1200
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹152
ಆರ್‌ಎಸ್‌ಎಸ್-5 ₹142.50
ಗುಡ್ ಲಾಟ್ ₹132.50

ಸಂಕ್ಷಿಪ್ತ ಸುದ್ದಿ

ಐಡಿಬಿಐ ಮಾರಾಟ ಮಾರ್ಚ್‌ಗೆ ಮೊದಲು ಬಿಡ್ ಆಹ್ವಾನ

ನವದೆಹಲಿ (ಪಿಟಿಐ): ಐಡಿಬಿಐ ಬ್ಯಾಂಕ್ ಖಾಸಗೀಕರಣಕ್ಕೆ ಹಣಕಾಸಿನ ಬಿಡ್‌ಗಳನ್ನು ಮಾರ್ಚ್‌ಗೆ ಮೊದಲು ಆಹ್ವಾನಿಸುವ ಸಾಧ್ಯತೆ ಇದೆ. ಬ್ಯಾಂಕ್‌ನ ಮಾರಾಟ ಪ್ರಕ್ರಿಯೆಯು ಮುಂದಿನ ಹಣಕಾಸು ವರ್ಷದ ಅಂತ್ಯದೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐಡಿಬಿಐ ಬ್ಯಾಂಕ್‌ನಲ್ಲಿನ ಶೇಕಡ 60.72ರಷ್ಟು ಷೇರುಗಳನ್ನು ಮಾರಾಟ ಮಾಡಲು ಕೇಂದ್ರ ಸರ್ಕಾರ ಹಾಗೂ ಎಲ್‌ಐಸಿ ಹಿಂದಿನ ವಾರ ಪ್ರಾಥಮಿಕ ಬಿಡ್ ಆಹ್ವಾನಿಸಿವೆ.

ಈಗ ಐಡಿಬಿಐ ಬ್ಯಾಂಕ್‌ನಲ್ಲಿ ಎಲ್‌ಐಸಿ ಶೇ 49.24ರಷ್ಟು ಷೇರು ಹೊಂದಿದೆ. ಕೇಂದ್ರ ಸರ್ಕಾರವು ಶೇ 45.48ರಷ್ಟು ಪಾಲು ಹೊಂದಿದೆ. ಇನ್ನುಳಿದ ಶೇ 5.2ರಷ್ಟು ಷೇರುಗಳು ಸಾರ್ವಜನಿಕರ ಬಳಿ ಇವೆ. ಖಾಸಗೀಕರಣದ ನಂತರದಲ್ಲಿ ಎಲ್‌ಐಸಿ ಹಾಗೂ ಕೇಂದ್ರದ ಜಂಟಿ ಪಾಲು ಈಗಿನ ಶೇ 94.72ರಿಂದ ಶೇ 34ಕ್ಕೆ ಇಳಿಕೆಯಾಗಲಿದೆ.

82.40ಕ್ಕೆ ಕುಸಿದ ರೂಪಾಯಿ




ಮುಂಬೈ (ಪಿಟಿಐ/ ರಾಯಿಟರ್ಸ್): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ 10 ಪೈಸೆ ಇಳಿಕೆ ಕಂಡು ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹82.40ಕ್ಕೆ ಕುಸಿಯಿತು.

ದೇಶಿ ಷೇರುಪೇಟೆಯಲ್ಲಿನ ನಕಾರಾತ್ಮಕ ವಹಿವಾಟಿನ ಜೊತೆಗೆ ಡಾಲರ್ ಮೌಲ್ಯ ವೃದ್ಧಿ ಆಗಿರುವುದು ಹೂಡಿಕೆ ಮೇಲೆ ಪರಿಣಾಮ ಬೀರಿತು ಎಂದು ವರ್ತಕರು ಹೇಳಿದ್ದಾರೆ.

ಮಾರ್ಚ್ ವೇಳೆಗೆ ರೂಪಾಯಿಯು ₹84 ರಿಂದ ₹85ರ ಮಟ್ಟಕ್ಕೆ ಕುಸಿತ ಕಾಣುವ ಸಾಧ್ಯತೆ ಇದೆ ಎಂದು ಎಲಾರಾ ಸಂಸ್ಥೆಯ ಅರ್ಥಶಾಸ್ತ್ರಜ್ಞೆ ಗರಿಮಾ ಕಪೂರ್ ಹೇಳಿದ್ದಾರೆ.

2019ರ ಬಳಿಕ ದಾಖಲೆಯ ಮಾರಾಟ: ಎಫ್‌ಎಡಿಎ

ನವರಾತ್ರಿ: ವಾಹನ ಮಾರಾಟ ಏರಿಕೆ



ನವದೆಹಲಿ (ಪಿಟಿಐ): ಸೆಪ್ಟೆಂಬರ್ 26ರಿಂದ ಅಕ್ಟೋಬರ್ 5ರವರೆಗಿನ ನವರಾತ್ರಿ ಹಬ್ಬದ ಸಂದರ್ಭದಲ್ಲಿ 5.4 ಲಕ್ಷ ವಾಹನಗಳು ಮಾರಾಟ ಆಗಿದ್ದು, ಇದೊಂದು ದಾಖಲೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಸೋಮವಾರ ತಿಳಿಸಿದೆ.

ಕಳೆದ ವರ್ಷದ ನವರಾತ್ರಿ ಸಂದರ್ಭದಲ್ಲಿ 3.42 ಲಕ್ಷ ವಾಹನಗಳು ಮಾರಾಟ ಆಗಿದ್ದವು. ಇದಕ್ಕೆ ಹೋಲಿಸಿದರೆ ಮಾರಾಟದಲ್ಲಿ ಶೇಕಡ 57ರಷ್ಟು ಏರಿಕೆ ಕಂಡುಬಂದಿದೆ ಎಂದು ಹೇಳಿದೆ. 2019ರ ನವರಾತ್ರಿ ಸಂದರ್ಭದಲ್ಲಿ 4.66 ಲಕ್ಷ ವಾಹನಗಳು ಮಾರಾಟ ಆಗಿದ್ದು ಇದುವರೆಗಿನ ದಾಖಲೆಯಾಗಿತ್ತು.

ಮೂರು ವರ್ಷಗಳ ಬಳಿಕ ಗ್ರಾಹಕರು ವಾಹನ ಖರೀದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದಾರೆ ಎನ್ನುವುದನ್ನು ನವರಾತ್ರಿ ಸಂದರ್ಭದ ಮಾರಾಟದ ಅಂಕಿ–ಅಂಶವು ತಿಳಿಸುತ್ತಿದೆ ಎಂದು ಒಕ್ಕೂಟದ ಅಧ್ಯಕ್ಷ ಮನಿಶ್ ರಾಜ್ ಸಿಂಘಾನಿಯಾ ಹೇಳಿದ್ದಾರೆ.

ಕೋವಿಡ್‌ಗೂ ಮುಂಚಿನ ತಿಂಗಳುಗಳಿಗೆ ಹೋಲಿಸಿದರೆ ದ್ವಿಚಕ್ರ ವಾಹನ ಮಾರಾಟ ಸಹ ಒಂದಂಕಿ ಪ್ರಗತಿ ಕಂಡಿದೆ ಎಂದು ಅವರು ತಿಳಿಸಿದ್ದಾರೆ. ವಾಹನಗಳ ಮಾರಾಟದ ಈಗಿನ ಮಟ್ಟವು ದೀಪಾವಳಿಯವರೆಗೂ ಮುಂದುವರಿಯುವ ಭರವಸೆ ಇದೆ ಎಂದು ಅವರು ಹೇಳಿದ್ದಾರೆ.

ಮೂನ್‌ಲೈಟಿಂಗ್: ಇದುವರೆಗೆ ಯಾರ ವಿರುದ್ಧವೂ ಕ್ರಮ ಇಲ್ಲ

ಟಿಸಿಎಸ್ ಲಾಭ ದಾಖಲೆ ಹೆಚ್ಚಳ

ಮುಂಬೈ (ಪಿಟಿಐ/ರಾಯಿಟರ್ಸ್/ ಎಎಫ್‌ಪಿ): ದೇಶದ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಸೆಪ್ಟೆಂಬರ್ ತ್ರೈಮಾಸಿಕದ ಫಲಿತಾಂಶವನ್ನು ಸೋಮವಾರ ಪ್ರಕಟಿಸಿದ್ದು, ಒಟ್ಟು ₹ 10,431 ಕೋಟಿ ನಿವ್ವಳ ಲಾಭ ಗಳಿಸಿದೆ. ಇದು ತ್ರೈಮಾಸಿಕವೊಂದರಲ್ಲಿ ಕಂಪನಿ ಇದುವರೆಗೆ ಕಂಡಿರುವ ಅತಿಹೆಚ್ಚಿನ ಲಾಭ.

ಅಲ್ಲದೆ, ಕಂಪನಿ ದಾಖಲಿಸಿರುವ ಲಾಭದ ಪ್ರಮಾಣವು ಮಾರುಕಟ್ಟೆ ತಜ್ಞರ ನಿರೀಕ್ಷೆಗಿಂತಲೂ ಜಾಸ್ತಿ ಇದೆ. ಮಾರುಕಟ್ಟೆ ಬಂಡವಾಳದ ಲೆಕ್ಕದಲ್ಲಿ ದೇಶದ ಎರಡನೆಯ ಅತಿದೊಡ್ಡ ಕಂಪನಿಯಾಗಿರುವ ಟಿಸಿಎಸ್, ಶೇಕಡ 80ರಷ್ಟು ವರಮಾನವನ್ನು ಪಾಶ್ಚಿಮಾತ್ಯ ಮಾರುಕಟ್ಟೆಗಳಿಂದ ಪಡೆಯುತ್ತಿದೆ.

ಮುಖ್ಯಾಂಶಗಳು

- ಆರು ಲಕ್ಷ ದಾಟಿದ ನೌಕರರ ಸಂಖ್ಯೆ
- ಷೇರುದಾರರಿಗೆ ₹8 ಮಧ್ಯಂತರ ಲಾಭಾಂಶ

ಹಿಂದಿನ ವರ್ಷದ ಇದೇ ತ್ರೈಮಾಸಿಕದ ಲಾಭಕ್ಕೆ ಹೋಲಿಸಿದರೆ ಈ ಬಾರಿಯ ನಿವ್ವಳ ಲಾಭದ ಪ್ರಮಾಣವು ಶೇಕಡ 8.4ರಷ್ಟು ಜಾಸ್ತಿಯಾಗಿದೆ. ಈ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನವು ಶೇ 18ರಷ್ಟು ಹೆಚ್ಚಾಗಿದ್ದು, ₹ 54,309 ಕೋಟಿಗೆ ತಲುಪಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಗೆ ಹೊಸದಾಗಿ ಸೇರಿದ ನೌಕರರ ನಿವ್ವಳ ಸಂಖ್ಯೆ 9,840. ಕಂಪನಿಯಲ್ಲಿ ಈಗ ಒಟ್ಟು 6.16 ಲಕ್ಷ ನೌಕರರು ಇದ್ದಾರೆ. ಐ.ಟಿ. ವಲಯದಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ನೀಡಿರುವ ಹೆಗ್ಗಳಿಕೆ ಟಿಸಿಎಸ್‌ನದ್ದು.

ಕೆಲಸ ಬಿಡುವ ನೌಕರರ ಪ್ರಮಾಣವು ಈಗಾಗಲೇ ಗರಿಷ್ಠ ಮಟ್ಟವನ್ನು ತಲುಪಿ ಆಗಿದೆ ಎಂದು ಕಂಪನಿ ಭಾವಿಸಿದೆ. 'ಇಲ್ಲಿಂದ ಮುಂದೆ ಕೆಲಸ ತೊರೆಯುವವರ ಪ್ರಮಾಣವು ಕಡಿಮೆ ಆಗುವ ನಿರೀಕ್ಷೆ ಇದೆ. ಅನುಭವಿ ನೌಕರರು ಕಂಪನಿಯಿಂದ ಬಯಸುವ ವೇತನದ ಮೊತ್ತವು ಮಿತವಾಗಬಹುದು' ಎಂದು ಕಂಪನಿ ಪ್ರಕಟಣೆಯಲ್ಲಿ ಹೇಳಿದೆ.

ಮೂನ್‌ಲೈಟಿಂಗ್: ಐ.ಟಿ. ಉದ್ಯಮ ವಲಯದಲ್ಲಿ ನಡೆಯುತ್ತಿರುವ ಮೂನ್ ಲೈಟಿಂಗ್ 'ನೈತಿಕತೆಗೆ ಸಂಬಂಧಿಸಿದ ವಿಚಾರ, ನಾವು ನಂಬಿರುವ ಮೌಲ್ಯಗಳಿಗೆ ಇದು ವಿರುದ್ಧ' ಎಂದು ಕಂಪನಿ ಹೇಳಿದೆ. ಆದರೆ, ಮೂನ್‌ಲೈಟಿಂಗ್ ಕಾರಣಕ್ಕೆ ಇದುವರೆಗೆ ತನ್ನ ಯಾವ ನೌಕರನ ವಿರುದ್ಧವೂ ಕ್ರಮ ಕೈಗೊಂಡಿಲ್ಲ ಎಂದು ಸ್ಪಷ್ಟಪಡಿಸಿದೆ.

ಕಂಪನಿಯ ನೌಕರರು ಬೇರೆ ಸಂಸ್ಥೆಗಳಿಗೆ ಕೆಲಸ ಮಾಡಿಕೊಡುವುದಕ್ಕೆ ಸೇವಾ ನಿಯಮಗಳ ಅಡಿಯಲ್ಲಿ ಅವಕಾಶ ಇಲ್ಲ ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಗೋಪಿನಾಥನ್ ಹೇಳಿದ್ದಾರೆ.

ಷೇರುಪೇಟೆ: ನಕಾರಾತ್ಮಕ ಅಂತ್ಯ ಕಂಡ ವಹಿವಾಟು



ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಸತತ ಎರಡನೇ ದಿನವೂ ನಕಾರಾತ್ಮಕವಾಗಿ ವಹಿವಾಟು ಅಂತ್ಯಗೊಳಿಸಿದವು. ಉಕ್ರೇನ್ ಬಿಕ್ಕಟ್ಟು ತೀವ್ರಗೊಂಡಿರುವ ಜೊತೆಗೆ, ಅಮೆರಿಕದ ಕೇಂದ್ರೀಯ ಬ್ಯಾಂಕ್ ಬಡ್ಡಿದರವನ್ನು ಇನ್ನಷ್ಟು ಹೆಚ್ಚಿಸುವ ಸಾಧ್ಯತೆ ಇರುವುದು ಜಾಗತಿಕ ಷೇರುಪೇಟೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಇದರಿಂದಾಗಿ ದೇಶದ ಷೇರುಪೇಟೆಗಳೂ ಇಳಿಕೆ ಕಾಣುವಂತಾಯಿತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿರುವುದು ಹಾಗೂ ವಿದೇಶಿ ಬಂಡವಾಳದ ಹೊರಹರಿವು ಸಹ ವಹಿವಾಟಿನ ಮೇಲೆ ಪರಿಣಾಮ ಬೀರಿವೆ ಎಂದು ವರ್ತಕರು ಹೇಳಿದ್ದಾರೆ.

ಮಧ್ಯಂತರ ವಹಿವಾಟಿನಲ್ಲಿ ಸೆನ್ಸೆಕ್ಸ್ 800 ಅಂಶಗಳಷ್ಟು ಕುಸಿದಿತ್ತು. ವಹಿವಾಟಿನ ಅಂತ್ಯದ ವೇಳೆಗೆ ಕುಸಿತವು 200 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 74 ಅಂಶ ಇಳಿಕೆ ಕಂಡಿತು.

ಬಿಎಸ್‌ಇನಲ್ಲಿ ವಲಯವಾರು ಗ್ರಾಹಕ ಬಳಕೆ ವಸ್ತುಗಳು ವಲಯ ಶೇ 1.43, ವಿದ್ಯುತ್ ಶೇ 1.30ರಷ್ಟು, ಯುಟಿಲಿಟಿ ಶೇ 1.12 ಮತ್ತು ಎಫ್‌ಎಂಸಿಜಿ ಶೇ 1.01ರಷ್ಟು ಇಳಿಕೆ ಕಂಡಿತು. ಐ.ಟಿ. ಮತ್ತು ತಂತ್ರಜ್ಞಾನ ವಲಯದ ಷೇರುಗಳು ಮಾತ್ರವೇ ಗಳಿಕೆ ಕಂಡವು.

ಏಷ್ಯಾದಲ್ಲಿ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳು ಇಳಿಕೆ ಕಂಡವು. ಅಮೆರಿಕದ ಷೇರುಪೇಟೆ ಹೆಚ್ಚಿನ ನಷ್ಟ ಕಂಡಿತು. ಯುರೋಪ್ ಮಾರುಕಟ್ಟೆಗಳ ವಹಿವಾಟು ಸಹ ಇಳಿಮುಖವಾಗಿತ್ತು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಸೋಮವಾರದ ವಹಿವಾಟಿನಲ್ಲಿ ₹ 2,139 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಅದಾನಿ ತೆಕ್ಕೆಗೆ ಜೆಪಿ ಸಿಮೆಂಟ್ ಉದ್ದಿಮೆ?

ನವದೆಹಲಿ (ಪಿಟಿಐ): ಸಾಲದ ಸುಳಿಯಲ್ಲಿ ಇರುವ ಜೈಪ್ರಕಾಶ್ ಸಮೂಹದ ಸಿಮೆಂಟ್ ಕಂಪನಿಗಳನ್ನು ₹5 ಸಾವಿರ ಕೋಟಿಗೆ ಖರೀದಿಸಲು ಅದಾನಿ ಸಮೂಹವು ಮಾತುಕತೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

ಜೈಪ್ರಕಾಶ್ ಅಸೋಸಿಯೇಟ್ಸ್‌ನ (ಜೆಎಎಲ್) ಆಡಳಿತ ಮಂಡಳಿಯ ಜೊತೆ ಅದಾನಿ ಸಮೂಹವು ಮಾತುಕತೆ ನಡೆಸುತ್ತಿದ್ದು, ಒಪ್ಪಂದದ ಕುರಿತು ಶೀಘ್ರವೇ ಘೋಷಣೆ ಹೊರಬೀಳಲಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ಈ ಕುರಿತು ಪ್ರತಿಕ್ರಿಯೆ ನೀಡಲು ಎರಡೂ ಸಮೂಹಗಳು ನಿರಾಕರಿಸಿವೆ.

ಸದ್ಯ, ಜೆಎಎಲ್ ವಾರ್ಷಿಕ 60 ಲಕ್ಷ ಟನ್ ಮತ್ತು ಜೈಪ್ರಕಾಶ್ ಪವರ್ ವೆಂಚರ್ಸ್ ಲಿಮಿಟೆಡ್ (ಜೆಪಿವಿಎಲ್) ವಾರ್ಷಿಕ 40 ಲಕ್ಷ ಟನ್ ಸಿಮೆಂಟ್ ಉತ್ಪಾದನಾ ಸಾಮರ್ಥ್ಯ ಹೊಂದಿವೆ.

ಎರಡೂ ಕಂಪನಿಗಳು ಸಾಲದ ಹೊರೆಯನ್ನು ತಗ್ಗಿಸಿಕೊಳ್ಳಲು ಮುಂದಾಗಿದ್ದು, ಸಿಮೆಂಟ್ ವಹಿವಾಟಿನ ಜೊತೆಗೆ ಕೆಲವು ಪ್ರಮುಖವಲ್ಲದ ಆಸ್ತಿಗಳನ್ನು ಮಾರಾಟ ಮಾಡಲು ನಿರ್ಧರಿಸಿವೆ. ಇದರಿಂದಾಗಿ ಜೆಎಎಲ್ ಷೇರು ಬೆಲೆ ಸೋಮವಾರ ಶೇ 9.72ರಷ್ಟು ಹೆಚ್ಚಾಗಿ ₹ 11.74ಕ್ಕೆ ಮತ್ತು ಜೆಪಿವಿಎಲ್ ಷೇರುಬೆಲೆ ಶೇ 3.80ರಷ್ಟು ಹೆಚ್ಚಾಗಿ ₹ 8.46ಕ್ಕೆ ಏರಿಕೆ ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಕೋಕ	12299-34299	ಬಿಳಿಗೋಟು	27802-37109
ಬಂಟ್ವಾಳ		ಕೆಂಪುಗೋಟು		ಚಾಲಿ	38712-43399
ಕೋಕ	12500-25000		28699-42729	ಕೆಂಪುಗೋಟು	
ಹೊಸತು	27500-48000	ರಾಶಿ	36989-50510		23777-36011
ಹಳತು	46000-56000	ಸಿಪ್ಪೆಗೋಟು	13089-21999	ರಾಶಿ	47000-47000
ಚಿತ್ರದುರ್ಗ		**ಶಿವಮೊಗ್ಗ**		**ಯಲ್ಲಾಪುರ**	
ಆಪಿ	48429-48879	ಗೊಬರಲು	17800-37299	ಬಿಳಿಗೋಟು	28899-34316
ಬೆಟ್ಟೆ	38019-38449	ರಾಶಿ	46069-50599	ಚಾಲಿ	39009-43040
ಕೆಂಪುಗೋಟು		ಸರಕು	57109-80596	ಕೋಕ	18312-33699
	29509-29910	**ಸಿದ್ದಾಪುರ**		ರಾಶಿ	48399-52098
ರಾಶಿ	47939-48369	ಬಿಳಿಗೋಟು	27689-33599	ಕೆಂಪುಗೋಟು	
ಕುಮಟ		ಚಾಲಿ	38000-42299		35873-35900
ಚಿಪ್ಪು	28019-33089	ಕೋಕ	27689-33599	ತಟ್ಟಿಬೆಟ್ಟೆ	42090-47769
ಕೋಕ	16509-30589	ಕೆಂಪುಗೋಟು		**ಮೂಡಿಗೆರೆ ಕಾಫಿ ಧರಣೆ**	
ಹೊಸಚಾಲಿ	37699-42619		34469-35089	**ಮುದ್ರೆಮನೆ**	
ಫ್ಯಾಕ್ಟರಿ	12089-22699	ರಾಶಿ	48899-50109	ಎಪಿ	16200
ಸಾಗರ		ತಟ್ಟಿಬೆಟ್ಟೆ	43889-48659	ಎಸಿ	9100
ಬಿಳಿಗೋಟು	12349-33099	**ಶಿರಸಿ**		ಆರ್‌ಪಿ	9800
ಚಾಲಿ	28989-40099	ಬೆಟ್ಟೆ	39000-46999	ಆರ್‌ಸಿ	4800

ಮುಂಬೈ ಧಾರಣೆ

ಶೇಂಗಾ

10–10-2022

ಜಾವಾ 70/80(ಹೊಸ)	11150-11200
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1720 (1720)
ಒಂದು ವಾರದ ಡೆಲಿವರಿ	1715 (1715)
ಸೋಯಾ ಕಚ್ಚಾ	1220 (1200)
ಪಾಮ್ ವಾರದ ಡೆಲಿವರಿ	968 (943)
ಸೂರ್ಯಕಾಂತಿ ಎಣ್ಣೆ ಕಚ್ಚಾ	1360 (1280)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,850 (51,545)
ಬೆಳ್ಳಿ ಕೆ.ಜಿ 58,850 (60,100)

ಆವರಣದಲ್ಲಿ ಶನಿವಾರದ ಧಾರಣೆ

ಸೆಪ್ಟೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ಶೇ 7.3ಕ್ಕೆ ಏರಿಕೆ?



ಬೆಂಗಳೂರು (ರಾಯಿಟರ್ಸ್): ದೇಶದಲ್ಲಿ ಚಿಲ್ಲರೆ ಹಣದುಬ್ಬರ ದರವು ಸೆಪ್ಟೆಂಬರ್‌ನಲ್ಲಿ ಐದು ತಿಂಗಳ ಗರಿಷ್ಠ ಮಟ್ಟವಾದ ಶೇಕಡ 7.30ಕ್ಕೆ ಏರಿಕೆ ಆಗಿರುವ ಸಾಧ್ಯತೆ ಇದೆ ಎಂದು ರಾಯಿಟರ್ಸ್ ಸಮೀಕ್ಷೆ ತಿಳಿಸಿದೆ.

ಅಂದರೆ, ಹಣದುಬ್ಬರದ ಕುರಿತು ಆರ್‌ಬಿಐ ಹಾಕಿಕೊಂಡಿರುವ ಗರಿಷ್ಠ ಮಿತಿಯಾದ ಶೇ 6ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿಯೇ ಇರಲಿದೆ ಎಂದೂ ಹೇಳಿದೆ.

ಅತಿಯಾದ ಮಳೆ ಮತ್ತು ರಷ್ಯಾ–ಉಕ್ರೇನ್ ಸಂಘರ್ಷದಿಂದ ಪೂರೈಕೆ ವ್ಯವಸ್ಥೆಯಲ್ಲಿ ಜಾಗತಿಕ ಮಟ್ಟದಲ್ಲಿ ಎದುರಾಗಿರುವ ಸಮಸ್ಯೆಗಳಿಂದಾಗಿ ಧಾನ್ಯಗಳು ಮತ್ತು ತರಕಾರಿಗಳ ಬೆಲೆಯು ಎರಡು ವರ್ಷಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ.

ಭಾರತದ ಬಡವರು ಮತ್ತು ಮಧ್ಯಮ ವರ್ಗದವರು ತಮ್ಮ ಗಳಿಕೆಯ ದೊಡ್ಡ ಮೊತ್ತವನ್ನು ಆಹಾರ ವಸ್ತುಗಳಿಗೆ ವೆಚ್ಚ ಮಾಡುತ್ತಿದ್ದಾರೆ. ಕೋವಿಡ್ ಸಾಂಕ್ರಾಮಿಕದ ಸಂಕಷ್ಟದಿಂದ ಈಗಷ್ಟೇ ಸುಧಾರಿಸಿಕೊಳ್ಳುತ್ತಿರುವ ಈ ವರ್ಗಗಳ ಜನರಿಗೆ ಆಹಾರ ವಸ್ತುಗಳ ಬೆಲೆ ಏರಿಕೆಯು ಇನ್ನಷ್ಟು ಸಂಕಷ್ಟ ಉಂಟುಮಾಡಲಿದೆ ಎಂದು ಸಮೀಕ್ಷೆಯು ಹೇಳಿದೆ.

ಹಣದುಬ್ಬರದ ಕುರಿತಾಗಿ ಅಕ್ಟೋಬರ್ 3ರಿಂದ 7ರವರೆಗೆ 47 ಆರ್ಥಿಕ ತಜ್ಞರ ಅಭಿಪ್ರಾಯ ಸಂಗ್ರಹಿಸಲಾಗಿದೆ. ಗ್ರಾಹಕ ಬೆಲೆ ಸೂಚ್ಯಂಕ ಆಧರಿಸಿದ ಹಣದುಬ್ಬರವು ಆಗಸ್ಟ್‌ನಲ್ಲಿ ಶೇ 7ರಷ್ಟು ಇದ್ದಿದ್ದು ಸೆಪ್ಟೆಂಬರ್‌ನಲ್ಲಿ ಶೇ 7.30ಕ್ಕೆ ಏರಿಕೆ ಆಗಿದೆ ಎಂದು ತಜ್ಞರು ಅಭಿಪ್ರಾಯ ತಿಳಿಸಿದ್ದಾರೆ.

ವಿವೇಚನೆಯಿಲ್ಲದ ದಾಳಿ –ನ್ಯಾಟೊ ಖಂಡನೆ • 10ಕ್ಕೂ ಹೆಚ್ಚು ಜನರ ಸಾವು

ಉಕ್ರೇನ್: ರಷ್ಯಾ ಕ್ಷಿಪಣಿಗಳ ಸುರಿಮಳೆ

ಕೀವ್/ ಮಾಸ್ಕೊ (ರಾಯಿಟರ್ಸ್/ಎಪಿ/ ಎಎಫ್‌ಪಿ): ಕ್ರಿಮಿಯಾ ದ್ವೀಪಕಲ್ಪ ಸಂಪರ್ಕಿಸುವ ಪ್ರಮುಖ ಕೆರ್ಚ್ ಸೇತುವೆ ಧ್ವಂಸಕ್ಕೆ ತೀವ್ರ ಪ್ರತೀಕಾರಕ್ಕಿಳಿದಿರುವ ರಷ್ಯಾ, ಉಕ್ರೇನ್‌ನ ಭದ್ರಕೋಟೆಯಾದ ರಾಜಧಾನಿ ಕೀವ್ ಸೇರಿ 12 ನಗರಗಳ ಮೇಲೆ ಸೋಮವಾರ ಕ್ಷಿಪಣಿಗಳ ಸುರಿಮಳೆಗರೆದಿದೆ.

ಕೀವ್‌ನಲ್ಲಿ ಎಂಟು ಜನ ಸೇರಿ ವಿವಿಧೆಡೆ 10ಕ್ಕೂ ಹೆಚ್ಚು ಮಂದಿ ಹತರಾಗಿದ್ದಾರೆ. ಹಲವರು ಗಾಯಗೊಂಡಿದ್ದಾರೆ. ಪುಟಿನ್ ನೇತೃತ್ವದಲ್ಲಿ ದೇಶದ ಭದ್ರತಾ ಸಮಿತಿ ಸಭೆ ನಡೆಯುವ ಕೆಲವೇ ತಾಸುಗಳ ಮೊದಲು, ರಷ್ಯಾ ಪಡೆಗಳು ಇರಾನಿ ಶಾಹಿದ್ ಆತ್ಮಾಹುತಿ ಡ್ರೋನ್ ಸೇರಿ 84 ಕ್ರೂಸ್ ಕ್ಷಿಪಣಿಗಳನ್ನು ಉಡಾಯಿಸಿವೆ. ಈ ಪೈಕಿ 40ಕ್ಕೂ ಹೆಚ್ಚು ಕ್ಷಿಪಣಿಗಳನ್ನು ಉಕ್ರೇನ್ ಸೇನೆ ಹೊಡೆದುರುಳಿಸಿದೆ. ಜೂನ್ ನಂತರ ಇದೇ ಮೊದಲ ಬಾರಿಗೆ ಕ್ಷಿಪಣಿ ದಾಳಿಗೆ ತುತ್ತಾಗಿರುವ ಕೀವ್ ನಗರದಲ್ಲಿ ಪ್ರಮುಖ ಸೇತುವೆ ಮತ್ತು ಸರ್ಕಾರಿ ಕಟ್ಟಡಗಳು ಧ್ವಂಸವಾಗಿವೆ.



ಉಕ್ರೇನ್‌ನ ರಾಜಧಾನಿ ಕೀವ್ ಮೇಲೆ ಸೋಮವಾರ ರಷ್ಯಾ ಪಡೆಗಳು ನಡೆಸಿರುವ ಕ್ಷಿಪಣಿ ದಾಳಿಗೆ ಸೇತುವೆ ಧ್ವಂಸಗೊಂಡಿದೆ – ಎಎಫ್‌ಪಿ ಚಿತ್ರ

> ಉಕ್ರೇನ್ ನಾಗರಿಕರನ್ನು ಗುರಿಯಾಗಿಸಿ ರಷ್ಯಾ ನಡೆಸಿರುವುದು 'ಭಯೋತ್ಪಾದಕ, ವಿವೇಚನೆಯಿಲ್ಲದ ದಾಳಿ'. ಉಕ್ರೇನ್‌ಗೆ ನಮ್ಮ ಬೆಂಬಲ ಮುಂದುವರಿಯಲಿದೆ
>
> **ಜೆನ್ಸ್ ಸ್ಟೋಲ್ಟೆನ್ ಬರ್ಗ್**
> ನ್ಯಾಟೊ ಮುಖ್ಯಸ್ಥ

ರಷ್ಯಾದ ದಾಳಿ ಎದುರಿಸಲು ಇನ್ನಷ್ಟು ಶಸ್ತ್ರಾಸ್ತ್ರ ಒದಗಿಸಬೇಕು ಎಂದು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಮಿತ್ರರಾಷ್ಟ್ರಗಳಿಗೆ ಮೊರೆ ಇಟ್ಟಿದ್ದಾರೆ.

ರಷ್ಯಾದ ವಿರುದ್ಧ ಉಕ್ರೇನ್ ಭಯೋತ್ಪಾದಕ ಚಟುವಟಿಕೆ ನಡೆಸುತ್ತಿದೆ. ಇದು ಮುಂದುವರಿದರೆ ನಮ್ಮ ಪ್ರತಿಕ್ರಿಯೆ ಅಷ್ಟೇ ಕಠೋರವಾಗಿರಲಿದೆ ಎಂದು ಅಧ್ಯಕ್ಷ ಪುಟಿನ್ ಎಚ್ಚರಿಕೆ ನೀಡಿದ್ದಾರೆ.

ಅಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ ಮುಖ್ಯಸ್ಥರನ್ನು ಪುಟಿನ್ ಮಂಗಳವಾರ ಸೇಂಟ್ ಪೀಟರ್ಸ್ ಬರ್ಗ್‌ನಲ್ಲಿ ಭೇಟಿಯಾಗಿ ಚರ್ಚೆ ನಡೆಸಲಿದ್ದಾರೆ.

ಸಂಘರ್ಷ ಉಲ್ಬಣ ಭಾರತ ಕಳವಳ

ನವದೆಹಲಿ (ಪಿಟಿಐ): ಉಕ್ರೇನ್‌ನಲ್ಲಿ ಸಂಘರ್ಷ ಉಲ್ಬಣಿಸಿರುವುದಕ್ಕೆ ಭಾರತ ಸೋಮವಾರ ತೀವ್ರ ಕಳವಳ ವ್ಯಕ್ತಪಡಿಸಿದೆ. ಸಂಘರ್ಷ ಶಮನದ ಎಲ್ಲ ಪ್ರಯತ್ನಗಳನ್ನು ಬೆಂಬಲಿಸುವುದಾಗಿಯೂ ಪ್ರತಿಪಾದಿಸಿದೆ.

'ಹಗೆತನದಿಂದ ಯಾರಿಗೂ ಒಳಿತಾಗದು. ತಕ್ಷಣವೇ ಯುದ್ಧ ನಿಲ್ಲಿಸಿ, ರಾಜತಾಂತ್ರಿಕತೆ ಮತ್ತು ಮಾತುಕತೆಗೆ ತುರ್ತು ಮರಳುವಂತೆ ಪುನಃ ಒತ್ತಾಯಿಸುತ್ತೇವೆ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸದ್ಯದ ಸ್ಥಿತಿಯಲ್ಲಿ ಉಕ್ರೇನ್‌ಗೆ ಪ್ರಯಾಣಿಸದಂತೆ ಭಾರತೀಯರಿಗೆ ಕೇಂದ್ರ ಸಲಹೆ ಮಾಡಿದೆ.

ಇಂಡಿಗೊ ಸಿಬ್ಬಂದಿ ಅನುಚಿತ ವರ್ತನೆ: ಶ್ರೀಹರಿ ಆರೋಪ



ಶ್ರೀಹರಿ

ಬೆಂಗಳೂರು: ಇಂಡಿಗೊ ವಿಮಾನ ಸಂಸ್ಥೆಯ ಸಿಬ್ಬಂದಿ ತಮ್ಮೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಒಲಿಂಪಿಯನ್ ಈಜುಪಟು ಕರ್ನಾಟಕದ ಶ್ರೀಹರಿ ನಟರಾಜ್ ಆರೋಪಿಸಿದ್ದಾರೆ.

ಗುಜರಾತ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪಾಲ್ಗೊಂಡು ವಾಪಸ್ ಬರುವಾಗ ತಮಗೆ ಆದ ಕಹಿ ಅನುಭವವನ್ನು ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

'ಗುಜರಾತ್‌ನಿಂದ ವಾಪಸಾಗುವಾಗ ವಿಮಾನದ ಸಿಬ್ಬಂದಿ ಕೆಟ್ಟದಾಗಿ ವರ್ತಿಸಿದ್ದಲ್ಲದೆ, ಈಜು ಸ್ಪರ್ಧೆಗಳಲ್ಲಿ ನಾವು ಗೆದ್ದ ಪದಕ ಹಾಗೂ ಟ್ರೋಫಿಗಳು ಇದ್ದಂತಹ ಹೆಚ್ಚುವರಿ ಲಗೇಜ್‌ಗೆ ಭಾರಿ ಮೊತ್ತ ವಿಧಿಸಿದ್ದಾರೆ' ಎಂದು 'ಟ್ವೀಟ್' ಮಾಡಿದ್ದಾರೆ.

'ಲಗೇಜ್‌ಗೆ ಹೆಚ್ಚುವರಿ ಶುಲ್ಕ ವಿಧಿಸಿರುವುದು ದೊಡ್ಡ ವಿಷಯವಲ್ಲ. ವಿಮಾನ ಸಂಸ್ಥೆಯ ಸಿಬ್ಬಂದಿ ನನ್ನನ್ನು ಹಾಗೂ ತಂಡದ ಸಹಸದಸ್ಯರನ್ನು ನಡೆಸಿಕೊಂಡ ರೀತಿ ತುಂಬಾ ಬೇಸರ ಉಂಟುಮಾಡಿದೆ. ನಾವು ಗೆದ್ದಿರುವ ಪದಕಗಳನ್ನು ಅಲ್ಲೇ ಬಿಟ್ಟುಬರಬೇಕೇ' ಎಂದು ಪ್ರಶ್ನಿಸಿದ್ದಾರೆ.

ಟಿ20 ವಿಶ್ವಕಪ್: ಅಭ್ಯಾಸ ಪಂದ್ಯದಲ್ಲಿ ಭಾರತಕ್ಕೆ ಗೆಲುವು

ಮತ್ತೆ ಅಬ್ಬರಿಸಿದ ಸೂರ್ಯಕುಮಾರ್

ಪರ್ತ್ (ಪಿಟಿಐ): ಭಾರತದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರ ಅಬ್ಬರದ ಆಟ ಆಸ್ಟ್ರೇಲಿಯಾ ನೆಲದಲ್ಲೂ ಮುಂದುವರಿದಿದೆ.

ಸೂರ್ಯಕುಮಾರ್ ಗಳಿಸಿದ ಅರ್ಧಶತಕ (52 ರನ್, 35 ಎ., 4X3, 6X3) ಮತ್ತು ಅರ್ಷದೀಪ್ ಸಿಂಗ್ (3–1–6–3) ಅವರ ಮೊನಚಾದ ದಾಳಿಯ ನೆರವಿನಿಂದ ಭಾರತ ತಂಡ ಟಿ20 ವಿಶ್ವಕಪ್‌ಗೆ ಪೂರ್ವಭಾವಿಯಾಗಿ ಸೋಮವಾರ ನಡೆದ ಅಭ್ಯಾಸ ಪಂದ್ಯದಲ್ಲಿ ವೆಸ್ಟರ್ನ್ ಆಸ್ಟ್ರೇಲಿಯಾ ಎದುರು 13 ರನ್‌ಗಳಿಂದ ಗೆದ್ದಿತು.

ಸೋಮವಾರ ಮೊದಲು ಬ್ಯಾಟ್ ಮಾಡಿದ ರೋಹಿತ್ ಶರ್ಮಾ ಬಳಗ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 158 ರನ್ ಗಳಿಸಿದರೆ, ಆತಿಥೇಯ ತಂಡ ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ 145 ರನ್ ಪೇರಿಸಿತು.

ಈ ಪಂದ್ಯದಲ್ಲಿ ರೋಹಿತ್ ಜತೆ ವಿಕೆಟ್ ಕೀಪರ್ ಬ್ಯಾಟರ್ ರಿಷಭ್ ಪಂತ್ ಭಾರತದ ಇನಿಂಗ್ಸ್ ಆರಂಭಿಸಿದರು. ಆದರೆ ಇಬ್ಬರೂ ಕ್ರಮವಾಗಿ 3 ಹಾಗೂ 9 ರನ್ ಗಳಿಸಿ ಔಟಾದರು. ಸೂರ್ಯಕುಮಾರ್, ದೀಪಕ್ ಹೂಡಾ (22, 14 ಎ.) ಹಾಗೂ ಹಾರ್ದಿಕ್ ಪಾಂಡ್ಯ (27 ರನ್, 20 ಎ.) ತಂಡದ ನೆರವಿಗೆ ನಿಂತರು.




ಸೂರ್ಯಕುಮಾರ್ ಯಾದವ್

ವೆಸ್ಟರ್ನ್ ಆಸ್ಟ್ರೇಲಿಯಾ ತಂಡ, ಅರ್ಷದೀಪ್ ಅವರು ಆರಂಭಿಕ ಸ್ಪೆಲ್‌ನಲ್ಲಿ ನಡೆಸಿದ ಬಿಗುವಾದ ಬೌಲಿಂಗ್ ದಾಳಿಗೆ ನಲುಗಿ 12 ರನ್ ಗಳಿಸುವಷ್ಟರಲ್ಲೇ 4 ವಿಕೆಟ್ ಕಳೆದುಕೊಂಡಿತು. ಕ್ಯಾಮರಾನ್ ಬೆನ್‌ಕ್ರಾಫ್ಟ್ (22) ಮತ್ತು ಮಧ್ಯಮ ಕ್ರಮಾಂಕದಲ್ಲಿ ಸ್ಯಾಮ್ ಫಾನಿಂಗ್ (59 ರನ್, 53 ಎ.) ಮರುಹೋರಾಟ ನಡೆಸಿದರೂ ಸೋಲು ತಪ್ಪಿಸಲು ಆಗಲಿಲ್ಲ.


ಭಾರತ ತಂಡ ಅ.13 ರಂದು ಇದೇ ತಂಡದ ವಿರುದ್ಧ ಇನ್ನೊಂದು ಪಂದ್ಯ ಆಡಲಿದೆ. ಆ ಬಳಿಕ ಬ್ರಿಸ್ಬೇನ್‌ಗೆ ಪ್ರಯಾಣಿಸಲಿದ್ದು, ಅಲ್ಲಿ ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ಎದುರು ಅಭ್ಯಾಸ ಪಂದ್ಯ ಆಡಲಿದೆ.

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 158 (ದೀಪಕ್ ಹೂಡಾ 22, ಸೂರ್ಯಕುಮಾರ್ ಯಾದವ್ 52, ಹಾರ್ದಿಕ್ ಪಾಂಡ್ಯ 27, ದಿನೇಶ್ ಕಾರ್ತಿಕ್ ಔಟಾಗದೆ 19, ಜೇಸನ್ ಬೆರೆನ್‌ಡೋರ್ಫ್ 26ಕ್ಕೆ 2, ಮ್ಯಾಥ್ಯೂ ಕೆಲಿ 43ಕ್ಕೆ 2, ಆ್ಯಂಡ್ರ್ಯೂ ಟೈ 34ಕ್ಕೆ 1) ವೆಸ್ಟರ್ನ್ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 145 (ಕ್ಯಾಮರಾನ್ ಬೆನ್‌ಕ್ರಾಫ್ಟ್ 22, ಸ್ಯಾಮ್ ಫಾನಿಂಗ್ 59, ಹಾಮಿಶ್ ಮೆಕೆಂಜಿ 19, ಅರ್ಷದೀಪ್ ಸಿಂಗ್ 6ಕ್ಕೆ 3, ಭುವನೇಶ್ವರ್ ಕುಮಾರ್ 26ಕ್ಕೆ 2, ಯಜುವೇಂದ್ರ ಚಾಹಲ್ 15ಕ್ಕೆ 2) ಫಲಿತಾಂಶ: ಭಾರತಕ್ಕೆ 13 ರನ್ ಗೆಲುವು


ಅಮೆರಿಕದ ಮೂವರಿಗೆ ಅರ್ಥಶಾಸ್ತ್ರ ನೊಬೆಲ್ ಪ್ರಶಸ್ತಿ



ಡೌಗ್ಲಸ್ ಡಬ್ಲ್ಯು ಡೈಮಂಡ್



ಬೆನ್ ಬೆರ್ನಾಂಕೆ



ಫಿಲಿಪ್ ಎಚ್. ಡಿಬ್‌ವಿಗ್

ಸ್ಟಾಕ್‌ಹೋಂ (ಎಎಫ್‌ಪಿ): ಅಮೆರಿಕದ ಫೆಡರಲ್ ರಿಸರ್ವ್‌ನ ಮಾಜಿ ಮುಖ್ಯಸ್ಥ ಬೆನ್ ಬರ್ನಾಂಕೆ ಸೇರಿದಂತೆ ಅಮೆರಿಕದ ಮೂವರು ಈ ವರ್ಷದ ಅರ್ಥಶಾಸ್ತ್ರ ಕ್ಷೇತ್ರದ ನೊಬೆಲ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಆರ್ಥಿಕತೆಯಲ್ಲಿ ಬ್ಯಾಂಕ್‌ಗಳ ಪಾತ್ರ ಕುರಿತ ವಿಶ್ಲೇಷಣೆಯಲ್ಲಿ ಅವರ ಕೊಡುಗೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಡೌಗ್ಲಸ್ ಡೈಮಂಡ್ ಮತ್ತು ಫಿಲಿಪ್ ಡಿಬ್‌ವಿಗ್ ಈ ಪ್ರಶಸ್ತಿಗೆ ಭಾಜನರಾಗಿರುವ ಇತರ ಇಬ್ಬರು. 'ಹಣಕಾಸು ಮಾರುಕಟ್ಟೆಯ ನಿಯಂತ್ರಣ ಸೇರಿದಂತೆ ಆರ್ಥಿಕತೆಯಲ್ಲಿ ಬ್ಯಾಂಕ್‌ಗಳ ಪಾತ್ರ ಕುರಿತು ಅರಿವು ಮೂಡಿಸುವಲ್ಲಿ ಈ ಮೂವರ ಕೊಡುಗೆಯು ಗಣನೀಯವಾದುದು' ಎಂದು ತೀರ್ಪುಗಾರರು ಅಭಿಪ್ರಾಯಪಟ್ಟಿದ್ದಾರೆ.

ಆರ್ಥಿಕ ಬಿಕ್ಕಟ್ಟು ಎದುರಿಸಲು ಹಾಗೂ ಹಣಕಾಸು ಮಾರುಕಟ್ಟೆಯನ್ನು ನಿರ್ವಹಣೆ ಮಾಡುವಲ್ಲಿ ಈ ಮೂವರ ವಿಶ್ಲೇಷಣೆಗಳು ಪ್ರಾಯೋಗಿಕವಾಗಿ ಹೆಚ್ಚು ಮಹತ್ವ ಪಡೆದುಕೊಂಡಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

68 ವರ್ಷದ ಬೆರ್ನಾಂಕೆ ಅವರು 2006ರಿಂದ 2014ರವರೆಗೆ ಅಮೆರಿಕ ಫೆಡರಲ್ ರಿಸರ್ವ್‌ನ ಅಧ್ಯಕ್ಷರಾಗಿದ್ದರು. 1953ರಲ್ಲಿ ಜನಿಸಿದ್ದ ಡೈಮಂಡ್ ಅವರು ಷಿಕಾಗೊ ಯೂನಿವರ್ಸಿಟಿಯ ಪ್ರೊಫೆಸರ್ ಆಗಿದ್ದರೆ, 67 ವರ್ಷದ ಫಿಲಿಪ್ ಎಚ್.ಡಿಬ್‌ವಿಗ್ ಅವರು ಸೇಂಟ್ ಲೂಯಿಸ್‌ನ ವಾಷಿಂಗ್ಟನ್ ಯೂನಿವರ್ಸಿಟಿಯ ಪ್ರೊಫೆಸರ್ ಆಗಿದ್ದಾರೆ. ಪ್ರಶಸ್ತಿಯ ಒಟ್ಟು ಮೊತ್ತ ಸುಮಾರು ₹ 7.44 ಕೋಟಿ ಆಗಿದೆ. ಸ್ಟಾಕ್‌ಹೋಂನಲ್ಲಿ ಡಿಸೆಂಬರ್ 10ರಂದು ನಡೆಯಲಿರುವ ಸಮಾರಂಭದಲ್ಲಿ ರಾಜ 16ನೇ ಕಾರ್ಲ್ ಗುಸ್ತಫ್ ಅವರು ಪ್ರಶಸ್ತಿ ಪ್ರದಾನ ಮಾಡುವರು.

ಇರಾನ್: ತಗ್ಗದ ಆಕ್ರೋಶ, ಗುಂಡಿಗೆ ಯುವಕ ಬಲಿ

ದುಬೈ (ಎಪಿ): ಧಾರ್ಮಿಕ ವಸ್ತ್ರಸಂಹಿತೆಯ ಕಟ್ಟುಪಾಡು ವಿರೋಧಿಸಿ ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆ, ಹಿಂಸಾಚಾರ ಇನ್ನಷ್ಟು ತೀವ್ರಗೊಂಡಿದೆ. ರಸ್ತೆಗಳಲ್ಲಿ ಗುಂಡಿನ ಮೊರೆತ ಸಾಮಾನ್ಯವಾಗಿದೆ. ಮಂಗಳವಾರವು ಭದ್ರತಾ ಸಿಬ್ಬಂದಿ ಹಾರಿಸಿದ ಗುಂಡಿಗೆ ಪ್ರತಿಭಟನಕಾರನೊಬ್ಬರು ಮೃತಪಟ್ಟಿದ್ದಾರೆ.

ನಗರ, ಪಟ್ಟಣ, ಗ್ರಾಮಗಳಿಗೂ ಪ್ರತಿಭಟನೆ ವ್ಯಾಪ್ತಿಸಿದೆ. ಧಾರ್ಮಿಕ ವಸ್ತ್ರ ಸಂಹಿತೆ ಉಲ್ಲಂಘಿಸಲಾಗಿದೆ ಎಂದು ಟೆಹರಾನ್‌ನಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದ 22 ವರ್ಷದ ಮಹಿಳೆ ಮಾಶಾ ಅಮೈನಿ ಅವರ ಶಂಕಾಸ್ಪದ ಸಾವಿನ ಹಿಂದೆಯೇ ಸೆ. 17ರಿಂದ ಇರಾನ್ ನಾದ್ಯಂತ ಪ್ರತಿಭಟನೆ ಭುಗಿಲೆದ್ದಿದೆ.

ಹಿಂಸಾತ್ಮಕ ಘಟನೆಗಳು, ಭದ್ರತಾ ಸಿಬ್ಬಂದಿ ಗುಂಡಿನಿಂದ ಎಷ್ಟು ಮಂದಿ ಪ್ರತಿಭಟನಕಾರರು ಮೃತಪಟ್ಟಿದ್ದಾರೆ ಎಂಬ ಬಗ್ಗೆ ಖಚಿತ ಮಾಹಿತಿ ಇಲ್ಲ. ಅಧಿಕೃತ ಟಿ.ವಿ. ಮಾಧ್ಯಮದ ವರದಿ ಅನುಸಾರ ಸೆ.24ರಲ್ಲಿ ಇದ್ದಂತೆ 41 ಮಂದಿ ಮೃತಪಟ್ಟಿದ್ದರು. ಆ ನಂತರದ ಸಾವುಗಳ ಕುರಿತ ವರದಿಗಳನ್ನು ಸರ್ಕಾರ ಖಚಿತಪಡಿಸಿಲ್ಲ.

ವರದಿಗಳ ಪ್ರಕಾರ, ಸಲಸ್ ಬಾಬಾ ಜಾನಿ ಗ್ರಾಮದಲ್ಲಿ ಭದ್ರತಾ ಸಿಬ್ಬಂದಿಯ ಗುಂಡಿನಿಂದ 22 ವರ್ಷದ ಯುವಕ ಮೃತಪಟ್ಟಿದ್ದಾನೆ. ಒಸ್ಲೊ ಮೂಲದ ಮಾನವ ಹಕ್ಕುಗಳ ಸಂಘಟನೆ ಪ್ರಕಾರ, ಈವರೆಗೆ ಸುಮಾರು 185 ಜನರು ಸತ್ತಿದ್ದಾರೆ. ಈ ಪೈಕಿ ಝುಹೆದಾನ್ ನಗರದಲ್ಲಿಯೇ ಹಿಂಸಾ ಕೃತ್ಯಗಳಿಂದ ಸುಮಾರು 90 ಜನ ಮೃತಪಟ್ಟಿದ್ದಾರೆ.

ಅಮೈನಿ ಅವರ ಮೇಲೆ ಪೊಲೀಸರು ದೌರ್ಜನ್ಯ ಎಸಗಿಲ್ಲ ಎಂದು ಸರ್ಕಾರ ಪ್ರತಿಪಾದಿಸಿದೆ. ಆದರೆ, ಹಿಜಾಬ್ ಧರಿಸುವ ಕುರಿತಂತೆ ಅವರು ಸಂಘರ್ಷ ನಡೆಸಿರುವ ವಿಡಿಯೊಗಳು ಹರಿದಾಡಿದ್ದು, ಪೊಲೀಸರು ದೌರ್ಜನ್ಯ ಎಸಗಿದ್ದಾರೆ ಎಂಬ ಅಭಿಪ್ರಾಯ ದಟ್ಟವಾಗಿದೆ.

ವೆನಿಜುವೆಲಾ:ಭೂಕುಸಿತ 22 ಸಾವು

ಲಾಸ್ ಟೆಜೆರಿಯಾಸ್ (ಎಪಿ): ಧಾರಾಕಾರ ಮಳೆಯಿಂದಾಗಿ ವೆನಿಜುವೆಲಾದ ವಿವಿಧೆಡೆ ಪ್ರವಾಹ ಪರಿಸ್ಥಿತಿ ತಲೆದೋರಿದೆ. ಭೂಕುಸಿತದಿಂದ ಅವಶೇಷಗಳಡಿ ಸಿಕ್ಕು 22 ಜನರು ಮೃತಪಟ್ಟಿದ್ದಾರೆ. ವಿವಿಧೆಡೆ ಜನಜೀವನ ಅಸ್ತವ್ಯಸ್ತಗೊಂಡಿದೆ. 12ಕ್ಕೂ ಹೆಚ್ಚು ಜನರು ನಾಪತ್ತೆಯಾಗಿದ್ದಾರೆ.

ದೊಡ್ಡ ಪ್ರಮಾಣದಲ್ಲಿ ಭೂಕುಸಿತವಾಗಿದೆ. ಈವರೆಗೆ 22 ಜನರು ಮೃತಪಟ್ಟಿದ್ದು, 52 ಜನರು ನಾಪತ್ತೆಯಾಗಿದ್ದಾರೆ ಎಂದು ಉಪಾಧ್ಯಕ್ಷರಾದ ಡೆಲ್ಸಿ ರೋಡ್ರಿಗ್ವೆಜ್ ಅವರು ಸರ್ಕಾರಿ ಟಿ.ವಿಗೆ ತಿಳಿಸಿದ್ದಾರೆ.

ಡಿಜಿಟಲ್ ಸಾಕ್ಷರತೆ ಕಾರ್ಯಕ್ರಮಕ್ಕೆ ಧೋನಿ ಚಾಲನೆ

'ಶಿಕ್ಷಣದಷ್ಟೇ ಕ್ರೀಡೆಯೂ ಮಹತ್ವದ್ದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿಯೊಬ್ಬರ ಜೀವನದಲ್ಲಿಯೂ ಶಿಕ್ಷಣವು ಪ್ರಮುಖ ಘಟ್ಟ. ನಾನು ವಿದ್ಯಾಭ್ಯಾಸ ಮಾಡಿದ ಶಾಲೆಯಿಂದಾಗಿಯೇ ಇವತ್ತು ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗಿದೆ' ಎಂದು ಕ್ರಿಕೆಟಿಗ ಮಹೇಂದ್ರಸಿಂಗ್ ಧೋನಿ ಹೇಳಿದರು.

ನಗರದ ಹೊರವಲಯದ ಕೂಡ್ಲುನಲ್ಲಿರುವ ಎಂ.ಎಸ್. ಧೋನಿ ಗ್ಲೋಬಲ್ ಶಾಲೆಯಲ್ಲಿ ಸೋಮವಾರ ಒಂದು ಲಕ್ಷ ವಿದ್ಯಾರ್ಥಿಗಳಿಗೆ ಮೈಕ್ರೊಸಾಫ್ಟ್ ಶೈಕ್ಷಣಿಕ ಸಾಧನಗಳ ಕುರಿತು ಶಿಕ್ಷಣ ನೀಡುವ ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮ ಉದ್ಘಾಟಿಸಿದ ಅವರು ಸಂವಾದ ನಡೆಸಿದರು.

'ಶಾಲಾ ಜೀವನದಿಂದ ನಾವು ಬಹಳಷ್ಟು ವಿಷಯಗಳನ್ನು ಕಲಿಯುತ್ತೇವೆ. ಶಾಲೆಗಳಲ್ಲಿ ಪಾಠದೊಂದಿಗೆ ಆಟಕ್ಕೂ ಅವಕಾಶವಿರುತ್ತದೆ. ಈ ಅವಕಾಶವನ್ನು ಬಳಸಿಕೊಳ್ಳಬೇಕು. ಎಷ್ಟು ಸಾಧ್ಯವೋ ಅಷ್ಟು ಹೆಚ್ಚು ಆಟೋಟಗಳಲ್ಲಿ ತೊಡಗಿಕೊಳ್ಳಬೇಕು. ಓದಿನ ಏಕತಾನತೆಯನ್ನು ಕಳೆಯಲು ಇದು ಸಹಕಾರಿ. ಅಲ್ಲದೇ ದೇಹ ಹಾಗೂ ಮನಸ್ಸು ಆರೋಗ್ಯವಾಗಿರಲು ಕ್ರೀಡೆಗಳು ಬೇಕೆಬೇಕು. ನನ್ನ ಜೀವನ ಬದಲಾಗಿದ್ದೇ ಕ್ರೀಡೆಯಿಂದ' ಎಂದರು.

'ಪರೀಕ್ಷೆಯಲ್ಲಿ ಅಂಕ ಗಳಿಕೆ ಮಹತ್ವದ್ದು. ಆದರೆ ಅದರಷ್ಟೇ ಮುಖ್ಯವಾಗಿರುವುದು ವ್ಯಕ್ತಿತ್ವ. ನಿಮ್ಮ ಕಿರಿಯರನ್ನು ಪ್ರೀತಿಸಿ, ಹಿರಿಯರನ್ನು ಗೌರವಿಸಿ. ಶಿಕ್ಷಕರು, ಪಾಲಕರನ್ನು ಗೌರವಿಸಬೇಕು. ಯಾವುದೇ ಸಂದರ್ಭದಲ್ಲಿಯೂ ನಕಾರಾತ್ಮಕ ಭಾವನೆಗಳು ಬರಲು ಅವಕಾಶ ನೀಡಬೇಡಿ' ಎಂದು ಸಲಹೆ ನೀಡಿದರು.



ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಕ್ರಿಕೆಟಿಗ ಮಹೇಂದ್ರಸಿಂಗ್ ಧೋನಿ –ಪ್ರಜಾವಾಣಿ ಚಿತ್ರ

ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮದಲ್ಲಿ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳ ಒಂದು ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ತಾಂತ್ರಿಕ ತರಬೇತಿ ನೀಡುವ ಗುರಿ ಇದೆ. ಅದಕ್ಕಾಗಿ ವಿವಿಧ ಹಂತದಲ್ಲಿ ಒಂದು ಸಾವಿರ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ ಎಂದು ಸಂಘಟಕರು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಸಂಸ್ಥಾಪಕ ಅಧ್ಯಕ್ಷ ಆರ್. ಚಂದ್ರಶೇಖರ್, ಭುವನೇಶ್ವರಿ ಚಂದ್ರಶೇಖರ್, ಕಾರ್ಯನಿರ್ವಹಣೆ ವಿಭಾಗದ ನಿರ್ದೇಶಕರಾದ ವಿನೀತ್ ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

ಟಿ20: ಭಾರತಕ್ಕೆ ಸುಲಭದ ತುತ್ತಾದ ಥಾಯ್ಲೆಂಡ್

ಸಿಲೆಟ್ (ಪಿಟಿಐ): ಕ್ರಿಕೆಟ್ ಕ್ಷೇತ್ರದಲ್ಲಿ ಅಂಬೆಗಾಲಿಡುತ್ತಿರುವ ಥಾಯ್ಲೆಂಡ್ ತಂಡವು ಸೋಮವಾರ ನಡೆದ ಏಷ್ಯಾಕಪ್ ಮಹಿಳೆಯರ ಟಿ20 ಪಂದ್ಯದಲ್ಲಿ ಭಾರತಕ್ಕೆ ಸುಲಭದ ತುತ್ತಾಯಿತು.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಹರ್ಮನ್‌ಪ್ರೀತ್ ವಿಶ್ರಾಂತಿ ಪಡೆದಿದ್ದರಿಂದ ಸ್ಮೃತಿ ಮಂದಾನ ತಂಡವನ್ನು ಮುನ್ನಡೆಸಿದರು. ಥಾಯ್ಲೆಂಡ್ ತಂಡವು ಭಾರತದ ಬೌಲರ್‌ಗಳ ಮುಂದೆ ದೊಡ್ಡ ಮೊತ್ತ ಗಳಿಸಲಿಲ್ಲ. ಅದರಿಂದಾಗಿ 15.1 ಓವರ್‌ಗಳಲ್ಲಿ 37 ರನ್ ಗಳಿಸಿ ಆಲೌಟ್ ಆಯಿತು. ಭಾರತ 6ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 40 ರನ್ ಗಳಿಸಿತು.

ಸ್ನೇಹಾ ರಾಣಾ ಮೂರು, ತಲಾ ಎರಡು ವಿಕೆಟ್ ಗಳಿಸಿದ ದೀಪ್ತಿ ಶರ್ಮಾ ಹಾಗೂ ರಾಜೇಶ್ವರಿ ಗಾಯಕವಾಡ ಅವರ ದಾಳಿಯ ಮುಂದೆ ಥಾಯ್ಲೆಂಡ್ ಬ್ಯಾಟಿಂಗ್ ಪಡೆ ಕುಸಿಯಿತು. ಆದರೆ ರಕ್ಷಣಾತ್ಮಕ ಆಟವಾಡುವ ಮೂಲಕ 15 ಓವರ್‌ಗಳನ್ನು ಎದುರಿಸಿದ್ದು ವಿಶೇಷ.

ಈಗಾಗಲೇ ಭಾರತವು ಸೆಮಿಫೈನಲ್ ಪ್ರವೇಶಿಸಿದೆ. ಅಂಕಪಟ್ಟಿಯಲ್ಲಿ ಅಗ್ರಸ್ಥಾನವನ್ನೂ ಉಳಿಸಿಕೊಂಡಿದೆ.

ಭಾರತ–ದಕ್ಷಿಣ ಆಫ್ರಿಕಾ ಏಕದಿನ ಸರಣಿಯ ಮೂರನೇ ಪಂದ್ಯ ಇಂದು

ಸರಣಿ ಗೆಲುವಿನ ಕನಸು

ನವದೆಹಲಿ (ಪಿಟಿಐ): ಎಡಗೈ ಬ್ಯಾಟರ್ ಶಿಖರ್ ಧವನ್ ಅವರಿಗೆ ತಮ್ಮ ತವರಿನ ಅಂಗಳದಲ್ಲಿ ಭಾರತ ತಂಡವನ್ನು ಏಕದಿನ ಕ್ರಿಕೆಟ್‌ನಲ್ಲಿ ಮುನ್ನಡೆಸುವ ಅವಕಾಶ ಲಭಿಸಿದೆ.

ಮಂಗಳವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಸರಣಿಯ ಮೂರನೇ ಪಂದ್ಯದಲ್ಲಿ ಅವರು ತಂಡವನ್ನು ಮುನ್ನಡೆಸಲಿದ್ದಾರೆ. ಆದರೆ ಸರಣಿಯ ಕಳೆದೆರಡೂ ಪಂದ್ಯಗಳಲ್ಲಿ ಶಿಖರ್ ಹಾಗೂ ಶುಭಮನ್ ಗಿಲ್ ಜೋಡಿಯು ಉತ್ತಮ ಆರಂಭ ನೀಡುವಲ್ಲಿ ಯಶಸ್ವಿಯಾಗಿಲ್ಲ. ಮೊದಲ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ಹಾಗೂಶ್ರೇಯಸ್ ಅಯ್ಯರ್ ಮಿಂಚಿದ್ದರು. ಆದರೆ ಆ ಪಂದ್ಯದಲ್ಲಿ ತಂಡ ಸೋತಿತ್ತು.

ಭಾನುವಾರ ರಾಂಚಿಯಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ಅಜೇಯ ಶತಕ ಹಾಗೂ ಇಶಾನ್ ಕಿಶನ್ 93 ರನ್ ಗಳಿಸಿ ತಂಡವನ್ನು ಗೆಲ್ಲಿಸಿದ್ದರು. ಇದರಿಂದಾಗಿ ಮೂರು ಪಂದ್ಯಗಳ ಸರಣಿಯು 1–1ರಿಂದ ಸಮಬಲವಾಗಿದೆ. ಕೊನೆಯ ಪಂದ್ಯದಲ್ಲಿ ಜಯಿಸುವ ತಂಡವು ಸರಣಿ ಗೆಲುವು ಸಾಧಿಸಲಿರುವುದರಿಂದ ಕುತೂಹಲ ಗರಿಗೆದರಿದೆ.

ಶಿಖರ್ ಈ ಸರಣಿಯಲ್ಲಿ ಇದುವರೆಗೆ ಕೇವಲ 17 ರನ್ ಗಳಿಸಿದ್ದಾರೆ. ಗಿಲ್ ಕೂಡ ತಮಗೆ ಸಿಕ್ಕ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡಿಲ್ಲ. ಸಂಜು ಸ್ಯಾಮ್ಸನ್ ಉತ್ತಮ ಲಯದಲ್ಲಿರುವುದರಿಂದ ಮಧ್ಯಮ ಕ್ರಮಾಂಕ ಬಲಿಷ್ಠವಾಗಿದೆ. ಬೌಲಿಂಗ್ ವಿಭಾಗದಲ್ಲಿ ಮೊಹಮ್ಮದ್ ಸಿರಾಜ್, ಶಹಬಾಜ್ ಅಹಮದ್ ಹಾಗೂ ಶಾರ್ದೂಲ್ ಪ್ರಮುಖ ಶಕ್ತಿಯಾಗಿದ್ದಾರೆ.

ಆದರೆ ಆತಿಥೇಯರು ಸುಲಭದ ಗೆಲುವನ್ನು ನಿರೀಕ್ಷಿಸುವಂತಿಲ್ಲ. ಮೊದಲ ಪಂದ್ಯದಲ್ಲಿ ಗೆದ್ದಿದ್ದ ದಕ್ಷಿಣ ಆಫ್ರಿಕಾ ಎರಡನೇ ಪಂದ್ಯದಲ್ಲಿ ಬೌಲಿಂಗ್ ವಿಭಾಗದಲ್ಲಿ ಹಾಗೂ ಅಗ್ರಕ್ರಮಾಂಕದ ಬ್ಯಾಟಿಂಗ್‌ನಲ್ಲಿ ದುರ್ಬಲವಾಗಿತ್ತು. ಆದರೆ, ಡೇವಿಡ್ ಮಿಲ್ಲರ್, ರೀಜಾ ಹೆನ್ರಿಕ್ಸ್ ಹಾಗೂ ಏಡನ್ ಮರ್ಕರಂ ಎರಡೂ ಪಂದ್ಯಗಳಲ್ಲಿ ಉತ್ತಮ ಸಾಮರ್ಥ್ಯ ಮೆರೆದಿದ್ದಾರೆ. ಕಗಿಸೊ ರಬಾಡ, ಲುಂಗಿ ಗಿಡಿ ಹಾಗೂ ವೇಯ್ನ್ ಪಾರ್ನೆಲ್ ಬೌಲಿಂಗ್‌ನಲ್ಲಿ ಮಿಂಚುತ್ತಿರುವುದರಿಂದಾಗಿ ತಂಡವು ಸಮತೋಲನಗೊಂಡಿದೆ. ಅದರಿಂದಾಗಿ ಆತಿಥೇಯರು ಯಾವುದೇ ಹಂತದಲ್ಲಿ ಹಿಡಿತ ಸಡಿಲಿಸಿದರೂ ಪ್ರವಾಸಿ ಬಳಗವು ಅದರ ಲಾಭ ಪಡೆಯುವುದು ಖಚಿತ.

ಆರಂಭ: ಮಧ್ಯಾಹ್ನ 1.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್.



ಮೊಹಮ್ಮದ್ ಸಿರಾಜ್ ಹಾಗೂ ಶಿಖರ್ ಧವನ್ –ಪಿಟಿಐ ಚಿತ್ರ

ಪಿಚ್ ಹೇಗಿದೆ?

ರಾಜಧಾನಿಯ ಅರುಣ್ ಜೇಟ್ಲಿ ಕ್ರಿಕೆಟ್ ಕ್ರೀಡಾಂಗಣದ ಪಿಚ್ ಮೊದಲಿನಿಂದಲೂ ನಿಧಾನಗತಿಯ ಬೌಲರ್‌ಗಳಿಗೆ ಸಹಕಾರಿಯಾಗಿತ್ತು. ಆದರೆ 2021ರ ಐಪಿಎಲ್‌ನಲ್ಲಿ ಇಲ್ಲಿ ನಡೆದ ಪಂದ್ಯಗಳಲ್ಲಿ ಬ್ಯಾಟರ್‌ಗಳು ವಿಜೃಂಭಿಸಿದ್ದರು. ಅದರಿಂದಾಗಿ ಈ ಪಂದ್ಯದಲ್ಲಿ ಹೆಚ್ಚು ರನ್‌ಗಳು ಹರಿಯುವ ನಿರೀಕ್ಷೆ ಇದೆ. ಇಲ್ಲಿ ಇದುವರೆಗೆ ಭಾರತ ತಂಡವು 21 ಏಕದಿನ ಪಂದ್ಯಗಳಲ್ಲಿ ಆಡಿದೆ. ಅದರಲ್ಲಿ 12ರಲ್ಲಿ ಜಯಿಸಿದೆ. ಏಳರಲ್ಲಿ ಸೋತಿದೆ. ಎರಡು ಪಂದ್ಯಗಳ ಫಲಿತಾಂಶ ಹೊರಹೊಮ್ಮಿಲ್ಲ. 2019ರಲ್ಲಿ ಇಲ್ಲಿ ಕೊನೆಯ ಬಾರಿಗೆ ಏಕದಿನ ಪಂದ್ಯ ನಡೆದಿತ್ತು. ಅದರಲ್ಲಿ ಭಾರತವು ಆಸ್ಟ್ರೇಲಿಯಾ ಎದುರು ಮಣಿದಿತ್ತು.

ಅಮೆರಿಕ ತಂಡಕ್ಕೆ ಭಾರತ ಸವಾಲು

ಫುಟ್‌ಬಾಲ್: ಫಿಫಾ 17 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಇಂದಿನಿಂದ

ಭುವನೇಶ್ವರ (ಪಿಟಿಐ): ಯುವ ಆಟಗಾರ್ತಿಯರಿಗೆ ಪ್ರತಿಭೆ ತೋರಿಸಲು ವೇದಿಕೆಯಾಗಿರುವ ಫಿಫಾ 17 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಮಂಗಳವಾರ ಚಾಲನೆ ದೊರೆಯಲಿದೆ.

ಈ ಟೂರ್ನಿಗಾಗಿ ನವೀಕೃತಗೊಂಡಿರುವ ಕಳಿಂಗಾ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಭಾರತ ತಂಡ, ಅಮೆರಿಕದ ಸವಾಲು ಎದುರಿಸಲಿದೆ.

ಆತಿಥೇಯರು ಎಂಬ ಕಾರಣಕ್ಕೆ ಭಾರತಕ್ಕೆ ಫಿಫಾ ವಿಶ್ವಕಪ್‌ನಲ್ಲಿ ಆಡುವ ಅವಕಾಶ ಲಭಿಸಿದೆ. ಭಾರತ ಅಲ್ಲದೆ ಮೊರೊಕ್ಕೊ ಮತ್ತು ತಾಂಜಾನಿಯಾ ತಂಡಗಳು ಇದೇ ಮೊದಲ ಬಾರಿ ಈ ಪ್ರತಿಷ್ಠಿತ ಟೂರ್ನಿಯಲ್ಲಿ ಆಡುತ್ತಿವೆ.

ಅ.30ರ ವರೆಗೆ ನಡೆಯಲಿರುವ ಟೂರ್ನಿಯಲ್ಲಿ ಒಟ್ಟು 16 ತಂಡಗಳು ಪಾಲ್ಗೊಂಡಿವೆ. ಭುವನೇಶ್ವರದ ಕಳಿಂಗಾ ಕ್ರೀಡಾಂಗಣ, ಗೋವಾದ ಪಂಡಿತ್ ಜವಾಹರಲಾಲ್ ನೆಹರು ಕ್ರೀಡಾಂಗಣ ಮತ್ತು ನವೀ ಮುಂಬೈನ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ.

ಭಾರತವು ಅಮೆರಿಕ ತಂಡದ ಎದುರು ಗೆಲ್ಲುವುದು ದೂರದ ಮಾತೇ ಸರಿ. ಕನಿಷ್ಠ ಡ್ರಾ ಸಾಧಿಸಿ ಒಂದು ಪಾಯಿಂಟ್ ಗಿಟ್ಟಿಸುವ ಗುರಿಯೊಂದಿಗೆ ಅಷ್ಟಮ್ ಉರಾಂವ್ ನೇತೃತ್ವದ ತಂಡ ಕಣಕ್ಕಿಳಿಯಲಿದೆ.

‘ನಮ್ಮ ಎದುರು ಅಮೆರಿಕ ಗೆಲ್ಲುವ ಫೇವರಿಟ್ ಆಗಿದೆ. ಅದರಲ್ಲಿ ಯಾವುದೇ ಅನುಮಾನ ಇಲ್ಲ. ಆದರೆ 90–95 ನಿಮಿಷಗಳ ಆಟದಲ್ಲಿ ಏನು ಬೇಕಾದರೂ ಆಗಬಹುದು. ಅಮೆರಿಕ ಎದುರಿನ ಪಂದ್ಯದಲ್ಲಿ ನಮಗೂ ಪಾಯಿಂಟ್ ಗಿಟ್ಟಿಸಬಹುದು ಎಂಬ ಆತ್ಮವಿಶ್ವಾಸ ಇದೆ’ ಎಂದು ಕೋಚ್ ಥಾಮಸ್ ಡೆನೆರ್ಬಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಈ ಟೂರ್ನಿಗೆ ಫೆಬ್ರುವರಿಯಿಂದಲೇ ಸಿದ್ಧತೆ ನಡೆಸಿದ್ದೇವೆ. ನಾವು ಕ್ವಾರ್ಟರ್ ಫೈನಲ್ ಪ್ರವೇಶಿಸಿದರೆ ಅದು ಮಹಾನ್ ಸಾಧನೆ. ಇದೀಗ ಮಂಗಳವಾರದ ಪಂದ್ಯದ ಮೇಲೆ ಗಮನ ಕೇಂದ್ರೀಕರಿಸಿದ್ದೇವೆ’ ಎಂದರು.

ಅಮೆರಿಕ ತಂಡ ಸತತ ಮೂರನೇ ಬಾರಿ ಹಾಗೂ ಒಟ್ಟಾರೆಯಾಗಿ ಐದನೇ ಸಲ ವಿಶ್ವಕಪ್‌ನಲ್ಲಿ ಆಡುತ್ತಿದೆ. 2008ರಲ್ಲಿ ‘ರನ್ನರ್ಸ್ ಅಪ್’ ಆಗಿದ್ದು ಈ ತಂಡದ ಉತ್ತಮ ಸಾಧನೆಯಾಗಿದೆ.

ಇಂದಿನ ಪಂದ್ಯಗಳು

ಕಳಿಂಗಾ ಕ್ರೀಡಾಂಗಣ, ಭುವನೇಶ್ವರ

ಮೊರೊಕ್ಕೊ–ಬ್ರೆಜಿಲ್ (ಸಂಜೆ 4.30)

ಭಾರತ– ಅಮೆರಿಕ (ರಾತ್ರಿ 8)

ನೆಹರು ಕ್ರೀಡಾಂಗಣ, ಗೋವಾ

ಚಿಲಿ– ನ್ಯೂಜಿಲೆಂಡ್ (ಸಂಜೆ 4.30)

ಜರ್ಮನಿ– ನೈಜೀರಿಯಾ (ರಾತ್ರಿ 8)



ಭಾರತ ತಂಡದ ಆಟಗಾರ್ತಿಯರು ಅಭ್ಯಾಸ ನಡೆಸಿದರು –ಟ್ವಿಟರ್ ಚಿತ್ರ

ಪಾಲ್ಗೊಳ್ಳುವ ತಂಡಗಳು

‘ಎ’ ಗುಂಪು: ಭಾರತ, ಅಮೆರಿಕ, ಮೊರೊಕ್ಕೊ, ಬ್ರೆಜಿಲ್; ‘ಬಿ’ ಗುಂಪು: ಜರ್ಮನಿ, ನೈಜೀರಿಯಾ, ಚಿಲಿ, ನ್ಯೂಜಿಲೆಂಡ್; ‘ಸಿ’ ಗುಂಪು: ಸ್ಪೇನ್, ಕೊಲಂಬಿಯಾ, ಮೆಕ್ಸಿಕೊ, ಚೀನಾ; ‘ಡಿ’ ಗುಂಪು: ಜಪಾನ್, ತಾಂಜಾನಿಯಾ, ಕೆನಡಾ ಫ್ರಾನ್ಸ್

ಎಎಫ್‌ಸಿ ಏಷ್ಯಾ ಕಪ್‌ಗೆ ಭಾರತ ಅರ್ಹತೆ

ದಮ್ಮಾಮ್, ಸೌದಿ ಅರೇಬಿಯಾ (ಪಿಟಿಐ): ಭಾರತ ತಂಡದವರು ಮುಂದಿನ ವರ್ಷ ನಡೆಯಲಿರುವ 17 ವರ್ಷದೊಳಗಿನವರ ಎಎಫ್‌ಸಿ ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಪಡೆದುಕೊಂಡರು.

ಇಲ್ಲಿನ ಮೊಹಮ್ಮದ್ ಬಿನ್ ಫಹದ್ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಅರ್ಹತಾ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಭಾರತ 1–2ರಲ್ಲಿ ಆತಿಥೇಯ ಸೌದಿ ಅರೇಬಿಯಾ ಎದುರು ಸೋತಿತು. ಆದರೂ ಅರ್ಹತೆ ಗಿಟ್ಟಿಸಿಕೊಂಡಿತು.

ಅರ್ಹತಾ ಸುತ್ತಿನಲ್ಲಿ 10 ಗುಂಪುಗಳಲ್ಲಿ ಮೊದಲ ಸ್ಥಾನ ಪಡೆಯುವ ಎಲ್ಲ ತಂಡಗಳು ಮತ್ತು ಎರಡನೇ ಸ್ಥಾನ ಪಡೆಯುವ ಆರು ಅತ್ಯುತ್ತಮ ತಂಡಗಳು ಅರ್ಹತೆ ಪಡೆದುಕೊಂಡವು. ಎರಡನೇ ಸ್ಥಾನ ಪಡೆದ ಆರು ಅತ್ಯುತ್ತಮ ತಂಡಗಳಲ್ಲಿ ಒಂದಾಗಿರುವ ಕಾರಣ ಭಾರತಕ್ಕೂ ಅವಕಾಶ ಲಭಿಸಿತು.

ಭಾರತ ತಂಡ ಅರ್ಹತಾ ಟೂರ್ನಿಯ ಮೊದಲ ಮೂರು ಪಂದ್ಯಗಳಲ್ಲಿ ಕ್ರಮವಾಗಿ ಮಾಲ್ಡೀವ್ಸ್ (5–0), ಕುವೈತ್ (3–0) ಮತ್ತು ಮ್ಯಾನ್ಮಾರ್ (4–1) ತಂಡಗಳನ್ನು ಮಣಿಸಿತ್ತು.

ಮಯಂಕ್ ಪಡೆಗೆ ಮಹಾರಾಷ್ಟ್ರ ಎದುರಾಳಿ

ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್: ಮೊಹಾಲಿಯಲ್ಲಿ ಇಂದು ಪಂದ್ಯ

- ಹೋದ ವರ್ಷ ಫೈನಲ್ ತಲುಪಿದ್ದ ಕರ್ನಾಟಕ
- ಮನೀಷ್ ಪಾಂಡೆ, ದೇವದತ್ತ ಪಡಿಕ್ಕಲ್ ಮೇಲೆ ನಿರೀಕ್ಷೆ

ಮೊಹಾಲಿ: ರಾಷ್ಟ್ರೀಯ ತಂಡದ ಗಮನ ಸೆಳೆಯುವ ಯತ್ನದಲ್ಲಿರುವ ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಮಂಗಳವಾರ ಇಲ್ಲಿ ಆರಂಭವಾಗಲಿರುವ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಕಣಕ್ಕಿಳಿಯಲಿದೆ.

ಪಂಜಾಬ್ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ನಡೆಯಲಿರುವ ಸಿ ಗುಂಪಿನ ಮೊದಲ ಪಂದ್ಯದಲ್ಲಿ ಮಯಂಕ್ ಬಳಗವು ಮಹಾರಾಷ್ಟ್ರ ತಂಡದ ಎದುರು ಆಡಲಿದೆ. ಕರ್ನಾಟಕದ ಬ್ಯಾಟಿಂಗ್ ಪಡೆಯಲ್ಲಿ ಅನುಭವಿಗಳಾದ ಮನೀಷ್ ಪಾಂಡೆ, ದೇವದತ್ತ ಪಡಿಕ್ಕಲ್ ಅವರಿದ್ದಾರೆ. ಸ್ಪಿನ್ನರ್– ಆಲ್‌ರೌಂಡರ್ ಕೃಷ್ಣಪ್ಪ ಗೌತಮ್ ಹಾಗೂ ಶ್ರೇಯಸ್ ಗೋಪಾಲ್ ಅವರು ಕೂಡ ಇದ್ದಾರೆ. ಉಳಿದಂತೆ ಯುವ ಆಟಗಾರರ ಮೇಲೆ ತಂಡವು ಅವಲಂಬಿತವಾಗಿದೆ. ಅದರಲ್ಲೂ ಬೌಲಿಂಗ್ ಪಡೆಯಲ್ಲಿ ಅನುಭವ ಕೊರತೆ ಎದ್ದು ಕಾಣುತ್ತಿದೆ.

ವಿದ್ವತ್ ಕಾವೇರಪ್ಪ, ವೈಶಾಖ್ ವಿಜಯಕುಮಾರ್ ಹಾಗೂ ಕೌಶಿಕ್ ಅವರ ಮೇಲೆ ವೇಗದ ವಿಭಾಗದ ಹೊಣೆ ಇದೆ. ಮನೋಜ್ ಬಾಂಢಗೆ ಹಾಗೂ ಎಂ. ವೆಂಕಟೇಶ್ ಅವರಿಗೆ ತಮ್ಮ ಪ್ರತಿಭೆಯನ್ನು ತೋರಿಸಲು ಇದು ಸದವಕಾಶ. ‘ಹಾರ್ಡ್ ಹಿಟ್ಟರ್’ ಎಂದೇ ಖ್ಯಾತರಾಗಿರುವ ಅಭಿನವ್ ಮನೋಹರ್ ಹಾಗೂ ಮೈಸೂರಿನ ಸ್ಪಿನ್ನರ್ ಜೆ. ಸುಚಿತ್ ಅವರಿಗೂ ಮತ್ತೊಮ್ಮೆ ತಮ್ಮ ಕೌಶಲ ಸಾಬೀತುಪಡಿಸಲು ಅವಕಾಶವಿದೆ.

ಆದರೆ ಬಿ.ಆರ್. ಶರತ್ ಅವರಿಗೆ ಬ್ಯಾಟಿಂಗ್ ಹಾಗೂ ಕೀಪಿಂಗ್ ಎರಡರಲ್ಲೂ ಲಯಕ್ಕೆ ಮರಳುವ ಅನಿವಾರ್ಯತೆ ಇದೆ. ಹೊಸ ಹುಡುಗ ಲವನೀತ್ ಸಿಸೊಡಿಯಾ ಹಾಗೂ ಎಲ್.ಆರ್. ಚೇತನ್ ಅವರು ತಂಡದಲ್ಲಿದ್ದು ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಅವರು ಉತ್ತಮವಾಗಿ ಆಡಿ ಗಮನ ಸೆಳೆದಿದ್ದರು. ಆದ್ದರಿಂದ ಶರತ್ ಲಯಕ್ಕೆ ಮರಳದಿದ್ದರೆ ಇಬ್ಬರಲ್ಲಿ ಒಬ್ಬರು ಸ್ಥಾನ ಪಡೆಯಬಹುದು.

ಮುಖ್ಯ ಕೋಚ್ ಆಗಿ ಮತ್ತೊಂದು ಇನಿಂಗ್ಸ್ ಆರಂಭಿಸುತ್ತಿರುವ ಪಿ.ವಿ. ಶಶಿಕಾಂತ್ ಅವರ ಎದುರೂ ಕರ್ನಾಟಕ ತಂಡಕ್ಕೆ ‘ಹೊಸ ಶಕ್ತಿ’ ತುಂಬುವ ಸವಾಲು ಇದೆ. ಬಳಗದಲ್ಲಿರುವ ಅನುಭವಿ ಹಾಗೂ ಯುವಪ್ರತಿಭೆಗಳನ್ನು ಸಮರ್ಥವಾಗಿ ದುಡಿಸಿಕೊಳ್ಳುವ ಅವರ ಯೋಜನೆಗಳ ಬಗ್ಗೆ ಈಗ ಕುತೂಹಲ ಗರಿಗೆದರಿದೆ.

ಪಂದ್ಯ ಆರಂಭ: ಸಂಜೆ 4.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಸೆಲೆಕ್ಟ್ 2

ಅಂಕಿ-ಅಂಶಗಳು

38 ಒಟ್ಟು ತಂಡಗಳು

14 ಟೂರ್ನಿಯೊಂದರಲ್ಲಿ ಗರಿಷ್ಠ ಪಂದ್ಯ ಜಯ. ಕರ್ನಾಟಕದ ಸಾಧನೆ

3 ತಮಿಳುನಾಡು ತಂಡವು ಜಯಿಸಿರುವ ಟ್ರೋಫಿಗಳು. ಇದು ಗರಿಷ್ಠ ಸಾಧನೆ

ವಿಜೇತರು (2006-2021)

ವರ್ಷ	ವಿಜೇತ	ರನ್ನರ್ಸ್ ಅಪ್
2006-07	ತಮಿಳುನಾಡು	ಪಂಜಾಬ್
2009-10	ಮಹಾರಾಷ್ಟ್ರ	ಹೈದರಾಬಾದ್
2010-11	ಬಂಗಾಳ	ಮಧ್ಯಪ್ರದೇಶ
2011-12	ಬರೋಡ	ಪಂಜಾಬ್
2012-13	ಗುಜರಾತ್	ಪಂಜಾಬ್
2013-14	ಬರೋಡಾ	ಉತ್ತರಪ್ರದೇಶ
2014-15	ಗುಜರಾತ್	ಪಂಜಾಬ್
2015-16	ಉತ್ತರಪ್ರದೇಶ	ಬರೋಡಾ
2016-17	ಪೂರ್ವವಲಯ	ಕೇಂದ್ರವಲಯ
2017-18	ದೆಹಲಿ	ರಾಜಸ್ಥಾನ
2018-19	ಕರ್ನಾಟಕ	ಮಹಾರಾಷ್ಟ್ರ
2019-20	ಕರ್ನಾಟಕ	ತಮಿಳುನಾಡು
2020-21	ತಮಿಳುನಾಡು	ಬರೋಡಾ
2021-22	ತಮಿಳುನಾಡು	ಕರ್ನಾಟಕ



ಮಯಂಕ್ ಅಗರವಾಲ್

ಹಾಕಿ: ಫೈನಲ್‌ಗೆ ಕರ್ನಾಟಕ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡದವರು ಗುಜರಾತ್‌ನಲ್ಲಿ ನಡೆಯುತ್ತಿರುವ 36ನೇ ರಾಷ್ಟ್ರೀಯ ಕ್ರೀಡಾಕೂಟದ ಹಾಕಿ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಸೋಮವಾರ ನಡೆದ ಸೆಮಿಫೈನಲ್‌ನಲ್ಲಿ ಕರ್ನಾಟಕ 3–1 ಗೋಲುಗಳಿಂದ ಹರಿಯಾಣ ತಂಡವನ್ನು ಮಣಿಸಿತು. ಮಂಗಳವಾರ ನಡೆಯಲಿರುವ ಫೈನಲ್‌ನಲ್ಲಿ ರಾಜ್ಯ ತಂಡ, ಉತ್ತರ ಪ್ರದೇಶದ ಸವಾಲು ಎದುರಿಸಲಿದೆ. ಇನ್ನೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಉತ್ತರ ಪ್ರದೇಶ, ಟೈ ಬ್ರೇಕರ್‌ನಲ್ಲಿ 6–5ರಲ್ಲಿ ಮಹಾರಾಷ್ಟ್ರ ಎದುರು ಗೆದ್ದಿತು.

ಹರಿಯಾಣ ಎದುರಿನ ಸೆಮಿಫೈನಲ್ ಪಂದ್ಯದಲ್ಲಿ ಆಭರಣ್ ಸುದೇವ್ ಅವರು ನಾಲ್ಕನೇ ನಿಮಿಷದಲ್ಲಿ ಗೋಲು ಗಳಿಸಿ ಕರ್ನಾಟಕಕ್ಕೆ ಮುನ್ನಡೆ ಗಳಿಸಿಕೊಟ್ಟರು. ಆದರೆ ತಿರುಗೇಟು ನೀಡಿದ ಹರಿಯಾಣ ತಂಡಕ್ಕೆ ಕೊಹಿನೂರ್ ಪ್ರೀತ್ ಸಿಂಗ್ ಅವರು 17ನೇ ನಿಮಿಷದಲ್ಲಿ ಸಮಬಲ ತಂದಿತ್ತರು.

ಮೂರನೇ ಕ್ವಾರ್ಟರ್‌ನಲ್ಲಿ ಯಾವುದೇ ಗೋಲುಗಳು ಬರಲಿಲ್ಲ. ಕೊನೆಯ ಕ್ವಾರ್ಟರ್‌ನಲ್ಲಿ ಚುರುಕಿನ ಆಟವಾಡಿದ ಕರ್ನಾಟಕ ತಂಡಕ್ಕೆ ನಿಕಿನ್ ತಿಮ್ಮಯ್ಯ (47ನೇ ನಿ.) ಮತ್ತು ಹರೀಶ್ ಮುಟಗರ್ (51) ಅವರು ಗೋಲು ಗಳಿಸಿ ಗೆಲುವು ತಂದಿತ್ತರು.

ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರ ನಡುವಣ ಸೆಮಿಫೈನಲ್ ಪಂದ್ಯದಲ್ಲಿ ಜಿದ್ದಾಜಿದ್ದಿನ ಹೋರಾಟ ಕಂಡುಬಂತು. ನಿಗದಿತ ಅವಧಿ ಕೊನೆಗೊಂಡಾಗ ಎರಡೂ ತಂಡಗಳು 3–3 ಗೋಲುಗಳಿಂದ ಸಮಬಲ ಸಾಧಿಸಿದ್ದವು. ಟೈ ಬ್ರೇಕರ್‌ನಲ್ಲಿ ಉತ್ತರ ಪ್ರದೇಶದ ಕೈಮೇಲಾಯಿತು.

ಸೆಮಿಗೆ ಸುಮಿತ್, ಸಂಜೀತ್ (ಪಿಟಿಐ ವರದಿ): ಬಾಕ್ಸರ್‌ಗಳಾದ ಸುಮಿತ್ ಕುಂದು, ಜಮುನಾ ಬೋರೊ ಮತ್ತು ಸಂಜೀತ್ ಅವರು ವಿವಿಧ ವಿಭಾಗಗಳಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ಪ್ರೊ ಕಬಡ್ಡಿ: ಜಯದ ಖಾತೆ ತೆರೆದ ಯು ಮುಂಬಾ

ದಬಂಗ್ ಡೆಲ್ಲಿಗೆ ಎರಡನೇ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೀನ್ ಕುಮಾರ್ ಅಮೋಘ ದಾಳಿಯ ಬಲದಿಂದ ದಬಂಗ್ ಡೆಲ್ಲಿ ತಂಡವು ಸೋಮವಾರ ನಡೆದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಡೆಲ್ಲಿ ತಂಡವು 53–33ರಿಂದ ಗುಜರಾತ್ ಜೈಂಟ್ಸ್ ಎದುರು ಜಯಭೇರಿ ಬಾರಿಸಿತು.

ಡೆಲ್ಲಿ ತಂಡದ ನಾಯಕ ನವೀನಕುಮಾರ್ 15 ಅಂಕಗಳನ್ನು ಸೂರೆ ಮಾಡಿದರು. ಅವರಿಗೆ ತಕ್ಕ ಪೈಪೋಟಿ ನೀಡಿದ ಗುಜರಾತ್ ತಂಡದ ರೇಡರ್ ರಾಕೇಶ್ ಕೂಡ 15 ಅಂಕಗಳನ್ನು ಗಳಿಸಿದರು. ಡೆಲ್ಲಿ ತಂಡದ ಮತ್ತೊಬ್ಬ ರೇಡರ್ ಮಂಜೀತ್ (10) ಹಾಗೂ ಡಿಫೆಂಡರ್ ಕ್ರಿಷನ್ (7) ಮಹತ್ವದ ಕಾಣಿಕೆ ನೀಡಿದರು.

ಪಂದ್ಯದ ಮೊದಲಾರ್ಧದಲ್ಲಿ ಡೆಲ್ಲಿ ತಂಡವು 21–17 ರ ಅಲ್ಪ ಮುನ್ನಡೆ ಗಳಿಸಿತ್ತು. ಎರಡನೇ ಅವಧಿಯಲ್ಲಿ ತನ್ನ ವೇಗ ಹೆಚ್ಚಿಸಿದ ತಂಡವು 32–16ರ ದೊಡ್ಡ ಅಂತರ ಸಾಧಿಸಿತು. ಪಂದ್ಯದಲ್ಲಿ ಒಟ್ಟು 20 ಅಂಕಗಳ ಅಂತರದ ಜಯ ಸಾಧಿಸಿತು. ಟೂರ್ನಿಯಲ್ಲಿ ಇದು ಡೆಲ್ಲಿಗೆ ಎರಡನೇ ಗೆಲುವು.

ಮುಂಬೈಗೆ ಮೊದಲ ಜಯ

ಜಯ್ ಭಗವಾನ್ (6) ಹಾಗೂ ಗುಮಾನ್ ಸಿಂಗ್ (5) ಅವರ ಅಮೋಘ ಆಟದ ಬಲದಿಂದ ಯು ಮುಂಬಾ ತಂಡವು ದಿನದ ಎರಡನೇ ಪಂದ್ಯದಲ್ಲಿ ಯುಪಿ ಯೋಧಾ ವಿರುದ್ಧ 30–23ರಿಂದ ಗೆದ್ದಿತು.

ಮೊದಲಾರ್ಧದಲ್ಲಿ ಮುಂಬಾ ತಂಡವು 14–9ರ ಮುನ್ನಡೆ ಗಳಿಸಿತ್ತು. ಎರಡನೇ ಅವಧಿಯಲ್ಲಿ ಯೋಧಾಸ್ ತಂಡವು ಸ್ವಲ್ಪ ಪೈಪೋಟಿಯೊಡ್ಡಿತು. ಕೊನೆಗೂ ಏಳು ಅಂಕಗಳ ಅಂತರದಿಂದ ಜಯ ಸಾಧಿಸುವಲ್ಲಿ ತಂಡವು ಯಶಸ್ವಿಯಾಯಿತು. ಮುಂಬಾ ತಂಡಕ್ಕೆ ಇದು ಎರಡನೇ ಪಂದ್ಯ ಹಾಗೂ ಮೊದಲ ಜಯವಾಗಿದೆ.

ಇಂದಿನ ಪಂದ್ಯಗಳು: ಹರಿಯಾಣ ಸ್ಟೀಲರ್ಸ್–ತಮಿಳ್ ತಲೈವಾಸ್ (ರಾತ್ರಿ 7.30) ಪಟ್ನಾ ಪೈರೆಟ್ಸ್–ತೆಲುಗು ಟೈಟನ್ಸ್ (ರಾತ್ರಿ 8.30)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್ ಆ್ಯಪ್



ಯುಪಿ ಯೋಧಾ ದಾಳಿಗಾರನನ್ನು ಕಟ್ಟಿಹಾಕಲು ಯತ್ನಿಸಿದ ಯು ಮುಂಬಾ ಆಟಗಾರರು –ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಡೆಲ್ಲಿ	2	2	0	0	10
ಬೆಂಗಳೂರು	2	2	0	0	10
ಜೈಪುರ	2	1	1	0	6
ಯು.ಪಿ	2	1	1	0	6
ಬೆಂಗಾಲ್	2	1	1	0	5
ಹರಿಯಾಣ	1	1	0	0	5

ಐಎಸ್‌ಎಲ್: ಚೆನ್ನೈಯಿನ್‌ಗೆ ರೋಚಕ ಗೆಲುವು

ಕೋಲ್ಕತ್ತ (ಪಿಟಿಐ): ಚೆನ್ನೈಯಿನ್ ಎಫ್‌ಸಿ ತಂಡ ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 2–1 ಗೋಲುಗಳಿಂದ ಎಟಿಕೆ ಮೋಹನ್ ಬಾಗನ್ ತಂಡವನ್ನು ಮಣಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಒಂದು ಗೋಲಿನ ಹಿನ್ನಡೆಯಲ್ಲಿದ್ದ ಚೆನ್ನೈಯಿನ್ ಮರುಹೋರಾಟ ನಡೆಸುವಲ್ಲಿ ಯಶಸ್ವಿಯಾಯಿತು.

ಮನ್ವೀರ್ ಸಿಂಗ್ ಅವರು 27ನೇ ನಿಮಿಷದಲ್ಲಿ ಮೋಹನ್ ಬಾಗನ್‌ಗೆ ಮುನ್ನಡೆ ತಂದಿತ್ತರು. ಕ್ವಾಮಿ ಕರ್ಕೈರಿ (64ನೇ ನಿ.) ಮತ್ತು ರಹೀಂ ಅಲಿ (83) ಅವರು ಗೋಲು ಗಳಿಸಿ ಚೆನ್ನೈಯಿನ್ ಗೆಲುವಿಗೆ ಕಾರಣರಾದರು.

ರೊನಾಲ್ಡೊ 700 ಗೋಲು!


ಲಿವರ್‌ಪೂಲ್, ಇಂಗ್ಲೆಂಡ್ (ರಾಯಿಟರ್ಸ್): ಪೋರ್ಚುಗಲ್‌ನ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಕ್ಲಬ್ ಫುಟ್‌ಬಾಲ್‌ನಲ್ಲಿ 700 ಗೋಲುಗಳನ್ನು ಗಳಿಸಿದ ಸಾಧನೆ ಮಾಡಿದರು.

ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್‌ಗೆ ಆಡುವ ರೊನಾಲ್ಡೊ, ಭಾನುವಾರ ನಡೆದ ಇಂಗ್ಲಿಷ್ ಪ್ರೀಮಿಯರ್ ಲೀಗ್‌ನ ಎವರ್ಟನ್ ತಂಡದ ವಿರುದ್ಧದ ಪಂದ್ಯದಲ್ಲಿ ಈ ಮೈಲಿಗಲ್ಲು ಸಾಧಿಸಿದರು. ಬದಲಿ ಆಟಗಾರನಾಗಿ ಕಣಕ್ಕಿಳಿದ ಅವರು 44 ನೇ ನಿಮಿಷದಲ್ಲಿ ಗೋಲು ಗಳಿಸಿದರು. ಈ ಪಂದ್ಯವನ್ನು ಮ್ಯಾಂಚೆಸ್ಟರ್ ಯುನೈಟೆಡ್ 2–1 ಗೋಲುಗಳಿಂದ ಗೆದ್ದಿತು.

ಪ್ರೀಮಿಯರ್ ಲೀಗ್‌ನ ಈ ಋತುವಿನಲ್ಲಿ ಮೊದಲ ಗೋಲು ಗಳಿಸಿದ 37 ವರ್ಷದ ರೊನಾಲ್ಡೊ ಕ್ಲಬ್ ಫುಟ್‌ಬಾಲ್‌ನಲ್ಲಿ ಗೋಲುಗಳ ಸಂಖ್ಯೆ 700ಕ್ಕೆ ಹೆಚ್ಚಿಸಿಕೊಂಡರು.

ಸರಿಯಾಗಿ 20 ವರ್ಷಗಳ ಹಿಂದೆ 17ನೇ ವಯಸ್ಸಿನಲ್ಲಿ ಅವರು ಸ್ಪೋರ್ಟಿಂಗ್ ಲಿಸ್ಬನ್ ಪರ ಮೊದಲ ಗೋಲು ಗಳಿಸಿದ್ದರು.

ರೊನಾಲ್ಡೊ ಅವರು ಮ್ಯಾಂಚೆಸ್ಟರ್ ಯುನೈಟೆಡ್ ಪರ 144, ರಿಯಲ್ ಮ್ಯಾಡ್ರಿಡ್‌ಗೆ 450, ಯುವೆಂಟಸ್‌ಗೆ 101 ಹಾಗೂ ಸ್ಪೋರ್ಟಿಂಗ್ ಲಿಸ್ಬನ್‌ಗೆ 5 ಗೋಲುಗಳನ್ನು ಗಳಿಸಿದ್ದಾರೆ. ಇದಲ್ಲದೆ ಪೋರ್ಚುಗಲ್ ರಾಷ್ಟ್ರೀಯ ತಂಡದ ಪರ 117 ಗೋಲುಗಳನ್ನು ಹೊಡೆದಿದ್ದಾರೆ.



ರೊನಾಲ್ಡೊ